

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 21 ಬುಧವಾರ 2022

ಸಂಪುಟ: 43 | ಸಂಚಿಕೆ: 156 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಧಾರ್ಮಿಕ ವಿಧಿ–ವಿಧಾನ ನೆರವೇರಿಸಿದ ನಂತರ ಸಿಂಹಾಸನ ಜೋಡಣೆ

ಖಾಸಗಿ ದರ್ಬಾರ್‌ಗೆ ಸಿಂಹಾಸನ ಸಿದ್ಧ

ಭಾರೀ ಬಿಗಿ ಬಂದೋಬಸ್ತ್, ಅರಮನೆ ಪ್ರವೇಶಕ್ಕೆ ಪ್ರವಾಸಿಗರಿಗೆ ನಿರ್ಬಂಧ

ಮೈಸೂರು, ಸೆ.20(ಎಂಟಿವೈ)– ನಾಡಹಬ್ಬ ದಸರಾ ವೇಳೆ ಮೈಸೂರು ಅರಮನೆಯಲ್ಲಿ ನಡೆಯಲಿರುವ ಖಾಸಗಿ ದರ್ಬಾರ್ ಪ್ರಮುಖ ಅಂಗ ರತ್ನ ಖಚಿತ ಚಿನ್ನದ ಸಿಂಹಾಸನ ಹಾಗೂ ಬೆಳ್ಳಿಯ ಭದ್ರಾಸನವನ್ನು ಬಿಗಿ ಭದ್ರತೆಯಲ್ಲಿ ಮಂಗಳವಾರ ಜೋಡಣೆ ಮಾಡಲಾಯಿತು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಸೆ.26ರಿಂದ ಆರಂಭವಾಗಲಿದ್ದು, ಯದು ವಂಶದ ಪರಂಪರೆಯಲ್ಲಿ ಖಾಸಗಿ ದರ್ಬಾರ್ ಪ್ರಮುಖ ಧಾರ್ಮಿಕ ವಿಧಿ ವಿಧಾನಗಳಲ್ಲಿ ಒಂದಾಗಿದೆ. ನವರಾತ್ರಿಯ ವೇಳೆ ಹಲವು ಕಟ್ಟುಪಾಡುಗಳೊಂದಿಗೆ ಒಂಭತ್ತು ದಿನವೂ ಖಾಸಗಿ ದರ್ಬಾರ್ ನಡೆಯಲಿದೆ. ಶತಮಾನಗಳ ಇತಿಹಾಸವಿರುವ ರತ್ನ ಖಚಿತ ಸಿಂಹಾಸನದ ಮೇಲೆ ಈಗಲೂ ರಾಜವಂಶಸ್ಥರು ಆಸೀನರಾಗಿ ವಿವಿಧ ವಿಧಿವಿಧಾನಗಳನ್ನು ಪೂರೈಸಲಿದ್ದಾರೆ. ನವರಾತ್ರಿ ಆರಂಭಕ್ಕೆ ಕೇವಲ 5 ದಿನವಷ್ಟೇ ಬಾಕಿಯಿದ್ದು, ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ 7 ರಿಂದ 10.58 ರೊಳಗೆ ಸಲ್ಲುವ ಶುಭ ಲಗ್ನದಲ್ಲಿ ವಿವಿಧ ಪೂಜಾ ಕೈಂಕರ್ಯ ಜರುಗಿದ ಬಳಿಕ ರತ್ನ ಖಚಿತ ಸಿಂಹಾಸನ ಜೋಡಣಾ ಪ್ರಕ್ರಿಯೆ ಆರಂಭಿಸಿ, ಮಧ್ಯಾಹ್ನ 1.15ರೊಳಗೆ ಪೂರ್ಣಗೊಳಿಸಿ, ಬಿಳಿ ಪರದೆ ಮುಚ್ಚಲಾಯಿತು.

ಹೋಮ ಹವನ: ದರ್ಬಾರ್ ಹಾಲ್‌ನಲ್ಲಿ ಸಿಂಹಾಸನ ಜೋಡಣೆ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ 7 ರಿಂದ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ಅರಮನೆಯ ಪುರೋಹಿತರಾದ ಶ್ರೀಹರಿ, ಕುಮಾರ್ ಹಾಗೂ ಶ್ಯಾಮ್ ದೀಕ್ಷಿತ್ ನೇತೃತ್ವದಲ್ಲಿ ಬೆಳಗ್ಗೆ 8 ಗಂಟೆಗೆ ದರ್ಬಾರ್ ಹಾಲ್‌ನಲ್ಲಿ ಗಣಪತಿ ಹೋಮ, ಚಾಮುಂಡಿ ಪೂಜೆ, ಶಾಂತಿ ಹೋಮ, ನವಗ್ರಹ ಪೂಜೆ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಜರುಗಿದವು. ನಂತರ ಪೂರ್ಣಾಹುತಿ ವೇಳೆಗೆ ದರ್ಬಾರ್ ▶ 9ನೇ ಪುಟಕ್ಕೆ



ವಿಧಿ–ವಿಧಾನ ಅನ್ವಯ ಜೋಡಣೆ

ಪೂರ್ಣಾಹುತಿ ನೆರವೇರಿದ ನಂತರ ಅರಮನೆಯ 8 ಮಂದಿ ಸಿಬ್ಬಂದಿಗಳು ಶಸ್ತ್ರಸಜ್ಜಿತ ಪೊಲೀಸರ ಬಿಗಿ ಬಂದೋಬಸ್ತ್‌ನಲ್ಲಿ ಸ್ಟ್ರಾಂಗ್ ರೂಮ್‌ನಲ್ಲಿರುವ ಸಿಂಹಾಸನದ ಬಿಡಿ ಭಾಗಗಳನ್ನು ದರ್ಬಾರ್ ಹಾಲ್‌ಗೆ ತಂದರು. ಬೆಳಗ್ಗೆ 10.43ರಿಂದ 10.58ರೊಳಗೆ ಸಲ್ಲುವ ಶುಭ ಲಗ್ನದಲ್ಲಿ ದರ್ಬಾರ್‌ಹಾಲ್‌ನಲ್ಲಿ ಸಿಂಹಾಸನವನ್ನು ಹಾಗೂ ಕನ್ನಡಿ ತೊಟ್ಟಿಯಲ್ಲಿ ಭದ್ರಾಸನವನ್ನು ಜೋಡಿಸುವ ಪ್ರಕ್ರಿಯೆ ಆರಂಭವಾಯಿತು. ಕಳೆದ ವರ್ಷ ಖಾಸಗಿ ದರ್ಬಾರ್ ನಂತರ ಸ್ಟ್ರಾಂಗ್ ರೂಮ್‌ನಲ್ಲಿ ಸಿಂಹಾಸನವನ್ನು 8 ಬಿಡಿ ಭಾಗಗಳಾಗಿಯೂ, ಬೆಳ್ಳಿಯ ಭದ್ರಾಸನವನ್ನು 6 ಬಿಡಿ ಭಾಗಗಳಾಗಿಯೂ ವಿಂಗಡಿಸಿ ಸುರಕ್ಷಿತವಾಗಿರಿಸಲಾಗಿತ್ತು.

ಇನ್ನೆರಡು ದಿನದಲ್ಲಿ ವೀಕ್ಷಣೆಗೆ ಲಭ್ಯ

ಜೋಡಣಾ ಕಾರ್ಯ ಪೂರ್ಣಗೊಂಡ ನಂತರ ಮಧ್ಯಾಹ್ನ 1.30ಕ್ಕೆ ಸಿಂಹಾಸನದ ಮೇಲೆ ಪರದೆ ಬಿಡಲಾಯಿತು. ಅಲ್ಲದೇ ಮಧ್ಯಾಹ್ನದ 2 ಗಂಟೆ ನಂತರ ಅರಮನೆ ವೀಕ್ಷಣೆಗೆ ಬಂದ ಪ್ರವಾಸಿಗರು ದರ್ಬಾರ್ ಹಾಲ್ ಪ್ರವೇಶಿಸದಂತೆ ಬ್ಯಾರಿಕೇಡ್ ಅಳವಡಿಸಲಾಯಿತು. ಪ್ರವಾಸಿಗರು ದರ್ಬಾರ್ ಹಾಲ್ ಕಡೆ ಹೋಗದಂತೆ ಎಚ್ಚರ ವಹಿಸಲಾಗಿತ್ತು. ರಾಜವಂಶಸ್ಥರು ಸಮ್ಮತಿಸಿದರೆ ಬುಧವಾರ ಅಥವಾ ಗುರುವಾರದಿಂದ ಅರಮನೆ ವೀಕ್ಷಣೆಗೆ ಬರುವ ಪ್ರವಾಸಿಗರು ಪ್ರತ್ಯೇಕ ಟಿಕೆಟ್ ಪಡೆದು ಸಿಂಹಾಸನ ವೀಕ್ಷಣೆಗೆ ಅವಕಾಶ ನೀಡಲಾಗುತ್ತದೆ ಎಂದು ಅರಮನೆಯ ಮೂಲಗಳು ತಿಳಿಸಿವೆ.

ಉದ್ಯೋಗಕ್ಕೆ ಲಂಚವಾಗಿ ಅಕ್ಕಿ, ರಾಗಿ, ಜೋಳ...!

ಪಿಎಸ್‌ಐ ನೇಮಕಾತಿ ಹಗರಣದ ಮೇಲಿನ ಚರ್ಚೆ ವೇಳೆ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ



ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಿರತ ಉದ್ಯೋಗಾಕಾಂಕ್ಷಿಗಳು ನೀಡಿದ ದವಸ–ಧಾನ್ಯ ಸರ್ಕಾರಕ್ಕೆ ಒಪ್ಪಿಸಿದ ಮಾಜಿ ಮುಖ್ಯಮಂತ್ರಿ

ಬೆಂಗಳೂರು, ಸೆ.20– ಉದ್ಯೋಗಾಕಾಂಕ್ಷಿಗಳು ನಮಗೆ ಲಂಚ ಕೊಟ್ಟು ಉದ್ಯೋಗ ಪಡೆಯುವ ಶಕ್ತಿ ಇಲ್ಲ. ನಮ್ಮ ಮನೆಯಿಂದ ತಂದೆ–ತಾಯಂದಿರು ಬೆಳೆದಿರುವ ಅಕ್ಕಿ, ರಾಗಿ, ಜೋಳ ಮುಂತಾದ ಧಾನ್ಯಗಳನ್ನು ಕೊಟ್ಟಿದ್ದಾರೆ. ಇದನ್ನು ತೆಗೆದುಕೊಂಡು ಹೋಗಿ ಸರ್ಕಾರಕ್ಕೆ ಕೊಡಿ ಎಂದು ಹೇಳಿ ಕಳುಹಿಸಿದ್ದಾರೆ ಎಂದು ಹೇಳುವ ಮೂಲಕ ವಿಪಕ್ಷ ನಾಯಕ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಇಂದು ತೀವ್ರ ವಾಗ್ದಾಳಿ ನಡೆಸಿದರು.

ವಿಧಾನಸಭೆಯಲ್ಲಿ ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ಕುರಿತಂತೆ ನಿಯಮ–69ರಡಿ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಿದ್ದರಾಮಯ್ಯನವರು, ಬೆಳಗ್ಗೆ ಫ್ರೀಡಂ ಪಾರ್ಕ್ ಬಳಿ ಹೋಗಿ, ಅಲ್ಲಿ ಧರಣಿ ನಡೆಸುತ್ತಿರುವ ಪಿಎಸ್‌ಐ ನೇಮಕಾತಿ ಹಗರಣದಿಂದ ಉದ್ಯೋಗ ವಂಚಿತ ನಿರುದ್ಯೋಗಿಗಳ ಭೇಟಿಯಾಗಿದ್ದೆ. ಪ್ರತಿಭಟನಾನಿರತ ಅಭ್ಯರ್ಥಿಗಳು, ನಾವು ಲಂಚ ಕೊಡಲು ಆಗಲ್ಲ. ನಮ್ಮ ತಂದೆ–ತಾಯಂದಿರು ಜಮೀನಿನಲ್ಲಿ ಬೆಳೆದ ಧಾನ್ಯವನ್ನು ಕೊಟ್ಟಿದ್ದಾರೆ. ಇದನ್ನು ಸರ್ಕಾರಕ್ಕೆ ಕೊಡಿ ಎಂದು ನನ್ನ ಕೈಯ್ಯಲ್ಲಿ ಕೊಟ್ಟು ಕಳುಹಿಸಿದ್ದರು. ಲಂಚದ ಭಾಗವಾಗಿ ಈ ಧಾನ್ಯಗಳನ್ನೇ ಕೊಡಿ ಎಂದು ಹೇಳಿದ್ದರು. ಆ ಧಾನ್ಯವನ್ನು ಇಲ್ಲೇ ಇಟ್ಟಿದ್ದೆ. ಆದರೆ ಈಗ ಕಾಣುತ್ತಿಲ್ಲ ಎಂದು ತಾವು ಫ್ರೀಡಂ ಪಾರ್ಕ್‌ನಿಂದ ತಂದಿದ್ದ ಧಾನ್ಯದ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್ ವಿಶ್ವೇಶ್ವರ ಹೆಗ್ಡೆ ಕಾಗೇರಿ, ನೀವು ಅಲ್ಲಿ ಕೊಟ್ಟಿದ್ದೆಲ್ಲಾ ಇಲ್ಲಿ ತರೋದಾ? ಎಂದು ಛೇಡಿಸಿದರು. ಅದಕ್ಕೆ ಸಿದ್ದರಾಮಯ್ಯ ನಾನು ತರೋಕೆ ಹೋಗಿರಲಿಲ್ಲ. ಅಲ್ಲಿ ಕೊಟ್ಟರು ಎಂದು ಸಮಜಾಯಿಷಿ ನೀಡಿದರು. ಇದಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಸೇರಿದಂತೆ ಆಡಳಿತಾರೂಢ ಶಾಸಕರು ಆಕ್ಷೇಪಿಸಿದರು. ಆದರೂ ಕೊನೆಗೆ ▶ 9ನೇ ಪುಟಕ್ಕೆ

ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ: ಸಿಐಡಿ ತನಿಖೆ



ಬೆಂಗಳೂರು: ಕಳೆದ 2015–16ರಲ್ಲಿ ಅರ್ಜಿ ಸಲ್ಲಿಸದೆ, ಪರೀಕ್ಷೆ ಬರೆಯದೆ, ಅರ್ಹತೆ ಇಲ್ಲದೇ ಶಿಕ್ಷಕರಾಗಿ ನೇಮಕವಾಗಿದ್ದ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ವಿಧಾನಸಭೆಯಲ್ಲಿ ತಿಳಿಸಿದ್ದಾರೆ. ಇಂದು ಶೂನ್ಯವೇಳೆಯಲ್ಲಿ ಶಾಸಕ ಪಿ.ರಾಜೀವ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಎಸ್‌ಎಸ್‌ಎಲ್‌ಸಿ ಮಂಡಳಿಯ ನಿರ್ದೇಶಕರಿಂದ ತನಿಖೆ ನಡೆಸಿದಾಗ ಮೇಲ್ನೋಟಕ್ಕೆ ಅಕ್ರಮ ನಡೆದಿರುವುದು ಬೆಂಗಳೂರು ವಿಭಾಗದಲ್ಲಿ ಗೊತ್ತಾದ ನಂತರ ಸಿಐಡಿಗೆ ವಹಿಸಲಾಗಿದೆ ಎಂದರು. ಸಿಇಟಿ ಬರೆಯದೇ, ಅರ್ಹತೆ ಪಡೆಯದೆ, ಅರ್ಜಿ ಸಲ್ಲಿಸದೆ 16 ಮಂದಿ ಶಿಕ್ಷಕರಾಗಿ ನೇಮಕವಾಗಿರುವುದು ಪತ್ತೆಯಾಗಿದ್ದು, ಅವರನ್ನು ಬಂಧಿಸಲಾಗಿದೆ. ಈ ರೀತಿ 35 ರಿಂದ 40 ಮಂದಿ ಶಿಕ್ಷಕರಾಗಿ ನೇಮಕವಾಗಿರುವ ಮಾಹಿತಿ ಇದೆ. ಬೆಂಗಳೂರು ಅಷ್ಟೇ ಅಲ್ಲ, ಬೇರೆ ಬೇರೆ ವಿಭಾಗದಲ್ಲೂ ಈ ಬಗ್ಗೆ ಪರಿಶೀಲಿಸಲಾಗುತ್ತದೆ. ಸಿಐಡಿ ವರದಿ ಬಂದ ನಂತರ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ▶ 9ನೇ ಪುಟಕ್ಕೆ

ಚಾಮರಾಜನಗರದಲ್ಲಿ ಅಮಾನವೀಯ ಘಟನೆ

25 ದಿನದ ಗಂಡು ಮಗುವನ್ನು 50 ಸಾವಿರಕ್ಕೆ ಮಾರಿದ ತಂದೆ!

ಚಾಮರಾಜನಗರ, ಸೆ.20(ಎಸ್‌ಎಸ್)– ಹಣಕ್ಕಾಗಿ ತಂದೆಯೇ 25 ದಿನದ ಗಂಡು ಮಗುವನ್ನು ಮಾರಾಟ ಮಾಡಿರುವ ಅಮಾನವೀಯ ಘಟನೆ ಚಾಮರಾಜನಗರದಲ್ಲಿ ತಡವಾಗಿ ಬೆಳಕಿಗೆ ಬಂದಿದ್ದು, ಕಂದನಿಗಾಗಿ ತಾಯಿಯ ಆಕ್ರಂದನ ಕರುಳು ಹಿಂಡುವಂತಿದೆ. ನಗರದ ನ್ಯಾಯಾಲಯದ ರಸ್ತೆಯ ನಿವಾಸಿ ಬಸವ(35) ತನ್ನ ಮಗುವನ್ನು ಮಾರಾಟ ಮಾಡಿದ್ದು, ಅವರ ಪತ್ನಿ ನಾಗವೇಣಿ ಈಗ ಮಗುವಿಗಾಗಿ ಅಂಗಲಾಚುತ್ತಿದ್ದಾರೆ. ಹೋಟೆಲೊಂದರಲ್ಲಿ ಕೆಲಸ ಮಾಡುತ್ತಿದ್ದ ಬಸವ, ಪತ್ನಿಯ ತೀವ್ರ ವಿರೋಧದ ನಡುವೆಯೂ ತನ್ನ 25 ದಿನಗಳ ಗಂಡು ಮಗುವನ್ನು ಬೆಂಗಳೂರಿನ ವ್ಯಕ್ತಿಗೆ ಮಾರಾಟ ಮಾಡಿದ್ದಾನೆ.

ಘಟನೆ ವಿವರ: ಬಸವ ಹಾಗೂ ನಾಗವೇಣಿ ದಂಪತಿಗೆ ಈಗಾಗಲೇ 7 ವರ್ಷದ ಗಂಡು ಮಗುವಿತ್ತು. ಆ.22ರಂದು ನಾಗವೇಣಿ ಅವರು ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ 2ನೇ ಗಂಡು ಮಗುವಿಗೆ ಜನ್ಮ ನೀಡಿದ್ದರು. ಮಗು ಹುಟ್ಟಿದ 25 ದಿನಗಳಲ್ಲೇ ಬಸವ ಸಹೋದ್ಯೋಗಿಯೊಬ್ಬರ ಮೂಲಕ ಸೆ.15ರಂದು ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ 50 ಸಾವಿರ ರೂ.ಗೆ ಮಗುವನ್ನು ಮಾರಾಟ ಮಾಡಿದ್ದಾನೆ. ಇದಕ್ಕೆ ಬಸವ ಅವರ ಪತ್ನಿ ನಾಗವೇಣಿ ವಿರೋಧ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಲೈಂಗಿಕ ಅಲ್ಪ ಸಂಖ್ಯಾತರ ಪರ ಕೆಲಸ ಮಾಡುವ ಸಮತಾ ಸೊಸೈಟಿಯ ▶ 9ನೇ ಪುಟಕ್ಕೆ

“ ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿಯ ಚಿಕಿತ್ಸೆ ಹಾಗೂ ಮಾಡಿದ್ದ ಸಾಲ ತೀರಿಸಲು ಹಣದ ಅವಶ್ಯಕತೆ ತುಂಬಾ ಇತ್ತು. ಹೀಗಾಗಿ ಮಗುವನ್ನು ಬೆಂಗಳೂರಿನ ವ್ಯಕ್ತಿಯೊಬ್ಬರಿಗೆ 50 ಸಾವಿರ ರೂ.ಗೆ ಮಾರಾಟ ಮಾಡಿದೆ.

–ಬಸವ, ಮಗುವಿನ ತಂದೆ.

“ ಮಗುವನ್ನು ಮಾರಾಟ ಮಾಡಿದ್ದಾರೆಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಷಕರನ್ನು ವಿಚಾರಣೆ ಮಾಡಿದ್ದೇವೆ. ಮಗು ಮಾರಾಟ ಮಾಡಿದ ವ್ಯಕ್ತಿ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಮಗುವನ್ನು ಪಡೆದಿರುವ ಬೆಂಗಳೂರಿನ ವ್ಯಕ್ತಿಯನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗಿದೆ.

–ಗೀತಾ ಲಕ್ಷ್ಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ.

ಪ್ರವಾಸಿ ವಾಹನಗಳಿಗೆ ಮೈಸೂರು ನಗರ, ಕೆಆರ್‌ಎಸ್ ವ್ಯಾಪ್ತಿ ತೆರಿಗೆ ವಿನಾಯ್ತಿ

ಮೈಸೂರು, ಸೆ.20(ಎಸ್‌ಪಿಎನ್)–ಮೈಸೂರು ದಸರಾ ಮಹೋತ್ಸವಕ್ಕೆ ಅಂತರ ರಾಜ್ಯದಿಂದ ಮೈಸೂರು ನಗರ ಮತ್ತು ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಜಲಾಶಯ ವೀಕ್ಷಿಸಲು ಆಗಮಿಸುವ ಪ್ರವಾಸಿಗರ ವಾಹನಗಳಿಗೆ ಮಾತ್ರ ತೆರಿಗೆ ವಿನಾಯಿತಿ ನೀಡಿ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ 1957ರ (ಕರ್ನಾಟಕ ಕಾಯ್ದೆ 35/1957) ಕಲಂ 16(1) ಅಡಿಯಲ್ಲಿ ಪ್ರದತ್ತವಾದ ▶ 9ನೇ ಪುಟಕ್ಕೆ

ಪಿಯು ಕಾಲೇಜಿಗೆ ಸೆ.26ರಿಂದ ಅ.6ರವರೆಗೆ ದಸರಾ ರಜೆ

ಮೈಸೂರು, ಸೆ.20(ಎಸ್‌ಪಿಎನ್)–ಮೈಸೂರು ಜಿಲ್ಲಾ ವ್ಯಾಪ್ತಿಯ ಪದವಿ ಪೂರ್ವ ಕಾಲೇಜುಗಳಿಗೆ ಸೆ.26 ರಿಂದ ಅ.6 ರವರೆಗೆ ಮಧ್ಯಂತರ ರಜೆ(ದಸರಾ)ಯನ್ನು ಷರತ್ತು ವಿಧಿಸಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಆದೇಶಿಸಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಎಂದಿನಂತೆ ಅ.1ರಿಂದ 16ರವರೆಗೆ ನೀಡಲಾಗಿದ್ದ ದಸರಾ ರಜೆಯನ್ನು ಮಾರ್ಪಡಿಸಿ ಸೆ.26ರಿಂದ ಅ.8ರವರೆಗೆ ಜಿಲ್ಲೆಯ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಿಗೆ ದಸರಾ ರಜೆ ನೀಡಲಾಗಿದೆ.

ಶ್ರೀಗಂಧ ಕಳ್ಳ ಸಾಗಾಣೆದಾರನ ಬಂಧನ

ಮೈಸೂರು, ಸೆ.20(ಆರ್‌ಕೆ)–ಮೈಸೂರಿನ ಮುನೇಶ್ವರ ನಗರದ ಮನೆಯೊಂದರಲ್ಲಿ ಶ್ರೀಗಂಧದ ಮರ ಶೇಖರಿಸಿಟ್ಟುಕೊಂಡು ಕಳ್ಳ ಸಾಗಾಣೆ ದಂಧೆ ಮಾಡುತ್ತಿದ್ದವನನ್ನು ಸಿಸಿಬಿ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮೈಸೂರಿನ ಉದಯಗಿರಿಯ ಮುನೇಶ್ವರ ನಗರ ನಿವಾಸಿ ಅಜೀಜ್ ಪಾಷ ಅವರ ಮಗ ಖಿಜರ್ ಖಾನ್(40) ಬಂಧಿತ ಆರೋಪಿಯಾಗಿದ್ದು, ಆತನಿಂದ 50 ಕೆ.ಜಿ. ಶ್ರೀಗಂಧ ಮರದ ತುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಖಾತ್ರಿದಾರರ ಖಚಿತ ಮಾಹಿತಿ ಆಧರಿಸಿ ಸೆಪ್ಟೆಂಬರ್ 18ರಂದು ದಾಳಿ ನಡೆಸಿದ ಸಿಸಿಬಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್ ನೇತೃತ್ವದ ತಂಡಕ್ಕೆ ಮನೆಯಲ್ಲಿ ಶ್ರೀಗಂಧದ ತುಂಡುಗಳನ್ನಿರಿಸಿಕೊಂಡು ಕಳ್ಳ ಸಾಗಾಣೆ ದಂಧೆ ಮಾಡುತ್ತಿದ್ದುದು ಕಂಡು ಬಂದಿತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, 50 ಕೆ.ಜಿ. ಶ್ರೀಗಂಧದ ತುಂಡುಗಳನ್ನು ವಶಪಡಿಸಿಕೊಂಡಿದ್ದಾರೆ. ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಸಿಸಿಬಿ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಸಿಬ್ಬಂದಿಗಳಾದ ಜೋಸೆಫ್ ನರ್ಹೋನಾ, ಜನಾರ್ಧನ ರಾವ್, ಶ್ರೀನಿವಾಸಪ್ರಸಾದ್ ಪಾಲ್ಗೊಂಡಿದ್ದರು. 2021ರ ಡಿಸೆಂಬರ್ 14ರಂದು ಸಿಸಿಬಿ ಪೊಲೀಸರು ಮೈಸೂರಲ್ಲಿ ಸ್ಯಾಂಡಲ್‌ವುಡ್ ಸ್ಮಗ್ಲಿಂಗ್ ಜಾಲವೊಂದನ್ನು ಪತ್ತೆ ಮಾಡಿ ಸುಮಾರು 1 ಕೋಟಿ ರೂ. ಬೆಲೆ ಬಾಳುವ 700 ಕೆ.ಜಿ. ಶ್ರೀಗಂಧದ ಮರದ ತುಂಡುಗಳನ್ನು ವಶಪಡಿಸಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಹೋಟೆಲ್‌ನಲ್ಲಿ ಪುಂಡರ ಅಟ್ಟಹಾಸ

ಮೈಸೂರು, ಸೆ.20(ಆರ್‌ಕೆ)–ಕ್ಷುಲ್ಲಕ ವಿಚಾರಕ್ಕೆ ಪುಂಡರ ಗುಂಪೊಂದು ಹೋಟೆಲ್ ಮಾಲೀಕ ಹಾಗೂ ಸಿಬ್ಬಂದಿ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವ ಘಟನೆ ಮೈಸೂರಿನ ದೇವರಾಜ ಮೊಹಲ್ಲಾದ ಜಗನ್ಮೋಹನ ಅರಮನೆ ಬಳಿ ಭಾನುವಾರ ರಾತ್ರಿ ಸಂಭವಿಸಿದೆ. ಅಲ್ಲಿನ ನ್ಯೂ ಹೋಟೆಲ್ ಮೈಸೂರ್ ಮಾಲೀಕ ರಸ್ಮಲ್ ಹಾಗೂ ಮೂವರು ಸಿಬ್ಬಂದಿ ಮೇಲೆ ದೇವರಾಜ ಮೊಹಲ್ಲಾದ ನಾಲ್ವರು ಯುವಕರ ಗುಂಪು ಹಲ್ಲೆ ನಡೆಸಿ ಪರಾರಿಯಾಗಿದೆ. ಈ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಅಂದು ರಾತ್ರಿ 9.30 ಗಂಟೆ ವೇಳೆಗೆ ಹೋಟೆಲ್‌ಗೆ ಬಂದ ಯುವಕರು, ತಾವು ಕೇಳಿದ ಆಹಾರ ಇಲ್ಲ ಎಂದ ಕಾರಣಕ್ಕಾಗಿ ಜಗಳ ತೆಗೆದು ಸಿಬ್ಬಂದಿ ಮೇಲೆ ಎರಗಿದರು.

ಆ ವೇಳೆ ಜಗಳ ಬಿಡಿಸಲು ಹೋದ ಮಾಲೀಕ ರಸ್ಮಲ್‌ನನ್ನು ಏಕವಚನದಿಂದ ನಿಂದಿಸಿದ ಗುಂಪು, ಲಾಂಗ್, ಮಚ್ಚು ತೋರಿಸಿ ಹಲ್ಲೆಗೆ ಮುಂದಾಯಿತು. ಆ ಸಂದರ್ಭ ಮತ್ತೊಬ್ಬ ಗ್ರಾಹಕನ ಜೇಬಿನಿಂದ ಹಣ ಎಗರಿಸಲು ಯತ್ನಿಸಿದ ಪುಂಡರು, ಜನರು ಸುತ್ತುವರಿದಾಗ ಅಲ್ಲಿಂದ ಪರಾರಿಯಾಗಿದ್ದರು. ಹೋಟೆಲ್ ಮಾಲೀಕ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿದ್ದ ದೇವರಾಜ ಠಾಣೆ ಪೊಲೀಸರು, ಸಿಸಿ ಕ್ಯಾಮರಾ ಫುಟೇಜ್ ಪಡೆದು, ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಪಿಎಸ್‌ಐ ನೇಮಕಾತಿ ಅಕ್ರಮ

ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯ ಆಗಬಾರದು

- ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸರ್ಕಾರಕ್ಕೆ ಕಿವಿಮಾತು
- ರಾಜಕಾರಣಿಗಳು ಇದ್ದರೂ ತನಿಖೆ ಆಗಲಿ; ತನಿಖೆ ಹಾದಿ ತಪ್ಪಬಾರದು

ಬೆಂಗಳೂರು: ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಪ್ರಾಮಾಣಿಕವಾಗಿ ತೇರ್ಗಡೆಯಾಗಿರುವ ಅಭ್ಯರ್ಥಿಗಳಿಗೆ ಅನ್ಯಾಯ ಆಗಬಾರದು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾದ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ವಿಧಾನಸಭೆಯಲ್ಲಿಂದು ಪಿಎಸ್‌ಐ ನೇಮಕಾತಿ ಹಗರಣದ ಬಗ್ಗೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಪರೀಕ್ಷೆಯಲ್ಲಿ ಅಕ್ರಮ ಮಾಡಿದವರು ಈಗಾಗಲೇ ಬಂಧನಕ್ಕೆ ಒಳಗಾಗಿದ್ದಾರೆ. ಎಡಿಜಿಪಿ ಮಟ್ಟದ ಅಧಿಕಾರಿಯೊಬ್ಬರು ಸೇರಿದಂತೆ ಕೆಲವರು ಪೊಲೀಸ್ ಅಧಿಕಾರಿಗಳು, ತಪ್ಪೆಸಗಿದ ಅಭ್ಯರ್ಥಿಗಳನ್ನು ಕೂಡ ಪೊಲೀಸರು ಬಂಧಿಸಿದ್ದಾರೆ. ಆದರೆ, ಪ್ರಾಮಾಣಿಕವಾಗಿ ಪರೀಕ್ಷೆ ಬರೆದವರು ಅನ್ಯಾಯಕ್ಕೆ ತುತ್ತಾಗುತ್ತಿದ್ದಾರೆ ಎಂದರು.

ಈ ಹಗರಣದ ತನಿಖೆ ಗಂಭೀರ ಹಂತ ತಲುಪಿದೆ ಎಂಬುದು ನನ್ನ ಭಾವನೆ. ಈವರೆಗೆ 26 ಪೊಲೀಸರನ್ನು ಬಂಧನ ಮಾಡಲಾಗಿದೆ. ಬಹುತೇಕ ಪ್ರಕರಣಗಳಲ್ಲಿ ಆರೋಪಿತರು ಜಾಮೀನು ತೆಗೆದುಕೊಂಡು ಹೊರ ಬರುವುದನ್ನು ನೋಡಿದ್ದೇವೆ. ಆದರೆ, ಈ ಪ್ರಕರಣದಲ್ಲಿ ಆ ರೀತಿ ಆಗಿಲ್ಲ. ಅಂದರೆ, ತನಿಖೆ ಗಂಭೀರವಾಗಿ ನಡೆಯುತ್ತಿದೆ ಎಂದು ಅರ್ಥ ಎಂದು ಕುಮಾರಸ್ವಾಮಿ ಅವರು ಹೇಳಿದರು. ಮುಂದಿನ ದಿನಗಳಲ್ಲಿ ಸರ್ಕಾರ ಯಾವುದೇ ನೇಮಕಾತಿ ಮಾಡಲಿ, ಪಿಎಸ್‌ಐ ಹಗರಣದ ತನಿಖೆ ಮತ್ತು ಅಪರಾಧಿಗಳಿಗೆ ಶಿಕ್ಷೆ ಆಗುವುದು ಒಂದು ಪಾಠವಾಗಬೇಕು ಎಂದು ಮಾಜಿ ಮುಖ್ಯಮಂತ್ರಿಗಳು ಸಲಹೆ ಮಾಡಿದರು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದ ಕಾಲದಲ್ಲಿ ಕೂಡ ನೇಮಕಾತಿ ನಡೆಯಿತು. 2011ರಲ್ಲಿ ಕೆಪಿಎಸ್ಸಿ ನೇಮಕಾತಿ ನಡೆಯುವಾಗ ಯುವತಿ ಒಬ್ಬರು ಪತ್ರ ಬರೆದರು ಎನ್ನುವ ಕಾರಣಕ್ಕೆ ಅಂದು 374 ಕೆಪಿಎಸ್ಸಿ ನೇಮಕಾತಿ ಪ್ರಕ್ರಿಯೆಯನ್ನು ಕೈಬಿಡಲಾಯಿತು. ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯ ಆಗಿತ್ತು. ಆದರೆ, ಈ ಸರಕಾರ ಬಂದ ಮೇಲೆ ಆ ಸಮಸ್ಯೆಯನ್ನು ಬಗೆಹರಿಸುವ ಮೂಲಕ ಆಗಿದ್ದ ಅನ್ಯಾಯವನ್ನು ಸರಿ ಮಾಡಿತು. ಅದಕ್ಕಾಗಿ ನಾನು ಸರಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಕೆಪಿಎಸ್ಸಿಯನ್ನು ಸ್ವಚ್ಛ ಮಾಡುತ್ತೇವೆ ಎಂದರು, ಆದರೆ ಆ ಕೆಲಸ ಆಗಿದೆಯಾ?



ಈಗ ಪಿಎಸ್‌ಐ ನೇಮಕಾತಿ ಪ್ರಕ್ರಿಯೆಯಲ್ಲಿ ಒಬ್ಬ ಅಭ್ಯರ್ಥಿ ಐಎಎಸ್‌ಗೆ ಆಯ್ಕೆ ಆಗಿದ್ದಾರೆ. ವಿಕಲಚೇತನ ಯುವಕನೊಬ್ಬ ದೊಡ್ಡ ಸಾಧನೆ ಮಾಡಿದ್ದಾನೆ. ಅನೇಕರು ಬೇರೆ ಬೇರೆ ಹುದ್ದೆಗೆ ನೇಮಕ ಆಗಿದ್ದಾರೆ. ಅಲ್ಲಿಗೆ ಬಂಧನಕ್ಕೆ ಒಳಗಾಗಿರುವ ಆರೋಪಿತರನ್ನು ಹೊರತುಪಡಿಸಿ ಅನೇಕ ಪ್ರತಿಭಾನ್ವಿತರು ಈ ಪರೀಕ್ಷೆ ಬರೆದು ತೇರ್ಗಡೆ ಆಗಿದ್ದಾರೆ. ಅವರಿಗೆ ಏಕೆ ಅನ್ಯಾಯ ಆಗಬೇಕು ಎಂದು ಮಾಜಿ ಮುಖ್ಯಮಂತ್ರಿಗಳು ಸರಕಾರಕ್ಕೆ ಪ್ರಶ್ನೆ ಮಾಡಿದರು. ಒಂದೆಡೆ ಅನ್ಯಾಯವನ್ನು ಸರಿ ಮಾಡಬೇಕು. ಇನ್ನೊಂದೆಡೆ ತನಿಖೆಯು ಹಾದಿ ತಪ್ಪಬಾರದು. ಈಗ 545 ಅಭ್ಯರ್ಥಿಗಳ ನೇಮಕಾತಿ ರದ್ದು ಮಾಡಲು ನಿರ್ಧರಿಸಿದೆ ಸರಕಾರ. ಇಂಥ ಲೋಪ ಮತ್ತೆಂದೂ ಆಗದಂತೆ ಎಚ್ಚರಿಕೆ ವಹಿಸಬೇಕು.

ಸರ್ಕಾರದ ಹಾಗೂ ರಾಜಕೀಯ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ನಂಬಿಕೆ ಬರುವ ರೀತಿಯಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಸಂದೇಶ ನೀಡಬೇಕು. ಇದಕ್ಕೆ ತಾರ್ಕಿಕ ಅಂತ್ಯ ಕಾಣಿಸಬೇಕು. ಯಾರೆಲ್ಲ ಘಟನೆ ಹಿಂದಿದ್ದಾರೆ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಜನ ನಮ್ಮನ್ನು ನಂಬುತ್ತಾರೆ. ಈ ವಿಷಯದಲ್ಲಿ ನಾನು ಮುಖ್ಯಮಂತ್ರಿ, ವಿಪಕ್ಷ ನಾಯಕರಿಗೆ ಮನವಿ ಮಾಡುತ್ತೇನೆ ಎಂದರು. ಪೊಲೀಸ್ ಅಧಿಕಾರಿಗಳು ಸೇರಿ ರಾಜಕಾರಣಿಗಳ ವಿರುದ್ಧವೂ ತನಿಖೆ ನಡೆಯಲಿ. ಈಗ ಶಾಸಕ ದಡೆಸುಗೂರು ಹೆಸರು ಕೇಳಿ ಬಂದಿದೆ. ಅವರ ಮೇಲೆ ಆರೋಪ ಇದ್ದರೆ ತನಿಖೆ ಆಗಲಿ. ಈ ಬಗ್ಗೆ ವಿಪಕ್ಷ ನಾಯಕರ ಹೇಳಿಕೆಗೆ ನನ್ನ ಸಹಮತ ಇದೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

ಮೈಸೂರಲ್ಲಿ ಸ್ಥಾಪಿತ ಸೆಮಿ ಕಂಡಕ್ಟರ್ ಘಟಕದಲ್ಲಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸಿ

ಪರಿಷತ್‌ನಲ್ಲಿ ಕೈಗಾರಿಕಾ ಸಚಿವರಿಗೆ ಎಂಎಲ್‌ಸಿ ಮಂಜೇಗೌಡರ ಆಗ್ರಹ

ಬೆಂಗಳೂರು,ಸೆ.20– ಮೈಸೂರಿನಲ್ಲಿ ಸ್ಥಾಪಿತವಾಗಲಿರುವ ಸೆಮಿಕಂಡಕ್ಟರ್ ಘಟಕದಲ್ಲಿ ಸ್ಥಳೀಯ ಅರ್ಹ ಯುವಕರಿಗೆ ಉದ್ಯೋಗವಕಾಶ ನೀಡಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ವಿಧಾನಪರಿಷತ್‌ನಲ್ಲಿ ಆಗ್ರಹಿಸಿದರು.



ರಾಜ್ಯದ ಮೊಟ್ಟಮೊದಲ ಸೆಮಿಕಂಡಕ್ಟರ್ ಘಟಕವನ್ನು ಮೈಸೂರಿನಲ್ಲಿ ಸ್ಥಾಪಿಸುತ್ತಿರುವುದು ಸಂತಸದ ವಿಷಯ. ಆದರೆ ಸ್ಥಳೀಯ ಯುವಕರು, ತಾಂತ್ರಿಕ ಕೌಶಲ್ಯವುಳ್ಳ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಬೇಕು. ಬೇರೆ ರಾಜ್ಯ ಹಾಗೂ ವಿದೇಶಿಗರಿಗೆ ಉದ್ಯೋಗ ನೀಡಬಾರದು ಎಂದು ತಿಳಿಸಿದರಲ್ಲದೆ, ಸೆಮಿಕಂಡಕ್ಟರ್ ಯೂನಿಟ್ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ಕೇಳಿದರು. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಪ್ರತಿಕ್ರಿಯಿಸಿ, ಸೆಮಿಕಂಡಕ್ಟರ್ ಘಟಕವನ್ನು ಇಸ್ರೇಲ್ ದೇಶದ ತಂತ್ರಜ್ಞಾನ ಹಾಗೂ ಸಹಯೋಗದೊಂದಿಗೆ ಆರಂಭಿಸಲು 2022ರ ಮೇ 1ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಇದಕ್ಕಾಗಿ ಮೈಸೂರಿನ ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 150 ಎಕರೆ ಜಮೀನನ್ನು ಗೊತ್ತುಪಡಿಸಿದೆ. 22900 ಕೋಟಿ ಹೂಡಿಕೆ ಮಾಡಲು ಪ್ರಸ್ತಾಪವಿದ್ದು, ಈ ಘಟಕದಿಂದ 1500 ಜನರಿಗೆ ನೇರ ಉದ್ಯೋಗ, 8500 ಜನರಿಗೆ ಪರೋಕ್ಷ ಉದ್ಯೋಗ ಸಿಗಲಿದೆ. ಮೈಸೂರನ್ನು ಐಟಿಬಿಟಿ ಹಾಗೂ ಭಾರೀ ಉದ್ಯಮಗಳ ಹಬ್ ಆಗಿ ಅಭಿವೃದ್ಧಿಪಡಿಸಲು ಸರ್ಕಾರ ಎಲ್ಲಾ ರೀತಿಯ ಕ್ರಮ ಕೈಗೊಂಡಿದೆ ಎಂದು ಸ್ಪಷ್ಟಪಡಿಸಿದರು.





ಇತ್ತೀಚೆಗೆ ನಿಧನರಾದ ಅರಣ್ಯ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಉಮೇಶ್ ಕತ್ತಿ ಅವರ ಸ್ವಗ್ರಾಮ ಬೆಳಗಾವಿಯ ಬೆಲ್ಲದ ಬಾಗೇವಾಡಿಯ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿದ ಶಾಸಕ ಜಿ.ಟಿ.ದೇವೇಗೌಡ, ಉಮೇಶ್ ಕತ್ತಿ ಅವರ ಭಾವಚಿತ್ರಕ್ಕೆ ನಮಿಸಿ, ಅವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ವೇಳೆ ಹಿರಿಯ ಪತ್ರಕರ್ತ ಎಂ.ಬಿ.ಮರಂಕಲ್, ರಾಮಚಂದ್ರಗೌಡ, ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷ ಜಗದೀಶ್ ಕವಟಗಿಮಠ ಇತರರು ಉಪಸ್ಥಿತರಿದ್ದರು.

ವಿಧಾನಸಭೆಯಲ್ಲಿ ನಾಲ್ಕು ವಿಧೇಯಕಗಳಿಗೆ ಅಂಗೀಕಾರ

ಬೆಂಗಳೂರು: 2022ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ ವಿಧೇಯಕ) ಸೇರಿದಂತೆ ನಾಲ್ಕು ಪ್ರಮುಖ ವಿಧೇಯಕಗಳಿಗೆ ವಿಧಾನಸಭೆಯಲ್ಲಿ ಇಂದು ಅಂಗೀಕಾರ ದೊರೆತಿದೆ. 2022ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ ವಿಧೇಯಕ), 2022ನೇ ಸಾಲಿನ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ ವಿಧೇಯಕ)ವನ್ನು ಮುಖ್ಯಮಂತ್ರಿಗಳ ಪರವಾಗಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮಂಡಿಸಿದರು.

ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್ ಅವರು ಕರ್ನಾಟಕ ಮುನ್ಸಿಪಾಲಿಟಿ ಕಾಯ್ದೆ (ತಿದ್ದುಪಡಿ)ಯನ್ನು ಮಂಡಿಸಿದರು.



ಮೈಸೂರಿನ ಏಕಲವ್ಯ ನಗರದ ನಿವಾಸಿಗಳು ಹಕ್ಕು ಪತ್ರ ನೀಡುವಂತೆ ಒತ್ತಾಯಿಸಿ ಮೈಸೂರು ಜಿಲ್ಲಾ ನ್ಯಾಯಾಲಯದ ಗಾಂಧಿ ಪ್ರತಿಮೆ ಬಳಿ ಮಂಗಳವಾರ ಸಂಜೆ ಪಂಜಿನ ಮೆರವಣಿಗೆ ನಡೆಸಿದರು.

ವಿಶ್ವಕರ್ಮರಿಗೆ ತಾಂತ್ರಿಕ ತರಬೇತಿ ಅಗತ್ಯ: ಸಂದೇಶ್ ಸ್ವಾಮಿ ಅಭಿಮತ

ಮೈಸೂರು, ಸೆ. 20–ವಿಶ್ವವನ್ನು ಸೃಷ್ಟಿಸಿದವರು ವಿಶ್ವಕರ್ಮರು. ಈ ಜಯಂತಿ ವಿಶ್ವಕರ್ಮ ಸಮುದಾಯಕ್ಕೆ ಮಾತ್ರ ಸೀಮಿತವಾಗಬಾರದು. ಇದು ಸಮಾಜದ ಎಲ್ಲರೂ ಆಚರಿಸುವ ಜಯಂತಿಯಾಗಬೇಕು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ತಿಳಿಸಿದರು.

ನಗರದ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ದೇವರಾಜ ಮೊಹಲ್ಲಾ ನಾಗರಿಕ ವೇದಿಕೆ ವತಿಯಿಂದ ನಡೆದ ವಿಶ್ವಕರ್ಮ ಜಯಂತಿ ಅಂಗವಾಗಿ 35ವರ್ಷಗಳಿಂದ ಶಿಲ್ಪ ಕಲೆಗಳನ್ನು ಉಳಿಸಿ ಬೆಳೆಸುತ್ತಿರುವ ವಿವಿಧ ಕ್ಷೇತ್ರದ ಹಿರಿಯ ಶಿಲ್ಪಿಗಳಾದ ಎಂ.ಎಸ್. ಸೋಮಾಚಾರ್, ಕೇಶವಮೂರ್ತಿ ಎಸ್.ಎನ್, ಮಂಜಾಚಾರ್, ಸಿದ್ದಪ್ಪ, ರವಿಶಂಕರ್, ಅನಿಲ್ ಕುಮಾರ್, ನಾಗೇಂದ್ರ ಸತೀಶ್ ಮೂರ್ತಿ, ವಸಂತ್ ಕುಮಾರ್, ಆನಂದ್ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಕಲೆ, ಶಸ್ತ್ರಾಸ್ತ್ರ,



ಯಂತ್ರೋಪಕರಣಗಳನ್ನು ವಿಶ್ವಕರ್ಮ ಸಮುದಾಯ ವಿನ್ಯಾಸಗೊಳಿಸಿದೆ. ವಿಮಾನದ ಪರಿಕಲ್ಪನೆ ಇಲ್ಲದ ಸಂದರ್ಭದಲ್ಲಿ ಪುಷ್ಪಕ ವಿಮಾನ ನಿರ್ಮಿಸಿಕೊಟ್ಟ ಹೆಗ್ಗಳಿಕೆ ವಿಶ್ವಕರ್ಮರಿಗೆ ಸಲ್ಲುತ್ತದೆ. ರಾಷ್ಟ್ರದ ಅಭಿವೃದ್ಧಿಗೆ ಸಮುದಾಯದ ಕೊಡುಗೆ ಅಪಾರ ಎಂದರು.

ವಿಶ್ವಕರ್ಮ ಮತ್ತು ಬ್ರಹ್ಮ ಇಬ್ಬರೂ ಸೃಷ್ಟಿಕರ್ತರು. ಹೀಗಾಗಿ, ವಿಶ್ವಕರ್ಮರನ್ನು ಬ್ರಹ್ಮನಿಗೆ ಹೋಲಿಕೆ ಮಾಡುವ ಪರಿಪಾಠ ಸಮಾಜದಲ್ಲಿದೆ. 64 ವಿದ್ಯೆ ತಿಳಿದವರನ್ನು ವಿಶ್ವಕರ್ಮ ಎನ್ನುತ್ತಾರೆ. ಸಂಸ್ಕೃತದಲ್ಲಿ ಈ ಪದಕ್ಕೆ ಎಲ್ಲವನ್ನೂ ಸಾಧಿಸುವವನು ಎಂಬ ಅರ್ಥ ಇದೆ ಎಂದು ಹೇಳಿದರು. ಪುರಾಣ, ಇತಿಹಾಸ ಹಾಗೂ ಭವ್ಯ ಪರಂಪರೆ ಹೊಂದಿರುವವರು ವಿಶ್ವಕರ್ಮ ಸಮುದಾಯ. ಸಮಾಜದ ಅಭಿವೃದ್ಧಿಯಲ್ಲಿ ಸಮುದಾಯದ ಪಾತ್ರ ಹಿರಿದು. ದೇಶದ ಹಲವು ಮಾದರಿಗಳನ್ನು ಸಮುದಾಯ ನಿರ್ಮಿಸಿದೆ ಎಂದು ಅಭಿಪ್ರಾಯಪಟ್ಟರು.

ವಿಶ್ವಕರ್ಮ ಸಮುದಾಯದ ಮುಖಂಡರಾದ ರಿಷಿ ವಿಶ್ವಕರ್ಮ ಮಾತನಾಡಿ, ಕುಲಕಸುಬುಗಳನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿರುವ ವಿಶ್ವಕರ್ಮ ಸಮಾಜದ ಕುಶಲಕರ್ಮಿಗಳಿಗೆ ಅರುವತ್ತು ವರ್ಷಗಳ ನಂತರ ಮಾಶಾಸನವನ್ನು ಸರ್ಕಾರವು ನೀಡಬೇಕು. ವಾಸ ಮಾಡಲು ವಸತಿಯನ್ನು ನೀಡಬೇಕು. ಮೈಸೂರಿನಲ್ಲಿ ವಿಶ್ವಕರ್ಮ ಸಮಾಜದ ಸಮುದಾಯ ಭವನಕ್ಕೆ 2ಎಕರೆ ಜಾಗವನ್ನು ನೀಡಿ 3ಕೋಟಿ ವೆಚ್ಚದಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಿಸಲು ಸರ್ಕಾರ ಅನುದಾನವನ್ನು ನೀಡಬೇಕು ಎಂದರು.

ಇದೇ ಸಂದರ್ಭದಲ್ಲಿ ನಗರ ಪಾಲಿಕಾ ಸದಸ್ಯರಾದ ರಮಣಿ ,ಎಸ್ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅರ್ಚಕರ ಸಂಘದ ಅಧ್ಯಕ್ಷರಾದ ಕೃಷ್ಣಮೂರ್ತಿ, ಕೇಬಲ್ ವಿಜಿ, ಸದಾಶಿವ್, ಸೂರಜ್, ಕೇಬಲ್ ವಿಜಿ ವಿಶ್ವಕರ್ಮ, ಮೈಸೂರು ಜಿಲ್ಲಾ ಬಡಗಿ ಕೆಲಸಗಾರರ ಸಂಘದ ಅಧ್ಯಕ್ಷರು ಹಾಗೂ ಮೈಸೂರು ಜಿಲ್ಲಾ ಜಯಂತೋತ್ಸವ ಸಮಿತಿಯ ಅಧ್ಯಕ್ಷರು ಓ.ಮೊಗಣ್ಣಚಾರ್, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಉಪಾಧ್ಯಕ್ಷ ಹುಯಿಲಾಳು ಕುಮಾರ್, ವಿಶ್ವಕರ್ಮ ಮಹಾಮಂಡಳದ ಅಧ್ಯಕ್ಷ ಸಿ.ಟಿ. ಆಚಾರ್ಯ, ಕರ್ನಾಟಕ ಚಲನಚಿತ್ರ ಕಾರ್ಮಿಕರ ಕಲಾವಿದರ ತಂತ್ರಜ್ಞರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸೋಮಸುಂದರಮೂರ್ತಿ, ವಿಶ್ವಕರ್ಮ ಅಭಿವೃದ್ಧಿ ನಿಗಮದ ನಿರ್ದೇಶಕರಾದ ಸಿಂಧುವಳ್ಳಿ ಲೋಕೇಶ್, ಫೋಟೋ ಶಿವು, ಕಾಳಿಕಾಂಬ ಕಮಠೇಶ್ವರಸ್ವಾಮಿ ದೇವಸ್ಥಾನದ ನಿರ್ದೇಶಕರಾದ ಅರುಣ್ ಕುಮಾರ್, ನರಸಿಂಹರಾಜ ಕ್ಷೇತ್ರದ ಜೆಡಿಎಸ್ ಸೋಮು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಇಂದು ಸ್ವರ್ಣಾಮೃತ ಪ್ರಾಶನ

ಮೈಸೂರು,ಸೆ.20–ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯದಲ್ಲಿ ಪುಷ್ಯಾ ನಕ್ಷತ್ರದ ದಿನವಾದ ಸೆ.21ರಂದು ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಸ್ವರ್ಣಾಮೃತ ಪ್ರಾಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ. ಗುರುರಾಜ ಭಟ್, ಮೊಸಂಖ್ಯೆ: 9880856916 ಸಂಪರ್ಕಿಸಲು ಕೋರಲಾಗಿದೆ.

ಇಂದಿನಿಂದ ಥೈರಾಯ್ಡ್ ತಪಾಸಣೆ, ಸಮಾಲೋಚನಾ ಶಿಬಿರ

ಮೈಸೂರು,ಸೆ.20–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ವತಿಯಿಂದ ಉಚಿತ ಥೈರಾಯ್ಡ್ ತಪಾಸಣೆ ಹಾಗೂ ಸಮಾಲೋಚನಾ ಶಿಬಿರವನ್ನು ಸೆ.21ರಿಂದ 25ರ ಶನಿವಾರದವರೆಗೆ ಬೆಳಗ್ಗೆ 10ರಿಂದ 2ರವರೆಗೆ ಆಯೋಜಿಸಲಾಗಿದೆ. ಸುಯೋಗ್ ಆಸ್ಪತ್ರೆಯ ಸಾಮಾನ್ಯ ಮತ್ತು ಥೈರಾಯ್ಡ್ ತಜ್ಞವೈದ್ಯರಾದ ಡಾ. ನಿಶ್ಚಿತ್ ಕೆಎನ್. ನೇತೃತ್ವದಲ್ಲಿ ನಡೆಯುವ ಈ ಶಿಬಿರದಲ್ಲಿ ಆಯಾಸ. ಆತಂಕ, ಕೂದಲು ಉದುರುವಿಕೆ, ತೂಕ ಹೆಚ್ಚಾಗುವಿಕೆ ಅಥವಾ ಇಳಿಕೆಯಾಗುವಿಕೆ, ಅತಿ ಋತುಸ್ರಾವ, ಮಲಬದ್ಧತೆ ಅಥವಾ ಅತಿಸಾರ ಮುಂತಾದ ರೋಗಲಕ್ಷಣಗಳಿರುವವರು ಈ ಶಿಬಿರದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಲು ಕೋರಲಾಗಿದೆ. ಆಸಕ್ತರು ಕೂಡಲೇ ತಮ್ಮ ಹೆಸರುಗಳನ್ನು 0821–2533600, ಮೊ.9739555908 ಇಲ್ಲಿಗೆ ನೋಂದಾಯಿಸಿಕೊಳ್ಳಬಹುದು.

ಅಕ್ರಮ ನಿರ್ಮಾಣ ಆರೋಪ: ಪೊಲೀಸರಿಗೆ ದೂರು ಸಲ್ಲಿಕೆ

ಮೈಸೂರು, ಸೆ.20– ಪಿತ್ರಾರ್ಜಿತ ಭೂಮಿ ಸಂಬಂಧ ನಕಲಿ ದಾಖಲೆ ಸೃಷ್ಟಿಸಿಕೊಂಡು ಅಕ್ರಮ ನಿರ್ಮಾಣಕ್ಕೆ ಯತ್ನಿಸಿರುವ ಕೆಲವರು, ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ಅವಾಚ್ಯ ಶಬ್ಧಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎಂದು ಮೈಸೂರಿನ ವಿನಾಯಕನಗರದ ನಿವಾಸಿ ಪುಟ್ಟರಾಜು ಪೊಲೀಸರಿಗೆ ದೂರು ನೀಡಿದ್ದಾರೆ. ಹಿನಕಲ್ ಗ್ರಾಮದ ಸರ್ವೆ ನಂ.54/ಬಿ ವ್ಯಾಪ್ತಿಯ 1 ಎಕರೆ 25 ಗುಂಟೆ ಪಿತ್ರಾರ್ಜಿತ ಸ್ವತ್ತಾಗಿದ್ದು ಅದರಲ್ಲಿ ದೇವರಾಜು, ಮಹೇಂದ್ರ, ಚಂದ್ರು, ಎಂ.ಸಿ.ತಮ್ಮಯ್ಯ ಹಾಗೂ ಯಶವಂತ್ ಅಕ್ರಮವಾಗಿ ಮನೆ ನಿರ್ಮಾಣ ಮಾಡುವುದನ್ನು ತಡೆಯಲು ಹೋದಾಗ ಅವಾಚ್ಯ ಶಬ್ಧಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಲ್ಲದೆ ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದು ಪುಟ್ಟರಾಜು, ನಗರ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಹಾಗೂ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಆ.6ರಂದು ವಿಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದೆ. ಆ.10ರಂದು ಪೊಲೀಸ್ ಆಯುಕ್ತರಿಗೂ ದೂರು ಸಲ್ಲಿಸಿದ್ದೆ. ಆದಾಗಿ ಮರುದಿನವೇ ಅಕ್ರಮವಾಗಿ ಮನೆ ನಿರ್ಮಿಸುವುದನ್ನು ಪ್ರಶ್ನಿಸಲು ಹೋದಾಗ ಈ ಐದು ಜನ ಹಲ್ಲೆ ನಡೆಸಿದರು. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಂಡು ತಮ್ಮ ಕುಟುಂಬಕ್ಕೆ ರಕ್ಷಣೆ ನೀಡಬೇಕೆಂದು ಪುಟ್ಟರಾಜು ದೂರಿನಲ್ಲಿ ಮನವಿ ಮಾಡಿದ್ದಾರೆ.

ರಂಗ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಮೈಸೂರು, ಸೆ. 20– ಮೈಸೂರಿನ ನಿರಂತರ ಫೌಂಡೇಷನ್ ವತಿಯಿಂದ ಕಾಲೇಜು ವಿದ್ಯಾರ್ಥಿಗಳಿಗೆ ಸಹಜರಂಗ ರಂಗ ತರಬೇತಿ ಶಿಬಿರ ಆಯೋಜಿಸಲಾಗಿದೆ. ಅಭಿನಯ, ಸಂಗೀತ, ನಾಟಕ, ರಂಗ ಇತಿಹಾಸ, ಸಿನಿಮಾ, ಪರಿಸರ ಸಂರಕ್ಷಣೆ ಕುರಿತು ತರಗತಿಗಳು ನಡೆಯಲಿವೆ. ಅ.9ರಿಂದ ನ.5ರವರೆಗೆ ಮಾನಸಗಂಗೋತ್ರಿಯ ಗಾಂಧಿ ಭವನ ಆವರಣದಲ್ಲಿ ಸಂಜೆ 4.45ರಿಂದ 8.30ರವರೆಗೆ ಶಿಬಿರ ನಡೆಯಲಿದೆ. ಅರ್ಜಿ ಸಲ್ಲಿಸಲು ಅ.5 ಕೊನೆಯ ದಿನಾಂಕ. ಮಾಹಿತಿಗೆ ದೂ. 0821–2544990, ಮೊ. 8105946256

ನಿಧನ

ಸರಸ್ವತಿ



ಮೈಸೂರು, ಸೆ. 20– ಮೈಸೂರಿನ ಚಾಮುಂಡಿಪುರಂ ನಿವಾಸಿ ದಿವಂಗತ ದೇವರಾಜ್ ಹೆಗ್ಡೆ ಅವರ ಪತ್ನಿ ಸರಸ್ವತಿ (81) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು, ಪುತ್ರರಾದ ಹಿರಿಯ ವಕೀಲ ಎಂ.ಡಿ. ಹರೀಶ್ ಹೆಗ್ಡೆ ಮತ್ತು ಸಾರಿಗೆ ಇಲಾಖೆ ಅಧಿಕಾರಿ ಎಂ.ಡಿ. ಶರತ್ ಹೆಗ್ಡೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಸೆ. 21) ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಘು ಭಲೇರಾವ್



ಮೈಸೂರು, ಸೆ. 20– ಮೈಸೂರಿನ ವಿ.ವಿ. ಮೊಹಲ್ಲಾ ನಿವಾಸಿ ರಘು ಭಲೇರಾವ್ (92) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.09.2022 ಬುಧವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ : ಪುಷ್ಯ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖ ಶಿಖಾಂತ, ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ– ಗಾಯನ– ದೀಪಿಕಾ ಪಾಂಡುರಂಗಿ, ಅಮೃತಾ ನಿತಿನ್ ಶಾಸ್ತ್ರಿ, ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 10.00 ಸಮೀರ್ ಎಲ್. ರಾವ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಸ್ನೇಹಜಾ ಪ್ರವೀಣ್, ಇಂದು ವಿಶ್ವನಾಥ್, 12.45 ಲಾಕ್‌ಡೌನ್ ಕಥಾ ನಾಟಕ–ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ–ಮೈಸೂರು ಸಂಸ್ಥಾನದಲ್ಲಿ ಸಂಗೀತ ಮತ್ತು ಲಯ ವಾದ್ಯಗಳ ಪರಂಪರೆ, ನಿರೂಪಣೆ– ಡಾ. ಜ್ಯೋತಿ ಶಂಕರ್, ಪ್ರಸ್ತುತಿ–ಹೆಚ್.ಎಲ್. ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಲೇಖಕಿ ಹಾಗೂ ಛಾಯಾಗ್ರಾಹಕಿ ಲೀಲಾ ಅಪ್ಪಾಜಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಅಬ್ದುಲ್ ರಶೀದ್, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 4.45 ಹಿಂದಿ ಪಾಠ–ಎಸ್. ಈಶ್ವರ್ ಭಟ್, 6.50 ಕಿಸಾನ್‌ವಾಣಿ–ಕೃಷಿಕ ಮಹದೇವ ನಾಯಕ ಅವರೊಂದಿಗೆ ಸಂದರ್ಶನ, 10.00 ಹಳ್ಳಿಹಾಡು–ಹಳೇಪುರದ ತಂಬೂರಿ ಮಾದಶೆಟ್ಟಿ ಮತ್ತು ಅವರ ಗೆಳೆಯರು

- **ಆರ್ಟ್ ಆಫ್ ಲಿವಿಂಗ್ :** ಜೀವನ ಕಲೆ ಆನಂದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್, ಲಲತಾದ್ರಿಪುರ ರಸ್ತೆ, ಬೆಳಗ್ಗೆ 6 ರಿಂದ, ಮಧ್ಯಾಹ್ನ 1 ರಿಂದ, ಮಧ್ಯಾಹ್ನ 3 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.
- **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ :** ಸ್ವರ್ಣಪ್ರಾಶನ, ಸ್ಥಳ: ಮಂದಿರದ ಆವರಣ, ನೇತಾಜಿ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ ಇನ್‌ಸ್ಟಿಟ್ಯೂಟ್ ಆಫ್ ಎಕ್ಸಲೆನ್ಸ್ ಸ್ಕೀಂ :** 62ನೇ ಅಂತಾರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ಜಯದೇವ ಹೃದಯ ರೋಗ ಆಸ್ಪತ್ರೆ ನಿರ್ದೇಶಕ ಡಾ. ಮಂಜುನಾಥ್, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಗೌರವ ಅತಿಥಿಗಳು: ಕೆಎಸ್‌ಟಿಎ ಅಧ್ಯಕ್ಷ ಪ್ರೊ. ಎಸ್.ಅಯ್ಯಪ್ಪನ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಡಿಆರ್‌ಡಿಓ–ಡಿಎಫ್‌ಆರ್‌ಎಲ್ ನಿರ್ದೇಶಕ ಡಾ. ಅನಿಲ್‌ದತ್ ಸೆಮ್ವಾಲ್, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ಪ್ರಗತಿ ಪ್ರತಿಷ್ಠಾನ :** ವಿಶ್ವ ಶಾಂತಿ ದಿನಾಚರಣೆ, ಉದ್ಘಾಟನೆ : ಪ್ರಗತಿ ಪ್ರತಿಷ್ಠಾನ ಅಧ್ಯಕ್ಷ ಡಾ. ಅಜಯ್ ಕುಮಾರ್ ಜೈನ್, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10ಕ್ಕೆ.
- **ವ್ಯವಸ್ಥಾಪಕರು :** ಉದ್ಯೋಗ ಸೃಷ್ಟಿ ಕಾರ್ಯಕ್ರಮ, ಉಪಸ್ಥಿತರು : ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಲ್‌ಪಾಡ್ ಹ್ಯಾರಿಸ್, ಮಾಜಿ ಶಾಸಕ ವಾಸು, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಂದರ್‌ಕುಮಾರ್, ಸ್ಥಳ: ಶ್ರೀ ಯಲ್ಲಮ್ಮ ತಾಯಿ ದೇವಸ್ಥಾನ, ಮಿಷನ್ ಆಸ್ಪತ್ರೆ, ಬೆಳಗ್ಗೆ 10.30ಕ್ಕೆ.
- **ಹಿಮಾಲಯ ಪ್ರತಿಷ್ಠಾನ, ಉತ್ತಿಷ್ಠ ಭಾರತ ಟ್ರಸ್ಟ್ :** ಯೋಗ ವಿಭೂಷಣ ಹಾಗೂ ಯೋಗ ಭೂಷಣ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ಭಾಷಣ : ಮೈಸೂರು ಯೋಗ ಅಸೋಸಿಯೇಷನ್ ಉಪಾಧ್ಯಕ್ಷ ಯೋಗ ಪ್ರಕಾಶ್, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.
- **ಜೆಎಸ್‌ಎಸ್ ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.
- **ಭೀಮಜ್ಯೋತಿ ಸೌಹಾರ್ದ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ತಿಪ್ಪಯ್ಯ, ಸ್ಥಳ: ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮಧ್ಯಾಹ್ನ 2ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಶ್ರೀ ವ್ಯಾಸತೀರ್ಥಾಚಾರ್ ಅವರಿಂದ ಜಗನ್ನಾಥ ದಾಸರ ವಿರಚಿತ ಕೃತಿ 'ಫಲವಿದು ಬಾಳ್ವುದಕೆ' ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.
- **ಸಂಚಲನ ಮೈಸೂರು :** ಗುರೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಂದ ಮಕ್ಕಳ ಜಾನಪದ ನೃತ್ಯಗಳ ಪ್ರದರ್ಶನ ಮತ್ತು ನಾಟಕ ಪ್ರದರ್ಶನ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಉದ್ಘಾಟನೆ: ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಮುಖ್ಯ ಅತಿಥಿಗಳು: ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಕಲಾ ಪೋಷಕ ಯು.ಎಸ್. ಶೇಖರ್, ಮಾಜಿ ಉಪಮೇಯರ್ ಸಿದ್ದರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ಎನ್.ಎ. ಮಲ್ಲೇಶ್ವರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ನಾಟಕ : ಬೆಟ್ಟದ ಇಲಿಗಳ ಕಥೆ, ರಚನೆ: ಜಿ ಕೆ ನಂದಕುಮಾರ್, ನಿರ್ಮಾಣ:ಶೀಲಾ ಎಸ್, ಸಂಗೀತ: ಉದಯ್ ನುಸ್ರತ್ ಸಾಬ್ರಿ, ನಿರ್ದೇಶನ: ಎಸ್, ಶ್ರೀಕಾಂತ, ಸ್ಥಳ : ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುರೂರು, ಸಂಜೆ 6ಕ್ಕೆ.
- **ರಂಗಾಯಣ, ಮೈಸೂರು :** ಭಾರತೀಯ ರಂಗ ಸಂಗೀತೋತ್ಸವ, ಸಂಗೀತ ನಿರ್ದೇಶಕ ಶ್ರೀನಿವಾಸ ವೈ.ಎಂ. ಪುಟ್ಟಣ್ಣಯ್ಯ ಅವರಿಂದ ರಂಗ ಸಂಗೀತ ಮತ್ತು ರಂಗಗೀತೆಗಳು ಸ್ಥಳ: ಭೂಮಿಗೀತ, ಸಂಜೆ 6.30 ಗಂಟೆಗೆ.
- **ರೋಟರಿ ಕ್ಲಬ್ ಮೈಸೂರು ಮಿಡ್‌ಟೌನ್ :** ವಿಮರ್ಶಕರು ಹಾಗೂ ಅನುವಾದಕರಾದ ಪ್ರೊ. ಎಂ.ಜಿ. ನಂಜುಂಡಾರಾಧ್ಯ ಸ್ಮಾರಕ ರೋಟರಿ ಮೈಸೂರು ಮಿಡ್‌ಟೌನ್–ಅಮರವಾಣಿ ಗೌರವ ಪ್ರಶಸ್ತಿ ಪ್ರದಾನ, ನುಡಿ ಸಮರ್ಪಣೆ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಹೆಚ್.ಎಸ್. ಉಮೇಶ್, ಸ್ಥಳ: ರೋಟರಿ ಕೇಂದ್ರ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6.30ಕ್ಕೆ.
- **ಚಿನ್ಮಯ ಮಿಷನ್ :** ಜ್ಞಾನ ಯಜ್ಞ, ಸಂಜೆ 6 ರಿಂದ ಸಾಮೂಹಿಕ ವಿಷ್ಣು ಸಹಸ್ರನಾಮ, ಸಂಜೆ 6.30 ರಿಂದ ಸ್ವಾಮಿ ಗಹನಾನಂದಜೀ ಅವರಿಂದ ಶ್ರೀ ಆದಿಶಂಕರಾಚಾರ್ಯರ ಸಾಧನಾ ಪಂಚಕ ಕುರಿತು ಉಪನ್ಯಾಸ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, 148, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ.

ಮೈಸೂರು ನಗರ ಜಗಮಗಿಸುತ್ತಿದ್ದರೆ; ರಿಂಗ್ ರಸ್ತೆಯಲ್ಲಿ ಕಗ್ಗತ್ತಲು!



ಮೈಸೂರು ನಗರದಲ್ಲಿ ವಿದ್ಯುತ್ ದೀಪಾಲಂಕಾರ.



ರಿಂಗ್ ರಸ್ತೆಯಲ್ಲಿ ಕಗ್ಗತ್ತಲು ಆವರಿಸಿರುವುದು.

ಇಡೀ ಮೈಸೂರು ನಗರ ವಿದ್ಯುದ್ದೀ ಪಾಲಂಕಾರದಿಂದ ಜಗಮಗಿಸಿದರೆ, ರಿಂಗ್ ರಸ್ತೆ ಮಾತ್ರ ಕಗ್ಗತ್ತಲಿನಿಂದ ಅಪರಾಧ ಕೃತ್ಯಗಳಿಗೆ ಅವಕಾಶ ಮಾಡಿಕೊಡುವಂತಿದೆ.

ಮೈಸೂರು,ಸೆ.20(ಆರ್‌ಕೆ)– ಅತಿವೃಷ್ಟಿಯಿಂದಾಗಿ ಭಾರೀ ಹಾನಿಯಾಗಿದ್ದರೂ, ಸರ್ಕಾರ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದೆ. ಜನರನ್ನು ಆಕರ್ಷಿಸುವ ವಿದ್ಯುತ್ ದೀಪಾಲಂಕಾರವನ್ನು ಮೈಸೂರಿನ ಹೃದಯ ಭಾಗದ ಅರಮನೆ, ಪ್ರಮುಖ ರಸ್ತೆ, ವೃತ್ತಗಳಿಗೆ ಇನ್ನಿಲ್ಲದ ರೀತಿಯಲ್ಲಿ ಮಾಡಲಾಗುತ್ತಿದ್ದು, ಈಗಾಗಲೇ ಪರೀಕ್ಷಾರ್ಥ ಕೆಲವೆಡೆ ಲೈಟ್ ಆನ್ ಮಾಡಲಾಗುತ್ತಿದೆ. ಕೋವಿಡ್–19ನಿಂದಾಗಿ ಕಳೆದ ಬಾರಿ ಸರಳ ಹಾಗೂ ಸಾಂಪ್ರದಾಯಿಕ ದಸರಾ ಆಚರಿಸಲಾಗಿತ್ತಾದರೂ, ವಿದ್ಯುದ್ದೀಪಾಲಂಕಾರವನ್ನು ಅದ್ಧೂರಿಯಾಗಿ ಮಾಡಲಾಗಿತ್ತು.

ಈ ವರ್ಷ ಅದ್ಧೂರಿಯಾಗೇ ದಸರಾ ಆಚರಿಸುತ್ತಿರುವುದರಿಂದ ಸಹಜವಾಗಿಯೇ ವಿದ್ಯುತ್ ದೀಪಾಲಂಕಾರ ಮಾಮೂಲಿಗಿಂತ ಹೆಚ್ಚೇ ಮಾಡಿ, ಇಡೀ ಮೈಸೂರು ನಗರ ಜಗಮಗಿಸುವಂತೆ ಮಾಡಲಾಗುತ್ತಿದೆ. ಆ ಮೂಲಕ ದೇಶ–ವಿದೇಶಗಳಿಂದ ಪ್ರವಾಸಿಗರನ್ನು ಆಕರ್ಷಿಸಲು ಸರ್ವ ರೀತಿಯಲ್ಲಿ ತಯಾರಿಯನ್ನೂ ಮಾಡಲಾಗುತ್ತಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ವು ಕೊಲ್ಕತ್ತಾದಿಂದ ವಿದ್ಯುತ್ ದೀಪಾಲಂಕಾರಕ್ಕೆ ಪರಿಕರಗಳನ್ನು ತರಿಸಿದ್ದು, ರಸ್ತೆ, ವೃತ್ತಗಳಿಗೆ ವಿಶೇಷ ದೀಪಾಲಂಕಾರ ಮಾಡುತ್ತಿರುವುದರಿಂದ ಇಡೀ ಮೈಸೂರು ನಗರವೇ ರಾತ್ರಿ ವೇಳೆ ಬೆಳಗುತ್ತಿದೆ. ಆದರೆ 42 ಕಿ.ಮೀ. ಉದ್ದದ ರಿಂಗ್ ರಸ್ತೆಯು ರಾತ್ರಿ ವೇಳೆ ಕಗ್ಗತ್ತಲಿಂದ ಕೂಡಿದೆ. ಅಲ್ಲಿ ಒಂದೇ ಒಂದು ದೀಪವೂ ಬೆಳಗುತ್ತಿಲ್ಲ. ಸಾವಿರಾರು ವಾಹನಗಳು ಓಡಾಡುವ ಈ ರಸ್ತೆಯಲ್ಲಿ ಕತ್ತಲು ಆವರಿಸಿರುವುದರಿಂದ ಅಪಘಾತಗಳು, ದರೋಡೆ, ಕುಡುಕರ ಹಾವಳಿ ಹೆಚ್ಚಾಗತೊಡಗಿದೆ. ದ್ವಿಚಕ್ರ ವಾಹನ ಸವಾರರಂತೂ ರಾತ್ರಿ ವೇಳೆ ಆತಂಕದಿಂದಲೇ ರಿಂಗ್ ರಸ್ತೆಯಲ್ಲಿ ಸಂಚರಿಸಬೇಕು. ದೀಪಗಳು ಕೆಟ್ಟು 2 ವರ್ಷ ಕಳೆದರೂ ಯಾರೂ ಗಂಭೀರವಾಗಿ ಪರಿಗಣಿಸಿಲ್ಲ. ಇದೀಗ ದಸರಾ ಮಹೋತ್ಸವಕ್ಕೆ ದಿನ ಗಣನೆ ಆರಂಭವಾಗಿದೆಯಾದರೂ, ಇನ್ನೂ ಇತ್ತ ಅಧಿಕಾರಿಗಳು ಗಮನಹರಿಸಿಲ್ಲ. ಹೊರವರ್ತುಲ ರಸ್ತೆಯುದ್ದಕ್ಕೂ ಬೀದಿದೀಪಗಳಿಗೆ ಅಳವಡಿಸಿರುವ ಯುಜಿ ಕೇಬಲ್ ಅನ್ನು ಇಲಿ–ಹೆಗ್ಗಣಗಳು ತುಂಡರಿಸಿದ್ದರೆ, ಕೆಲ ಖದೀಮರೂ ಬೆಲೆಬಾಳುವ ಕೇಬಲ್ ಕತ್ತರಿಸಿಕೊಂಡು ಹೋಗಿರುವುದರಿಂದ 42 ಕಿ.ಮೀ. ಉದ್ದದ ರಿಂಗ್ ರಸ್ತೆಯಲ್ಲಿ ಒಂದೇ ಒಂದು ದೀಪವೂ ಬೆಳಗುತ್ತಿಲ್ಲ. ದಸರಾ ವೇಳೆಗೆ ರಿಂಗ್ ರಸ್ತೆ ಎಲ್‌ಇಡಿ ಬಲ್ಬ್‌ಗಳಿಂದ ಬೆಳಗಲಿದೆ ಎಂದು ಜನಪ್ರತಿನಿಧಿಗಳು ಹೇಳುತ್ತಲೇ ಬಂದರು. ಅದಕ್ಕಾಗಿ ಮುಡಾದಿಂದ 12 ಕೋಟಿ ರೂ. ಅನುದಾನ ಕೊಡುವಂತೆಯೂ ತಾಕೀತು ಮಾಡಲಾಗಿತ್ತು. ಆದರೆ, ಈವರೆಗೆ ಏನೂ ಆಗದಿರುವುದರಿಂದ ಈ ದಸರಾಗೂ ರಿಂಗ್ ರಸ್ತೆಯಲ್ಲಿ ಬೆಳಕು ಮರೀಚಿಕೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಗುಂಡಿ ತೋಡಿ 42 ಕಿ.ಮೀ. ಉದ್ದಕ್ಕೂ ಅಂಡರ್‌ಗ್ರೌಂಡ್ ಕೇಬಲ್ ಅಳವಡಿಸಬೇಕು, ಎಲ್ಲಾ ಕಂಬಗಳಿಗೂ ಎಲ್‌ಇಡಿ ಬಲ್ಬ್‌ಗಳನ್ನು ಹಾಕಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಇಷ್ಟೆಲ್ಲಾ ಕೆಲಸವಾಗಬೇಕೆಂದರೆ ಕನಿಷ್ಠ ಕಾಲಾವಕಾಶ ಬೇಕಾಗುತ್ತದೆ. ಮುಡಾದಿಂದ ಹಣ ಮಂಜೂರು ಮಾಡಿದರೂ, ನಗರಪಾಲಿಕೆಯು ಟೆಂಡರ್ ಕರೆದು ವರ್ಕ್ ಆರ್ಡರ್ ನೀಡಬೇಕು. ಇಷ್ಟೆಲ್ಲಾ ಪ್ರಕ್ರಿಯೆಗಳಾಗುವಷ್ಟರಲ್ಲಿ ನಾಡಹಬ್ಬ ದಸರಾ ಮಹೋತ್ಸವವೇ ಮುಗಿಯುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಮಾಜಿ ಪ್ರಧಾನಿ ದೇವೇಗೌಡರನ್ನು ಭೇಟಿಯಾದ ಯಡಿಯೂರಪ್ಪ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಂಗಳವಾರ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ವಿಧಾನಸಭೆ ಕಲಾಪ ಮುಗಿದ ಬಳಿಕ ಪದ್ಮನಾಭನಗರದ ನಿವಾಸಕ್ಕೆ ತೆರಳಿದ ಯಡಿಯೂರಪ್ಪ ಅವರು ದೇವೇಗೌಡರನ್ನು ಭೇಟಿಯಾದರು. ಯಡಿಯೂರಪ್ಪ ಅವರ ಜೊತೆ ಶಾಸಕ ಹಾಗೂ ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಸೇರಿದಂತೆ ಕೆಲ ಮುಖಂಡರು ಇದ್ದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಸೋಮವಾರ ಎಚ್.ಡಿ.ದೇವೇಗೌಡ ಅವರನ್ನು ಭೇಟಿಯಾಗಿ ಆರೋಗ್ಯ ವಿಚಾರಿಸಿದ್ದರು.

ಮಾತಾ ಅಮೃತಾನಂದಮಯಿ ಅವರ ತಾಯಿ ವಿಧಿವಶ



ತಿರುವನಂತಪುರಂ: ಮಾತಾ ಅಮೃತಾನಂದಮಯಿ ಅವರ ತಾಯಿ ದಮಯಂತಿ (97) ಅವರು ನಿಧನರಾಗಿದ್ದಾರೆ. ಸೋಮವಾರ ಮಧ್ಯಾಹ್ನ 2.50ರ ಸುಮಾರಿಗೆ ಕೊಲ್ಲಂನ ಅಮೃತಪುರಿ ಆಶ್ರಮದಲ್ಲಿ ದಮಯಂತಿ ಅವರು ಕೊನೆಯುಸಿರೆಳೆದಿದ್ದು, ಮಂಗಳವಾರ ಸಂಜೆ 4 ಗಂಟೆಗೆ ಅಮೃತಪುರಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ದಮಯಂತಿ ಅವರು ಕೊಲ್ಲಂನ ಅಮೃತಪುರಿ ಎಡಮ್ಮನ್ನೆಲ್‌ನ ದಿವಂಗತ ಸುಗುಣಂದನ್ ಅವರ ಪತ್ನಿಯಾಗಿದ್ದು, ಇದೀಗ ಕಸ್ತೂರಿ ಭಾಯಿ, ಸುಭಗನ್, ಸುಗುಣಮ್ಮ, ಸಜಿನಿ, ಸುರೇಶ್ ಕುಮಾರ್, ಸತೀಶ್ ಕುಮಾರ್ ಮತ್ತು ಸುಧೀರ್ ಕುಮಾರ್ ಅವರ ಇತರ ಮಕ್ಕಳನ್ನು ಅಗಲಿದ್ದಾರೆ.

ದಮಯಂತಿ ಅವರ ನಿಧನಕ್ಕೆ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಟ್ವೀಟ್ ಮೂಲಕ ಸಂತಾಪ ಸೂಚಿಸಿದ್ದಾರೆ. ಮಾತಾ ಅಮೃತಾನಂದಮಯಿ ದೇವಿಯ ಪ್ರೀತಿಯ ತಾಯಿ ದಮಯಂತಿ ಅಮ್ಮನವರ ನಿಧನದ ಸುದ್ದಿಯಿಂದ ದುಃಖವಾಗಿದೆ. ಅವರ ಅಗಲಿಕೆಗೆ ನನ್ನ ಸಂತಾಪ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಟ್ವೀಟ್ ಮಾಡಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗದ ವರದಿ ನಂತರ ಮೀಸಲಾತಿ ಸಂಬಂಧ ನಿರ್ಧಾರ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ



ಬೆಂಗಳೂರು, ಸೆ.20(ಕೆಎಂಶಿ)– ಹಿಂದುಳಿದ ವರ್ಗಗಳ ಆಯೋಗ ವರದಿ ನೀಡುತ್ತಿದ್ದಂತೆ ಕೆಲವು ಸಮುದಾಯಗಳನ್ನು 2ಎಗೆ ಸೇರಿಸುವ ಇಲ್ಲವೇ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಸಂಬಂಧ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.

ಶೂನ್ಯ ವೇಳೆಯಲ್ಲಿ ಬಸವನಗೌಡ ಪಾಟೀಲ್ ಯತ್ನಾಳ್ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಮುಖ್ಯಮಂತ್ರಿಗಳು ಪಂಚಮಸಾಲಿ, ವಾಲ್ಮೀಕಿ ಸಮುದಾಯ, ಪರಿಶಿಷ್ಟ ಜಾತಿ/ಪಂಗಡ ಸೇರಿದಂತೆ ಅನೇಕ ಸಮುದಾಯಗಳು ಮೀಸಲಾತಿ ಹೆಚ್ಚಳದ ಬಗ್ಗೆ ಹೋರಾಟ ನಡೆಸುತ್ತಿದ್ದಾರೆ. ಸರ್ಕಾರ ಏನೇ ಕ್ರಮ ಕೈಗೊಂಡರೂ ಅದು ಕಾನೂನುಬದ್ಧವಾಗಿರಬೇಕು. ಹಾಗಾಗಿ ಯಾರಿಗೂ ಕೂಡ ಅನ್ಯಾಯವಾಗದಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದರು. ಪಂಚಮಸಾಲಿ ಸಮುದಾಯವನ್ನು 2ಎಗೆ ಸೇರ್ಪಡೆ ಮಾಡಬೇಕೆಂದು ಹಲವು ದಿನಗಳಿಂದ ಹೋರಾಟ ಮಾಡಲಾಗುತ್ತಿದೆ. ಇದು ತಪ್ಪು ಎಂದು ನಾನು ಹೇಳುವುದಿಲ್ಲ. ಈಗಾಗಲೇ ಹಿಂದುಳಿದ ವರ್ಗಗಳ ಆಯೋಗಕ್ಕೆ ಶಿಫಾರಸ್ಸು ಮಾಡಿದ್ದೇವೆ.

ಆಯೋಗದವರು ಈಗಾಗಲೇ 10ರಿಂದ 12 ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ. ಇನ್ನು ಹಲವು ಜಿಲ್ಲೆಗಳಿಗೆ ಭೇಟಿ ಕೊಟ್ಟು ಮಾಹಿತಿ ಪಡೆಯಬೇಕು. ಆದಷ್ಟು ಶೀಘ್ರ ವರದಿ ಸಲ್ಲಿಸಬೇಕೆಂದು ಆಯೋಗಕ್ಕೆ ಸೂಚನೆ ಕೊಟ್ಟಿದ್ದೇವೆ. ವರದಿ ಬಂದ ನಂತರ ಯಾವ ಸಮುದಾಯಕ್ಕೂ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳುತ್ತೇವೆ. ವೈಜ್ಞಾನಿಕವಾಗಿ ಮಾಡಬೇಕಾಗಿ ರುವುದರಿಂದ ಸಮಯ ಬೇಕಾಗುತ್ತದೆ. ಎಲ್ಲರೂ ಸಹಕರಿಸಬೇಕು ಎಂದರು.

ಈ ಹಿಂದೆ ಇದೇ ರೀತಿ ಸಮುದಾಯಗಳ ಮೀಸಲಾತಿ ಹೆಚ್ಚಳ ಬೇಡಿಕೆ ಬಂದಾಗ ಶೇ.50ರಿಂದ 63ಕ್ಕೆ ಹೆಚ್ಚಳ ಮಾಡಬೇಕೆಂದು ಕೇಂದ್ರಕ್ಕೆ ಶಿಫಾರಸು ಮಾಡಿದ್ದನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿತ್ತು. ನಾವು ಏನೇ ಹೆಜ್ಜೆ ಇಡಬೇಕಾದರೂ ಕಾನೂನಾತ್ಮಕವಾಗಿ ತೀರ್ಮಾನ ಕೈಗೊಳ್ಳಬೇಕು. ಇಲ್ಲದಿದ್ದರೆ, ನ್ಯಾಯಾಲಯ ಅವಕಾಶ ನೀಡುವುದಿಲ್ಲ. ಶೇ.50ಕ್ಕೂ ಮಿಗಿಲಾಗಿ ಮೀಸಲಾತಿ ನೀಡಲು ಸಾಧ್ಯವಿಲ್ಲ.

ಇರುವ ವ್ಯವಸ್ಥೆಯಲ್ಲೇ ತುಳಿತಕ್ಕೊಳಗಾದವರು ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದಲೇ ನಾವು ಆಯೋಗವನ್ನು ಕೋರಿದ್ದೇವೆ.

ಈಗ ಪ್ರತಿಯೊಂದು ಸಮುದಾಯದಲ್ಲೂ ಜಾಗೃತ ಮನೋಭಾವನೆ ಬಂದಿದ್ದು, ಮೀಸಲಾತಿಯಿಂದ ಸಾಂವಿಧಾನಿಕ ಸೌಲಭ್ಯಗಳ ಬಗ್ಗೆ ಎಲ್ಲರಿಗೂ ಗೊತ್ತು. ಹೀಗಾಗಿ ಎಸ್ಸಿ–ಎಸ್ಟಿಯವರು ಶೇ.7.5ರಷ್ಟು ಮೀಸಲಾತಿ ಹೆಚ್ಚಳ, ವಾಲ್ಮೀಕಿ ಸಮುದಾಯ, ಹಾಲುಮತ ಸಮುದಾಯದವರು 2ಎ, ಪ್ರವರ್ಗ–1ರಲ್ಲಿ ಇರುವವರು ಎಸಿಗೆ, ಮರಾಠ, ಕ್ಷತ್ರಿಯದವರು 2ಎ, 3ಬಿನಲ್ಲಿರುವವರು ಹಿಂದುಳಿದ ವರ್ಗಕ್ಕೆ ಕೇಳುತ್ತಿದ್ದಾರೆ ಎಂದರು.

ಯಾವುದೇ ವರ್ಗಕ್ಕೆ ಮೀಸಲಾತಿ ಹೆಚ್ಚಳ ಮಾಡುವುದಕ್ಕೆ ಕಾನೂನುಗಳಿವೆ. ಸುಪ್ರೀಂಕೋರ್ಟ್ ಈ ಬಗ್ಗೆ ಹಲವಾರು ಬಾರಿ ಅನೇಕ ತೀರ್ಪುಗಳನ್ನು ನೀಡಿದೆ. ಅವಕಾಶ ವಂಚಿತರು, ಶೈಕ್ಷಣಿಕವಾಗಿ ಹಿಂದುಳಿದ ಸಮಾಜಕ್ಕೆ ಮೀಸಲಾತಿ ನೀಡಬೇಕು. ಪಂಚಮಸಾಲಿ ಸಮುದಾಯದ ಮೀಸಲಾತಿ ಸಂಬಂಧ ಎರಡು ಸಮಿತಿಗಳ ಶಿಫಾರಸ್ಸು ನಮ್ಮ ಮುಂದಿದೆ. ಇದರ ನಡುವೆ ಶಾಶ್ವತ ಹಿಂದುಳಿದ ವರ್ಗಗಳ ಆಯೋಗಕ್ಕೂ ವರದಿ ನೀಡುವಂತೆ ಸೂಚಿಸಿದ್ದೇವೆ. ಇದು ಸೂಕ್ಷ್ಮ ವಿಷಯ. ಕಾನೂನು ಚೌಕಟ್ಟಿನೊಳಗೆ ಅಂಕಿ–ಸಂಖ್ಯೆಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಬೇಕು, ಯಾವುದೇ ಸಮುದಾಯಕ್ಕೂ ಅನ್ಯಾಯವಾಗದಂತೆ ಎಚ್ಚರಿಕೆ ವಹಿಸಬೇಕು. ಹೀಗಾಗಿ ಯಾವುದೇ ನಿರ್ಧಾರ ಕೈಗೊಳ್ಳದೆ ಎಚ್ಚರಿಕೆಯಿಂದ ತೀರ್ಮಾನಿಸಬೇಕಿದೆ ಎಂದರು.

ರಾಜ್ಯದಲ್ಲಿ ಯಾವುದೇ ಕಾರಣಕ್ಕೂ APMC ಕಾಯ್ದೆ ರದ್ದು ಮಾಡಲ್ಲ



ಬೆಂಗಳೂರು: ರಾಜ್ಯದಲ್ಲಿ ಯಾವ ರೈತರು ಎಪಿಎಂಸಿ ಕಾಯ್ದೆ ವಾಪಸ್ ಪಡೆಯುವಂತೆ ಮನವಿ ಮಾಡಿಲ್ಲ. ಹಾಗಾಗಿ ಯಾವುದೇ ಕಾರಣಕ್ಕೂ ರಾಜ್ಯದಲ್ಲಿ ಜಾರಿ ಆಗಿರುವ ಎಪಿಎಂಸಿ ಕಾಯ್ದೆ ರದ್ದು ಮಾಡುವುದಿಲ್ಲ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಸ್ಪಷ್ಟಪಡಿಸಿದ್ದಾರೆ.

ವಿಧಾನಪರಿಷತ್ ಕಲಾಪದ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಸದಸ್ಯ ನಾಗರಾಜ್ ಯಾದವ್ ಪ್ರಶ್ನೆ ಕೇಳಿದರು. ರಾಜ್ಯದಲ್ಲಿ ಎಪಿಎಂಸಿ ಕಾಯ್ದೆ ರದ್ದು ಮಾಡಬೇಕು, ಈ ಕಾಯ್ದೆಯಿಂದ ರೈತರಿಗೆ ಅನ್ಯಾಯ ಆಗುತ್ತದೆ. ಕೇಂದ್ರ ಸರ್ಕಾರ ಈಗಾಗಲೇ ಕಾಯ್ದೆ ರದ್ದು ಮಾಡಿದೆ. ಡಬಲ್ ಎಂಜಿನ್ ಸರ್ಕಾರ ಇಲ್ಲಿ ಬೇರೆ ನಿರ್ಧಾರ ಮಾಡಿದೆ. ಕೂಡಲೇ ಕಾಯ್ದೆ ರದ್ದು ಮಾಡಬೇಕೆಂದು ಒತ್ತಾಯಿಸಿದರು.

ಇದಕ್ಕೆ ಉತ್ತರಿಸಿದ ಎಸ್.ಟಿ ಸೋಮಶೇಖರ್, ಯಾವುದೇ ಕಾರಣಕ್ಕೂ ಎಪಿಎಂಸಿ ಕಾಯ್ದೆ ರಾಜ್ಯದಲ್ಲಿ ವಾಪಸ್ ಪಡೆಯಲ್ಲ (ರದ್ದು ಮಾಡುವುದಿಲ್ಲ) ಎಂದು ಪುನರುಚ್ಚರಿಸಿದರು.

ಕೇಂದ್ರದ ಕಾಯ್ದೆ ಬೇರೆ ನಮ್ಮ ಕಾಯ್ದೆ ಬೇರೆ. ರೈತರಿಗೆ ಅನುಕೂಲ ಮಾಡಲು ಕಾಯ್ದೆ ತಿದ್ದುಪಡಿ ಮಾಡಿದ್ದೇವೆ. ರೈತರು ತಮ್ಮ ಬೆಳೆ ಎಪಿಎಂಸಿಯಲ್ಲಿ ಬೇಕಾದರೂ ಮಾರಾಟ ಮಾಡಬಹುದು ಅಥವಾ ಎಲ್ಲಿ ಬೇಕಾದರೂ ಖಾಸಗಿಯಾಗಿ ಬೇಕಾದರೂ ಮಾರಾಟ ಮಾಡಬಹುದು. ಅದಕ್ಕಾಗಿಯೇ ನಾವು ಕಾಯ್ದೆ ತಂದಿದ್ದೇವೆ ಎಂದು ಹೇಳಿದರು. ಇದಲ್ಲದೆ ರೈತ ಎಪಿಎಂಸಿ ಬಿಟ್ಟು ಹೊರಗೆ ಮಾರಾಟ ಮಾಡಿದರೆ ಮೊದಲು ದಂಡ ಇತ್ತು. ಅದನ್ನ ಈ ಕಾಯ್ದೆ ಮೂಲಕ ತೆಗೆದು ಹಾಕಲಾಗಿದೆ. ರಾಜ್ಯದ ಯಾವ ರೈತರು ಕಾಯ್ದೆ ವಾಪಸ್ ಪಡೆಯುವಂತೆ ಮನವಿ ಮಾಡಿಲ್ಲ. ಈ ಕಾಯ್ದೆ ರೈತರ ಪರವಾದ ಕಾಯ್ದೆ. ಹೀಗಾಗಿ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಎಪಿಎಂಸಿ ಕಾಯ್ದೆ ವಾಪಸ್ ಪಡೆಯೊಲ್ಲ ಅಂತ ಸೋಮಶೇಖರ್ ಸ್ಪಷ್ಟಪಡಿಸಿದರು.

ಸೆ.25ರಂದು ಸಾಮೂಹಿಕ ಪಿತೃ ತರ್ಪಣ

ಮೈಸೂರು,ಸೆ.20–ಮೈಸೂರಿನ ಬ್ರಾಹ್ಮಣ ಧರ್ಮ ಸಹಾಯ ಸಭಾ ವತಿಯಿಂದ ತ್ರಿಮತಸ್ಥ ಬ್ರಾಹ್ಮಣರಿಗೆ ಸೆ.25ರಂದು ಬೆಳಗ್ಗೆ 8 ಗಂಟೆಗೆ ಎಂ.ಜಿ.ರಸ್ತೆಯಲ್ಲಿರುವ (ಶಾಂತಿವನದ ಪಕ್ಕದಲ್ಲಿ) ವೈಕುಂಠ ಭವನದಲ್ಲಿ ಸಾಮೂಹಿಕ ಪಿತೃ ತರ್ಪಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅವಶ್ಯಕತೆ ಇರುವ ತ್ರಿಮತಸ್ಥ ಬ್ರಾಹ್ಮಣರು ಸೆ.22ರೊಳಗೆ ಕಲ್ಯಾಣ ಭವನ, ತ್ಯಾಗರಾಜ ರಸ್ತೆ ಇಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 8496070311 ಸಂಪರ್ಕಿಸಬಹುದು.

ಐಸಿಸ್ ಉಗ್ರ ಸಂಘಟನೆ ಜೊತೆ ನಂಟು: ರಾಜ್ಯದಲ್ಲಿ ಶಂಕಿತ ಉಗ್ರರ ಬಂಧನ



ಮಾಜ್ ಮುನೀರ್



ಸಯ್ಯದ್ ಯಾಸಿನ್

ಶಿವಮೊಗ್ಗ: ಇಸ್ಲಾಮಿಕ್ ಸ್ಟೇಟ್ ಉಗ್ರ ಸಂಘಟನೆಯೊಂದಿಗೆ ನಂಟು ಹೊಂದಿರುವ ಆರೋಪದಡಿ ಶಿವಮೊಗ್ಗ ಪೊಲೀಸರ ವಿಶೇಷ ತನಿಖಾ ತಂಡವು ಇಬ್ಬರನ್ನು ಬಂಧಿಸಿದ್ದು ಮತ್ತೊಬ್ಬನಿಗಾಗಿ ಶೋಧ ನಡೆಸಿದೆ.

ಶಂಕಿತ ಉಗ್ರರು ಸ್ಫೋಟಕಗಳನ್ನು ಹೊಂದಿದ್ದು ರಾಜ್ಯಾದ್ಯಂತ ವಿಧ್ವಂಸಕ ಕೃತ್ಯ ನಡೆಸಲು ಯೋಜಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಶಿವಮೊಗ್ಗದ ಸಿದ್ದೇಶ್ವರನಗರದ ಸೈಯದ್ ಯಾಸೀನ್, ತೀರ್ಥಹಳ್ಳಿಯ ಸೊಪ್ಪುಗಡ್ಡೆ ನಿವಾಸಿ ಶಾರೀಕ್ ಹಾಗೂ ಮಂಗಳೂರಿನ ಮಾಜ್ ಮುನೀರ್ ವಿರುದ್ಧ ಪೊಲೀಸರು ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಮತ್ತು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಸ್ವಂತವಾಗಿ ಪ್ರಕರಣ ದಾಖಲಿಸಿದ್ದಾರೆ. ಕಿಂಗ್‌ಪಿನ್ ಯಾಸಿನ್‌ನನ್ನು ಬಂಧಿಸಲಾಗಿದ್ದು ವಿಚಾರಣೆ ನಡೆಸಲಾಗುತ್ತಿದೆ. ಯಾಸಿನ್ ಎಲೆಕ್ಟ್ರಿಕಲ್ ಇಂಜಿನಿಯರ್ ಎಂದು ಮೂಲಗಳು ತಿಳಿಸಿವೆ.

ಕಳೆದ ಆಗಸ್ಟ್ 15ರಂದು ನಡೆದ ಪ್ರೇಮ್ ಸಿಂಗ್ ಚಾಕು ಇರಿತ ಪ್ರಕರಣದ ಹಿನ್ನೆಲೆಯಲ್ಲಿ ಭದ್ರಾವತಿ ಡಿವೈಎಸ್ಪಿ ಜಿತೇಂದ್ರ ಅವರನ್ನು ತನಿಖಾ ಅಧಿಕಾರಿಯಾಗಿ ನೇಮಕ ಮಾಡಲಾಗಿತ್ತು ಡಿವೈಎಸ್ಪಿ ಜಿತೇಂದ್ರ ಅವರು ತಮ್ಮ ತನಿಖೆ ವೇಳೆ ಆರೋಪಿ ಜಬೀವುಲ್ಲಾ ಮೊಬೈಲ್ ಪರಿಶೀಲನೆ ನಡೆಸಿದಾಗ ಉಗ್ರ ಸಂಘಟನೆಗಳ ಜತೆ ನಿರಂತರ ಸಂಪರ್ಕ ಹೊಂದಿರುವ ಮಾಹಿತಿ ಹೊರಬಿದ್ದಿದೆ. ಜಬೀವುಲ್ಲಾ ಮೇಲೆ ಮೂಲಭೂತವಾದಿಗಳು ಪ್ರಭಾವಿ ಬೀರಿದ್ದರು ಎನ್ನಲಾಗಿದೆ. ಶಂಕಿತರ ಬಂಧನ ಕುರಿತಂತೆ ಪ್ರತಿಕ್ರಿಯಿಸಿರುವ ಶಿವಮೊಗ್ಗದ ಎಸ್‌ಪಿ ಬಿಎಂ ಲಕ್ಷ್ಮೀಪ್ರಸಾದ್ ಅವರು, ಐಸಿಸ್ ನಂಟು ಆರೋಪದಲ್ಲಿ ಇಬ್ಬರ ಬಂಧನವಾಗಿದೆ. 7 ದಿನಗಳ ಕಾಲ ಇಬ್ಬರನ್ನೂ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ, ವಿಚಾರಣೆ ನಡೆಸಲಾಗುತ್ತದೆ. ತಲೆಮರೆಸಿಕೊಂಡಿರುವ ಮತ್ತೊಬ್ಬನಿಗಾಗಿ ಶೋಧ ನಡೆದಿದೆ ಎಂದು ಸ್ಪಷ್ಟಪಡಿಸಿದರು.

ಮೂವರು ಐಎಸ್ ಜೊತೆ ಸಂಪರ್ಕ ಹೊಂದಿದ್ದರು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ. ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಂಧಿತರ ಚಟುವಟಿಕೆಗಳ ಬಗ್ಗೆ ತೀವ್ರ ತನಿಖೆ ನಡೆಯುತ್ತಿದೆ. ಅವರು ಶಿವಮೊಗ್ಗ ಮತ್ತು ತೀರ್ಥಹಳ್ಳಿಯಿಂದ ಮಂಗಳೂರಿಗೆ ಸಂಪರ್ಕ ಹೊಂದಿದ್ದಾರೆ. ಶಿವಮೊಗ್ಗ ಜಿಲ್ಲೆಯವರಾದ ಜ್ಞಾನೇಂದ್ರ ಅವರು ಬಂಧಿತರಲ್ಲಿ ಒಬ್ಬರಿಗೆ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕವಿದೆ ಎಂದು ಹೇಳಿದ್ದಾರೆ.

ಮೈಸೂರು ವಿವಿಯಿಂದ ಕ್ರೀಡೆಯಲ್ಲಿ ಸಾಧನೆಗೈದ ಕ್ರೀಡಾಪಟುಗಳು, ತರಬೇತುದಾರಿಗೆ ಸನ್ಮಾನ



> **“ಮೈಸೂರು ವಿವಿ ಕೇವಲ ಶಿಕ್ಷಣಕ್ಕೆ ಮಾತ್ರ ಒತ್ತು ನೀಡುತ್ತಿಲ್ಲ. ಶಿಕ್ಷಣದ ಜೊತೆಗೆ ಕ್ರೀಡೆಗೂ ಪ್ರೋತ್ಸಾಹವನ್ನು ನೀಡುತ್ತ ಬರುತ್ತಿದ್ದು, ಕಳೆದ 2 ವರ್ಷ ಕೊರೊನಾದಿಂದ ಯಾವುದೇ ಕ್ರೀಡಾ ಕೂಟಗಳು ನಡೆಯಲಿಲ್ಲ. ಆದರೆ, 21–22ನೇ ಸಾಲಿನಲ್ಲಿ ಇಷ್ಟು ಪದಕಗಳು ವಿವಿಗೆ ಲಭಿಸಿರುವುದು ಸಂತಸದ ವಿಚಾರ. ಮನಸ್ಸು ಮತ್ತು ಬುದ್ಧಿ ಸ್ಥಿರವಾಗಿದ್ದರೆ ನಾವು ಏನು ಬೇಕಾದರೂ ಸಾಧಿಸಬಹುದು. ಈ ಉರುಪಿನಲ್ಲಿಯೇ ಮುಂದಿನ ಕ್ರೀಡಾಕೂಟಗಳಲ್ಲಿ ಭಾಗವಹಿಸಿ. ಮುಂದಿನ ಹಂತಕ್ಕೆ ತಲುಪಿ.**
> **–ಪ್ರೊ.ಹೇಮಂತ್‌ಕುಮಾರ್, ಕುಲಪತಿ**

ಮೈಸೂರು,ಸೆ.20(ಜಿಎ)–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ನಗದು ಬಹುಮಾನ ನೀಡುವ ಮೂಲಕ ಕ್ರೀಡಾಪಟುಗಳು ಹಾಗೂ ತರಬೇತುದಾರರನ್ನು ಅಭಿನಂದಿಸಲಾಯಿತು. 2021–22ನೇ ಸಾಲಿನಲ್ಲಿ ನಡೆದ ವಿವಿಧ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕಗಳನ್ನು ಗಳಿಸಿದ್ದ ಕ್ರೀಡಾಪಟುಗಳನ್ನು ಮತ್ತು ತರಬೇತುದಾರರನ್ನು ಮೈಸೂರು ವಿವಿಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಕಚೇರಿಯ ಆವರಣದಲ್ಲಿ 26 ಲಕ್ಷ ರೂ. ವೆಚ್ಚದ ನಗದು ಬಹುಮಾನ ನೀಡುವ ಮೂಲಕ ವಿಶೇಷವಾಗಿ ಸನ್ಮಾನಿಸಲಾಯಿತು.

ಬೆಂಗಳೂರಿನ ಜೈನ್ ವಿವಿಯಲ್ಲಿ ನಡೆದ 2ನೇ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ಮೈಸೂರು ವಿವಿಯ ಅಥ್ಲೆಟಿಕ್ ವಿಭಾಗದಿಂದ ಶಾಟ್ ಪುಟ್ ಕ್ರೀಡೆಯಲ್ಲಿ ಚಿನ್ನದ ಪದಕ ಪಡೆಕೊಂಡಿದ್ದ ಕ್ರೀಡಾಪಟು ವಿ.ಅಂಬಿಕಾ(30 ಸಾವಿರ ರೂ.) ಮತ್ತು ತರಬೇತುದಾರ ಪುನೀತ್(30 ಸಾವಿರ ರೂ) ಹಾಗೂ ಮ್ಯಾನೇಜರ್ ಭಾಸ್ಕರ್(25 ಸಾವಿರ ರೂ.) ಅವರಿಗೆ 85 ಸಾವಿರ ರೂ. ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು.

45 ಕೆ.ಜಿ. ವಿಭಾಗದ ಮಹಿಳಾ ಕರಾಟೆಯಲ್ಲಿ ಚಿನ್ನದ ಪದಕಗಳಿಸಿದ್ದ ಎಸ್. ಅಶ್ವಿನಿ(30 ಸಾವಿರ ರೂ) ಹಾಗೂ ತರಬೇತುದಾರ ಜಯ್ವಂತ್(30 ಸಾವಿರ ರೂ) ಅವರಿಗೆ 60 ಸಾವಿರ ರೂ., ಬೆಳ್ಳಿ ಗೆದ್ದ ದಿಯಾ ಎಸ್. ಅರಸ್(25 ಸಾವಿರ ರೂ.) ಮತ್ತು ಅವರ ತರಬೇತುದಾರ ಭಾರತಿಗೆ(20 ಸಾವಿರ ರೂ.) 45 ಸಾವಿರ ರೂ. ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಪುರುಷರ 60 ಕೆಜಿ ವಿಭಾಗದ ಕರಾಟೆಯಲ್ಲಿ ಕಂಚಿನ ಪದಕ ಗಳಿಸಿದ್ದ ಡಿ.ಎಸ್. ತೇಜಸ್ ಮತ್ತು ತರಬೇತುದಾರ ಜಯ್ವಂತ್‌ಗೆ (ತಲಾ 20 ಸಾವಿರ ರೂ. ನಗದು ಬಹುಮಾನ ನೀಡಲಾಯಿತು.

ಕಿಕ್ ಬಾಕ್ಸಿಂಗ್‌ನಲ್ಲಿ ಬೆಳ್ಳಿ ಪದಕ ಗಳಿಸಿದ್ದ ಗಿಬ್ಸನ್ ಕಾರ್ಲ್ ಮತ್ತು ತರಬೇತುದಾರರಿಗೆ ತಲಾ 25 ಸಾವಿರ ರೂ., ಕಂಚಿನ ಪದಕಗಳಿಸಿದ್ದ ಡಿ.ವಿನಿಥ್ ರಾಜ್, ಎಂ.ಗುಣಶೇಖರ್ ಮತ್ತು ದಿನೇಶ್‌ಕುಮಾರ್ ಅವರಿಗೆ ತಲಾ 20 ಸಾವಿರ ರೂ. ಮತ್ತು ಮಹಿಳಾ ಕಿಕ್ ಬಾಕ್ಸಿಂಗ್‌ನಲ್ಲಿ ಕಂಚಿನ ಪದಕಗಳಿಸಿದ ಎಸ್. ಶಾಲಿನಿ, ತರಬೇತುದಾರ, ಕಾಲೇಜಿಗೆ 60 ಸಾವಿರ ರೂ. ಮತ್ತು ಕುಸ್ತಿಯಲ್ಲಿ ಕಂಚಿನ ಪದಕಗಳಿಸಿದ್ದ ಎಸ್.ರಾಕೇಶ್, ತರಬೇತುದಾರ ಮಂಜಪ್ಪ ಮತ್ತು ಕಾಲೇಜಿಗೆ(ತಲಾ 20 ಸಾವಿರ ರೂ.) 60 ಸಾವಿರ ರೂ., ಕತ್ತಿವರಸೆಯಲ್ಲಿ ಕಂಚಿನ ಪದಕ ಗಳಿಸಿದ ಕೆ.ಆರ್. ಸಚಿನ್, ಕೋಚ್ ಶಾಂತರಾಜು ಹಾಗೂ ಕಾಲೇಜಿಗೆ ಸೇರಿದಂತೆ (ತಲಾ 20ಸಾವಿರ ರೂ.) 60 ಸಾವಿರ ನಗದು ಬಹುಮಾನ ನೀಡಲಾಯಿತು.

ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಪಂದ್ಯಾವಳಿಗಳಲ್ಲಿಯೂ ಮೈಸೂರು ವಿವಿಯ ವಿವಿಧ ತಂಡಗಳು ಸಾಧನೆ ಮಾಡಿದ್ದು, ಅದರಂತೆ ಮಹಿಳಾ ತಂಡಗಳು ಮೇಲುಗೈ ಸಾಧಿಸಿದೆ. ಇತ್ತೀಚೆಗೆ ನಡೆದ ಆಲ್ ಇಂಡಿಯಾ ಇಂಟರ್ ಯೂನಿವರ್ಸಿಟಿ ಖೋ–ಖೋ ಪಂದ್ಯಾವಳಿಯಲ್ಲಿ ಮೈಸೂರು ವಿವಿ ಮಹಿಳಾ ಖೋ–ಖೋ ತಂಡ ಮೊದಲ ಬಾರಿಗೆ ರೋಚಕ ಆಟದೊಂದಿಗೆ ಮೊದಲನೇ ಸ್ಥಾನ ಪಡೆಯಲು ಅಮೋಘ ಪ್ರದರ್ಶನ ನೀಡಿದ ತಂಡದ ಪ್ರತಿ ಕ್ರೀಡಾಪಟು, ಕೋಚ್, ಮ್ಯಾನೇಜರ್‌ಗೆ ಸೇರಿದಂತೆ(ತಲಾ 30 ಸಾವಿರ ರೂ.) 4 ಲಕ್ಷದ 20 ಸಾವಿರ ರೂ. ನಗದು ಬಹುಮಾನ ನೀಡಿದರೆ, ಹಾಕಿ ಕ್ರೀಡೆ ಮೂಲಕ ವಿವಿಗೆ ಬೆಳ್ಳಿ ತಂದುಕೊಟ್ಟ ಮಹಿಳಾ ಹಾಕಿ ತಂಡಕ್ಕೆ ಹಾಗೂ ಕೋಚ್, ಮ್ಯಾನೇಜರ್‌ಗೆ (ತಲಾ 25 ಸಾವಿರ ರೂ.)5 ಲಕ್ಷ ರೂ. ಹಾಗೂ ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನ ಪಡೆದ ಮಹಿಳಾ ತಂಡಕ್ಕೆ (ತಲಾ 4 ಸಾವಿರ ರೂ.) 56 ಸಾವಿರ ರೂ., ಹ್ಯಾಂಡ್‌ಬಾಲ್ ಗೇಮ್‌ನಲ್ಲಿ 3ನೇ ಪಡೆದುಕೊಂಡ ತಂಡ, ಕೋಚ್, ಮ್ಯಾನೇಜರ್‌ಗೆ(ತಲಾ 2 ಸಾವಿರ ರೂ.) 28 ಸಾವಿರ ರೂ., ನಗದು ಬಹುಮಾನ ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಮೈಸೂರು ವಿವಿ ಹಣಕಾಸಿನ ಅಧಿಕಾರಿ ಡಾ.ಸಂಗೀತ ಗಜಾನನ ಭಟ್, ವಿವಿ ಮಾಜಿ ಸಿಂಡಿಕೇಟ್ ಸದಸ್ಯೆ ಸಹನ ಶಿವಪ್ಪ ಮತ್ತು ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ಇವತ್ತೇನೋ ಬೇರೆ ಥರ ಕಾಣಿಸ್ತಿದೀಯಾ?
ಹೆಂಡತಿ : ಐದು ಕೆಜಿ ತೂಕ ಇಳಿಸಿಕೊಳ್ಳಬೇಕು ಅಂತ ಡಾಕ್ಟ್ರು ಹೇಳಿದ್ರು. ಅದಕ್ಕೆ ಇಳಿಸ್ಕೊಂಡೆ.
ಗಂಡ : ಒಂದೇ ದಿನದಲ್ಲಿ ಐದು ಕೆಜಿ ತೂಕ ಇಳಿಸ್ಕೊಂಡ್ಯಾ? ಹೇಗೆ?
ಹೆಂಡತಿ : ನಾನು ಮೇಕಪ್ ಮಾಡ್ಕೊಳೋದನ್ನ ಬಿಟ್ಟುಬಿಟ್ಟೆ. ಐದು ಕೆಜಿ ಕಡಿಮೆ ಆಯಿತು!

ಮೈಸೂರು ಮಿತ್ರ
ಬುಧವಾರ, 21 ಸೆಪ್ಟೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಬದುಕಿನ ಸರ್ವತೋಮುಖ ಬೆಳವಣಿಗೆಗೆ ನಮ್ಮ ಬುದ್ಧಿ, ಮನಸ್ಸು ಶ್ರೀಮಂತವಾಗಿರಬೇಕು. – ರವೀಂದ್ರನಾಥ ಠಾಕೂರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಪುಟ್ಯಾನ ಜ್ವಾಳ ತೀರಿದ್ರೂ, ಹೊಟ್ಯಾನ ಹಾಡು ತೀರಲಿಲ್ಲ

ನಿಮ್ಮ ಪತ್ರಗಳು

ಕಳೆಗಟ್ಟುತ್ತಿರುವ ಮೈಸೂರು ದಸರಾ...!

ಮಾನ್ಯರೆ,

ವಿಶ್ವವಿಖ್ಯಾತ ಮೈಸೂರು ದಸರಾ ವೈಭವ ಮತ್ತು ಸಂಭ್ರಮ ಕಣ್ತುಂಬಿಕೊಳ್ಳಲು ಸಾಂಕ್ರಾಮಿಕ ರೋಗ ಕೊರೊನಾದಿಂದ ಸಾಧ್ಯವಾಗದೆ ಜನರಿಗೆ ನಿರಾಸೆಯಾಗಿತ್ತು. ಕಳೆದ ಮೂರು ವರ್ಷಗಳಿಂದ ಸರಳ ಮತ್ತು ಸಂಪ್ರದಾಯ ದಸರಾಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಈ ವರ್ಷ ನಾಡಹಬ್ಬ ದಸರಾಕ್ಕೆ ಮೈಸೂರು ಸಕಲ ಸಿದ್ಧತೆಗಳೊಂದಿಗೆ ಮದುವಣಗಿತ್ತಿಯಂತೆ ಹದಗೆಟ್ಟ ರಸ್ತೆಗಳನ್ನೂ ಬಿಟ್ಟು ಸಿಂಗಾರಗೊಳ್ಳುತ್ತಿದೆ. ಈ ಬಾರಿ ದಸರಾದ ಇನ್ನೊಂದು ವಿಶೇಷವೆಂದರೆ ದೇಶದ ಪ್ರಥಮ ಪ್ರಜೆಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸುತ್ತಿರುವುದು ದಸರಾದ ಇನ್ನಷ್ಟು ಹಿರಿಮೆ ಹೆಚ್ಚಲಿದೆ. ಲಕ್ಷಾಂತರ ಜನರು ಬೇರೆ ಬೇರೆ ರಾಜ್ಯಗಳಿಂದ, ಜಿಲ್ಲೆಗಳಿಂದ, ವಿದೇಶಿಯರು ಕುಟುಂಬ ಸಮೇತರಾಗಿ ಆಗಮಿಸಲು ಕಾತುರದಿಂದ ಕಾಯುತ್ತಿದ್ದಾರೆ. ನವರಾತ್ರಿಯ 9 ದಿನಗಳಂದು ವಿವಿಧ ಕಾರ್ಯಕ್ರಮಗಳಾದ ಫ್ಲವರ್ ಶೋ, ಆಹಾರಮೇಳ, ಆರೋಗ್ಯಕ್ಕಾಗಿ ಯೋಗ, ನಗರದ ಮುಖ್ಯ ರಸ್ತೆ, ವೃತ್ತಗಳು, ಸಾಧನೆಗೈದ ಮಹನೀಯರ ಚಿತ್ರಪಟಗಳು, ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿರುವ ಪಾರಂಪರಿಕ ಕಟ್ಟಡಗಳು, ಸಿಳ್ಳೆ ಕೇಕೆಗಳಿಂದ ಮೈಮನ ರೋಮಾಂಚನಗೊಳಿಸಿ ಹುಚ್ಚೆದ್ದು ಕುಣಿದು ಕುಪ್ಪಳಿಸಲು ಕಾಲೇಜು ವಿದ್ಯಾರ್ಥಿಗಳಿಗಾಗಿ ಯುವ ದಸರಾ ಸಂಭ್ರಮ, ಮರಳಿನ ಕಲಾಕೃತಿಗಳ ಆಕರ್ಷಣೆ, ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆಗಳು, ಸಂಗೀತ, ಚಲನಚಿತ್ರ ಪ್ರದರ್ಶನ, ಟಾರ್ಚ್ ಲೈಟ್ ಪೆರೇಡ್, ವಿವಿಧ ರೀತಿಯ ಕ್ರೀಡೆಗಳು, ನಾಟಕ, ಪರಂಪರೆ ಮತ್ತು ಇತಿಹಾಸ ಮೆರೆಸುವ ಗೊಂಬೆಗಳ ಪ್ರದರ್ಶನ, ಕುಸ್ತಿ, ವಜ್ರಮುಷ್ಟಿ ಕಾಳಗ, ವಸ್ತು ಪ್ರದರ್ಶನ ಹೀಗೆ ಹತ್ತು ಹಲವು ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮಗಳ ಆಯೋಜನೆಯಿಂದ ಮನರಂಜನೆಯ ರಸದೌತಣವನ್ನು ಉಣಬಡಿಸಲು ಸಾಂಸ್ಕೃತಿಕ ನಗರಿ ಮೈಸೂರು "ಇಂದ್ರನ ಅಮರಾವತಿಯನ್ನು ನಾಚಿಸುವಷ್ಟರ ಮಟ್ಟಿಗೆ" ಕಳೆಗಟ್ಟುತ್ತಿದೆ. ನವರಾತ್ರಿಯ 9 ದಿನಗಳು ಕಳೆದು ಹತ್ತನೇ ದಿನ ವಿಜಯದಶಮಿಯಂದು "ಜಂಬೂಸವಾರಿ" ಅತ್ಯಾಕರ್ಷಕವಾಗಿರುತ್ತದೆ. ಆನೆಯ ಮೇಲೆ 800 ಕೆಜಿ ಚಿನ್ನದ ಅಂಬಾರಿ ಇಟ್ಟು ವಿವಿಧ ಬಗೆಯ ಹೂವಿನ ಅಲಂಕಾರಗಳಿಂದ ಸಿಂಗರಿಸಿ, ತಾಯಿ ಜಗನ್ಮಾತೆ ಶ್ರೀ ಚಾಮುಂಡೇಶ್ವರಿ ತಾಯಿಯ ವಿಗ್ರಹವನ್ನು ಕೂರಿಸಿ, ಲಕ್ಷಾಂತರ ಜನರನ್ನು ಭಕ್ತಿ ಪರವಶರನ್ನಾಗಿ ಮಾಡಲಾಗುತ್ತದೆ. ಗಜಗಾಂಭೀರ್ಯದಿಂದ ಪ್ರಮುಖ ರಸ್ತೆಗಳಲ್ಲಿ ಆನೆಗಳ ತಂಡ, ವಿವಿಧ ಕಲಾ ತಂಡಗಳು ಹಾಗೂ ಟ್ಯಾಬ್ಲೋಗಳ ವೈಶಿಷ್ಟ್ಯಪೂರ್ಣ ಮೆರವಣಿಗೆಯ ಮೂಲಕ ಸಂಚರಿಸುವುದನ್ನು ವೀಕ್ಷಿಸಲು ಎರಡೂ ಕಣ್ಣು ಸಾಲದು. ಈ ಎಲ್ಲಾ ಸಂಭ್ರಮ, ಸಡಗರ, ವೈಭವವನ್ನು ವೀಕ್ಷಿಸಿ ಕಣ್ತುಂಬಿಕೊಳ್ಳಲು ಲಕ್ಷಾಂತರ ಜನರು ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ.

–ಪರಶಿವಮೂರ್ತಿ ಎನ್.ಪಿ, ನಂಜೇಪುರ, ಸರಗೂರು ತಾಲೂಕು.

ಅನೈತಿಕ ಚಟುವಟಿಕೆಗಳ ತಾಣ ಅಂಡರ್‌ಗ್ರೌಂಡ್

ಮಾನ್ಯರೆ,

ದಸರಾ ಸಮೀಪಿಸುತ್ತಿದ್ದಂತೆಯೇ ಪ್ರವಾಸಿಗರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮೈಸೂರು ಕಡೆ ಬರುತ್ತಿದ್ದಾರೆ. ಮೈಸೂರಿನ ಸ್ವಚ್ಛತೆ ಕಾಪಾಡುವುದರಲ್ಲಿ ನಗರಪಾಲಿಕೆ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ.

ಮೈಸೂರಿನಲ್ಲಿರುವ ಅರಮನೆಗೂ ಹಾಗೂ ವಸ್ತು ಪ್ರದರ್ಶನಕ್ಕೆ ಹೋಗುವ ಅಂಡರ್ ಗ್ರೌಂಡ್ ಸೇರಿದಂತೆ ಮೈಸೂರಿನಲ್ಲಿ ಇನ್ನಿತರ ಅಂಡರ್‌ಗ್ರೌಂಡ್‌ಗಳು ಗಬ್ಬು ನಾರುತ್ತಿದೆ. ಲಕ್ಷಾಂತರ ರೂ. ಖರ್ಚು ಮಾಡಿ ಪಾದಚಾರಿಗಳ ಉಪಯೋಗಕ್ಕಾಗಿ ಮಾಡಿದ ಅಂಡರ್‌ಗ್ರೌಂಡ್ ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಇನ್ನೂ ಕೆಲವು ಅಂಡರ್‌ಗ್ರೌಂಡ್‌ಗೆ ಬೀಗ ಹಾಕಲಾಗಿದೆ. ನಗರಪಾಲಿಕೆ ಅಧಿಕಾರಿಗಳು ಈಗಲಾದರೂ ಪಾದಚಾರಿಗಳಿಗೆ ಓಡಾಡಲು ಅಂಡರ್ ಗ್ರೌಂಡ್ ಸ್ವಚ್ಛಗೊಳಿಸಿ ಒಬ್ಬ ಸೆಕ್ಯುರಿಟಿ ಗಾರ್ಡ್ ನೇಮಿಸಿ ಪೂರ್ಣ ಪ್ರಮಾಣದಲ್ಲಿ ಆಗದೇ ಇದ್ದರೂ ದಸರಾ ಸಂದರ್ಭದಲ್ಲಾದರೂ ಸೆಕ್ಯೂರಿಟಿ ಗಾರ್ಡ್ ನೇಮಿಸಿ ಹಾಗೂ ಸ್ವಚ್ಛತೆ ಕಾಪಾಡಿ ಸ್ವಚ್ಛ ನಗರಿ ಹೆಸರು ಉಳಿಸುವ ಕೆಲಸ ಮಾಡಬೇಕು. ಇಲ್ಲವಾದಲ್ಲಿ ವಿವಿಧ ಸಂಘಟನೆಗಳ ಜೊತೆ ಸೇರಿ ನಗರಪಾಲಿಕೆ ಮುಂಭಾಗ ಪ್ರತಿಭಟಿಸಬೇಕಾಗುತ್ತದೆ.

–ವಿಕ್ರಂ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ ಮೈಸೂರು

ಕುಸ್ತಿ ಕ್ರೀಡಾಂಗಣಕ್ಕೆ ಮೇಲ್ಛಾವಣಿ ಅಳವಡಿಸಿ

ಮಾನ್ಯರೆ.

ವಿಶ್ವ ವಿಖ್ಯಾತ ಮೈಸೂರು ದಸರಾ ಹಬ್ಬಕ್ಕೂ ಕುಸ್ತಿಗೂ ಅವಿನಾಭಾವ ಸಂಬಂಧ. ಮಹಾರಾಜರ ಕಾಲದಿಂದಲೂ ನಡೆದುಕೊಂಡು ಬಂದ ಈ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಲು ರಾಜ್ಯದ ವಿವಿಧ ಭಾಗಗಳಿಂದ ಪೈಲ್ವಾನರು ಭಾಗವಹಿಸುವುದಲ್ಲದೆ, ಬೇರೆ ಬೇರೆ ರಾಜ್ಯಗಳಿಂದಲೂ ಭಾಗವಹಿಸುವರು. ಪ್ರಜಾಪ್ರಭುತ್ವದ ನಂತರ ರಾಜ್ಯ ಸರ್ಕಾರ ಮತ್ತು ಜಿಲ್ಲಾ ಆಡಳಿತ ವತಿಯಿಂದ ಈ ಸಂಪ್ರದಾಯದ ಮುಂದುವರಿಸಿಕೊಂಡು ಬರಲಾಗುತ್ತಿದೆ. ನಾಡಕುಸ್ತಿ, ಕುಸ್ತಿ, ಮಹಿಳಾ ಕುಸ್ತಿ ಹಾಗೂ ಕಿಶೋರ್ ಪ್ರಶಸ್ತಿ, ಕುಮಾರ್ ಪ್ರಶಸ್ತಿ, ಕೇಸರಿ ಪ್ರಶಸ್ತಿ, ಕಂಠೀರವ ಪ್ರಶಸ್ತಿಗಳನ್ನು ಒಳಗೊಂಡು ನಡೆಸುವ ಈ ಪಂದ್ಯಾವಳಿಯನ್ನು ನೋಡಲು ರಾಜ್ಯದ ವಿವಿಧ ಭಾಗಗಳಿಂದ ಕುಸ್ತಿ ಪ್ರೇಮಿಗಳಿಗೆ ಕೂರಲು ಕಲ್ಲಿನ ಆಸನ (ಗ್ಯಾಲರಿ) ವ್ಯವಸ್ಥೆ ಮಾಡಲಾಗಿದೆ. ಆದರೆ ಮಳೆ ಬಂದರೆ ಮೇಲ್ಛಾವಣಿ ಇಲ್ಲದೆ ವೀಕ್ಷಕರು ಮಳೆಯಲ್ಲಿಯೇ ಕುಸ್ತಿ ವೀಕ್ಷಿಸಬೇಕಾದ ಪರಿಸ್ಥಿತಿ ಇದೆ. ದಸರಾ ಹಬ್ಬಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವಾಗ ಇಂತಹ ದೇಸಿ ಕ್ರೀಡೆ ಪ್ರೋತ್ಸಾಹಿಸುವ ಸಾವಿರಾರು ವೀಕ್ಷಕರಿಗೆ ಮೇಲ್ಛಾವಣಿ ಕಲ್ಪಿಸಲಿ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ಗುಂಡಿ (ಗೆ)	'ಘೋ'ಷಣೆ
ಗುಂಡಿ ಬಿದ್ದಿರುವುದು ರಸ್ತೆಗಳಲ್ಲಲ್ಲ; ಮೊದಲು ಆಳುವವರ ಗುಂಡಿಗಳಲ್ಲಿ ! (ಹೃದಯಕ್ಕೆ ಅಚ್ಚಗನ್ನಡ ಶಬ್ದ ಗುಂಡಿಗೆ)	"ನಾನು ಗೋಮಾಂಸ ತಿನ್ನುತ್ತೇನೆ!" ಎಂದು ಗಣ್ಯರೊಬ್ಬರ ಘೋಷಣೆ. ತಿನ್ನಲಿ, ಸದ್ಯ "ನರಮಾಂಸ ತಿನ್ನುತ್ತೇನೆ" ಎಂದಿಲ್ಲವಲ್ಲ (ಅನೇಕರು ಸಾಂಕೇತಿಕವಾಗಿ ಅದನ್ನೂ ಮಾಡುತ್ತಾರೆ!)

(ಮೆಚ್ಚುಗೆ : ಡಾ. ಎ.ರಂಗನಾಥ್ ಅವರ ಅಂಕಣ ಬರಹಗಳು ಮನನಯೋಗ್ಯ)

–ಸಿಪಿಕೆ, ಮೈಸೂರು



ಅಡ್ಡಂಡ ಸಿ. ಕಾರ್ಯಪ್ಪ
ನಿರ್ದೇಶಕರು, ರಂಗಾಯಣ, ಮೈಸೂರು
email : addandacariappa@gmail.com

ಪ್ರಚಲಿತ

'ಹರ'ದಾಸನಾದ ಅಪ್ಪಚ್ಚನೆಂಬ ಕವಿ

ಕೊಡಗಿನ ನಾಪೋಕ್ಲು ಎಂಬ ನಾಡಿನ ಕಿರುಂದಾಡು ಎಂಬ ದಟ್ಟ ಅರಣ್ಯ ಪ್ರದೇಶದ ಹಚ್ಚಹಸಿರಿನ ಕುಗ್ರಾಮದಲ್ಲಿ ಕವಿಯೊಬ್ಬನ ಸುಂದರ ಮನೆ ಮಧ್ಯ ರಾತ್ರಿ ಬೆಂಕಿಗೆ ಆಹುತಿಯಾಗಿದೆ. ಆ ಮನೆಯಲ್ಲಿ ಕವಿ ಬರೆದ ನಾಟಕಗಳು, ಕಾವ್ಯಗಳ ಹಸ್ತಪ್ರತಿಗಳು, ಮುದ್ರಣಗೊಂಡ ಪುಸ್ತಕಗಳು, ಸಂಗ್ರಹಿತ ಅಪಾರ ಸಂಖ್ಯೆಯ ಪೌರಾಣಿಕ ಕಥೆಗಳು, ದಾಸರ ಕೀರ್ತನೆಗಳು ಜೊತೆಗೆ ಕವಿ ಜೀವಿತ ಕಾಲದಲ್ಲಿ ಉಳಿಸಿದ್ದ ಹಣ ಎಲ್ಲವೂ ಬೆಂಕಿಯ ಕೆನ್ನಾಲಿಗೆಗೆ ಆಹುತಿಯಾಗಿದೆ. ಎಚ್ಚರಗೊಂಡ ಕವಿ ಕೈಗೆ ಸಿಕ್ಕಿದ ವಸ್ತುವೊಂದನ್ನು ತಬ್ಬಿ ಹಿಡಿದು ಹೊರಗೆ ಓಡಿ ಬಂದು ದಿಗ್ಭ್ರಾಂತರಾಗಿ ನಿಂತಿದ್ದಾರೆ. ನೋಡ ನೋಡುತ್ತಿದ್ದಂತೆ ಬೆಂಕಿಯ ಜ್ವಾಲೆ ಮುಗಿಲೆತ್ತರಕ್ಕೆ ಹೋಗಿದೆ. ಕಣ್ಣು ಕತ್ತಲೆ ಬಂದ ಕವಿ ದಿಕ್ಕು ತೋಚದಂತಾಗಿ ಇದೇ ಬೆಂಕಿಯಲ್ಲಿ ತಾನು ಉರಿದು ಹೋಗಲಿ ಎಂದು ಓಡಿ ಬಂದು ಬೆಂಕಿಗೆ ಹಾರಲು ಯತ್ನಿಸಿದಾಗ ಅವರ ಕಿರಿಯ ಮಗ ತಂದೆಯನ್ನು ತಬ್ಬಿ ಹಿಡಿದು ರೋದಿಸಿ ಹೇಳುತ್ತಾನೆ 'ಆ ಭಗವಂತ ನಿನ್ನನ್ನು ಹುಟ್ಟಿಸಿದ್ದು ಸಾಯಲೆಂದಲ್ಲ, ನಿನ್ನ ಅಗತ್ಯತೆ ಕೊಡಗಿಗೆ ಇದೆ. ನೀನು ಈ ಸಮಾಜದ ಆಸ್ತಿ'.

ಈ ಕವಿ ಯಾರು ಗೊತ್ತೆ? ಕೊಡಗಿನ ಆದಿಕವಿ ಎಂದೇ ಕರೆಸಿಕೊಂಡ 'ಹರದಾಸ ಅಪ್ಪಚ್ಚ ಕವಿ'. ಕವಿಯನ್ನು ಬೆಂಕಿಗೆ ಆಹುತಿಯಾಗದಂತೆ ತಬ್ಬಿ ಹಿಡಿದ ಅವರ ಕಿರಿಯ ಮಗ ಅಪ್ಪನೆರವಂಡ ಅಯ್ಯಣ್ಣ. ಅಪ್ಪಚ್ಚ ಕವಿ ಮುಜರಾಯಿ ಇಲಾಖೆಯ ನೌಕರ ನಾಗಿ ಸ್ವಯಂ ನಿವೃತ್ತಿ ಹೊಂದಿ ಕೊಡವ ಭಾಷೆ ಸಾಹಿತ್ಯ ಕೃಷಿಯೊಂದಿಗೆ ಕಾಫಿ, ಕಿತ್ತಳೆ ಕೃಷಿ ಮಾಡಿ ಒಂದಷ್ಟು ಹಣವನ್ನು ಸಂಪಾದಿಸಿ ನೆಮ್ಮದಿಯ ಬದುಕಿನಲ್ಲಿದ್ದಾಗ ಈ ಅನಾಹುತ ನಡೆದು ಹೋಗಿ ನಿರ್ಗತಿಕರಾಗಿಬಿಟ್ಟರು. ಚಟಪಟ ಶಬ್ದ ಮಾಡುತ್ತಾ ಉರಿಯುತ್ತಿದ್ದ ಮನೆಯ ಬೆಂಕಿಯ ಕೆಂಬೆಳಕಿನಲ್ಲಿ ಕವಿಯ ಮುಖ ರೌದ್ರತೆಯಲ್ಲಿರಲಿಲ್ಲ. 'ಇದೆಲ್ಲವೂ ಭಗವಂತನ ಲೀಲೆ' ಎಂದು ತನ್ನಷ್ಟಕ್ಕೆ ಸಮಾಧಾನಿಸಿಕೊಂಡು ಸದಾ ತನ್ನ ಜೇಬಿನಲ್ಲಿರಿಸಿಕೊಳ್ಳುತ್ತಿದ್ದ ಟಿಪ್ಪಣಿ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ.

**ಕೊಡುವ ಕರ್ತು ಬೇರೆಯಿರುತಿರೆ ।
ಬಿಡು ಬಿಡು ಚಿಂತೆಯನು ॥ ಪ ॥
ಕಡುಲೋಭಿಯು ಕೊಡ ಕಾಸನು ನಿನಗೆ ।
ದೃಢ ಮನದಲಿ ಅಮೃತನನು
ಧ್ಯಾನಿಸು ॥ಪ॥ ಹೊನ್ನು ಹೆಣ್ಣು
ಮಣ್ಣು ಮನುಜರ । ಬಣ್ಣಗೆಡಿಪ
ಹುಣ್ಣು॥ ನಿನ್ನ ನೋಡು ನೀನು
ಯಾರೆಂದು ಯೋಚಿಸಿ । ಪನ್ನಗಧರ ಪರ
ಮೇಶನ ಧ್ಯಾನಿಸು ।
ಯೋಚಿಸಿ ಫಲವಿಲ್ಲ ನೀನದರ । ಯೋಚಿಸಿ
ಗುಣವಿಲ್ಲ । ಮೋಸಗಾರ
ಬಿಕನಾಸಿಯ ಬೇಡದೆ । ಆಶಿಸುವಿನಯದೆ
ಈಶನು ಕೊಡುವನು ॥ಪ॥**

ಮನೆಯೊಳಗಿಂದ ತಬ್ಬಿ ತಂದಿದ್ದ ಹಾರ್ಮೋನಿಯಂ ನುಡಿಸುತ್ತಾ ಬರೆದು ಮುಗಿಸಿದ್ದ ಹಾಡನ್ನು ತನ್ನಷ್ಟಕ್ಕೆ ಹಾಡತೊಡಗುತ್ತಾನೆ. ಅಪ್ಪ ಹಾಡುತ್ತಿದ್ದಾನೆ. ಹೆಂಡತಿ, ಮಗ ಪಕ್ಕದಲ್ಲಿ ಕುಳಿತು ಕಣ್ಣೀರು ಸುರಿಸುತ್ತಿದ್ದಾರೆ. ತನ್ನ ಕಿರಿಯ ಮಗನ ಮದುವೆಯ ಖರ್ಚಿಗೆಂದು ಸಂಗ್ರಹಿಸಿದ ಹಣವೂ ಇಲ್ಲದೆ ಉಳಿದದ್ದು ಹಾರ್ಮೋನಿಯಂ ಎಂಬ ತನ್ನ ಸಂಗಾತಿ ಮಾತ್ರ.

ಕವಿಯ ಮನೆಗೆ ಬೆಂಕಿ ಬಿದ್ದ ಸುದ್ದಿ ಕೇಳಿ ಮರುದಿನ ನೂರಾರು ಪ್ರೀತಿ ಪಾತ್ರರು, ಬಂಧುಗಳು ಬಂದು ಕವಿಯನ್ನು ಸಂತೈಸತೊಡಗಿದಾಗ ಕವಿ ಅವರಿಗೆ ಹೇಳಿದ ಮಾತಿದು.

"ನನ್ನನ್ನು ಒಬ್ಬ ಸಾಧುವೆಂದು ಸಕಲರು ಪ್ರೀತಿಸುವ ಒಂದು ಸ್ವಭಾವ ಅನೇಕರಿಗಿತ್ತು. ಇದರಿಂದ ನನಗೆ ಯಾವ ಭಯವೂ ಇರಲಿಲ್ಲ. ಆದರೆ, ರಾತ್ರಿಯ ಸಮಯದಲ್ಲಿ ನರಾಧಮಳಾದ ಸ್ತ್ರೀಯೋ ಯಾ ಪುರುಷ ಪಾಪಿಯೋ ಅವರ ಜನ್ಮಾರ್ಜಿತ ಕರ್ಮಾನುಸಾರ ನನ್ನ ವಾಸದ ಸ್ವಂತ ಭವನಕ್ಕೆ ಬೆಂಕಿ ಕೊಟ್ಟು ಭಸ್ಮಾ ಮಾಡಿದರು. ತಂದೆಗೆ ಏಕಮಾತ್ರ ಪುತ್ರನಾಗಿ 60 ವರ್ಷದವರೆಗೆ ಕಷ್ಟಪಟ್ಟು ಸಂಪಾದಿಸಿದ್ದಲ್ಲಾ ದಗ್ಧವಾದ ದುಃಖವು ವೃದ್ಧಾಪ್ಯದಲ್ಲಿ ಸಂಭವಿಸಿತು. ನಷ್ಟವಾದ ಅಪೂರ್ವ ವಸ್ತುಗಳು ನನ್ನ ಅವಸಾನದ ಪರ್ಯಂತ ಜಮಾಯಿಸತಕ್ಕದ್ದಲ್ಲ. ಕಾಲಧರ್ಮಕ್ಕೆ ಸರಿಯಾಗಿ ಆಪತ್ಕಾಲಕ್ಕೆ ಅತೀ ಸೂಕ್ಷ್ಮವಾಗಿ ಸಂಗ್ರಹಿಸಿದ್ದ ಧನವೂ ನಾಶವಾದುದರಿಂದ ಪ್ರಜ್ವಲಿಸುತ್ತಿದ್ದ ಆ ಅಗ್ನಿಯಲ್ಲೇ ನನ್ನ ಆತ್ಮದಿಂದೊಡಗೂಡಿದ ದೇಹವು ಐಕ್ಯವಾಗಲೆಂಬ ಆನಂದವು ಕುದಿಯುತ್ತಿದ್ದಾಗ್ಯೂ ನನ್ನ ಕಿರಿಯ ಮಗನ ಬಿಗಿ ಹಿಡಿತ ಅದಕ್ಕೆ ವಿಘ್ನ ಮಾಡಿದ್ದುದರಿಂದ ಶುಭಕ್ಕೋ ಅಶುಭಕ್ಕೋ ಈ ಜೀವವು ಉಳಿದ ಹಾಗೇ ಆಯಿತು. ನನಗೆ ಶತ್ರುಗಳು ಇರಬಾರದೆಂಬ ನನ್ನ ಪೂಜಾ ಧ್ಯಾನಕ್ಕೆ ಸರಿಯಾಗಿ ಶತ್ರುಗಳು ಇಲ್ಲವೆಂದೇ ಭರವಸೆ ಇತ್ತು. ಮಾಡತಕ್ಕದೇನು? ಉದರದೊಳಗಿನ ಹುಳಕ್ಕೆ ವಿಷವುಂಟೆಂದು ಯಾರು ತಾನೇ ನಂಬುತ್ತಾರೆ? ಪುರಾಣ ಪುರುಷರಾದ ಪಾಂಡವ–ಕೌರವರಲ್ಲೇ ಏನೇನೋ ಅನರ್ಥಗಳು ನಡೆದಿರುವಾಗ್ಗೇ ತೃಣಸಮಾನನಾದ ನಮಗಳಲ್ಲಿ ನಡೆದ ಈ ಪಾಪ ಕೆಲಸವನ್ನು ವಿಸ್ತರಿಸುವುದು ವ್ಯರ್ಥವೇ ಸರಿ"



ಅಪ್ಪಚ್ಚ ಕವಿ

ಅದು ಬ್ರಿಟಿಷರ ಆಡಳಿತದ ಕಾಲ, ಕವಿಯನ್ನು ಸಂತೈಸಲು ಬಂದವರು ಪರಿಹಾರಕ್ಕೆ ಸರ್ಕಾರಕ್ಕೆ ಅರ್ಜಿ ಬರೆಯಲು ಒತ್ತಾಯಿಸಿದರು. ಅವರ ಒತ್ತಾಯಕ್ಕೆ ಕವಿ ಅರ್ಜಿ ಬರೆದರು. ಸರ್ಕಾರದಿಂದ ಸಿಕ್ಕ ಪರಿಹಾರ ಹಣ ಕೇವಲ ರೂ.50/–. ಸರ್ಕಾರದ ಪರಿಹಾರದ ಧನಕ್ಕೆ ಖಿನ್ನರಾದ ಕವಿ 50 ರೂಪಾಯಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿ, ಹೀಗೆಂದು ಬರೆಯುತ್ತಾರೆ. ಸರ್ಕಾರ ನೀಡಿರುವ 50 ರೂಪಾಯಿ ನನ್ನ ಯಾವ ಕಷ್ಟ ನಷ್ಟವನ್ನೂ ಲವಲೇಶವೂ ಪರಿಹರಿಸಲಾರದು. ಆದುದರಿಂದ ಈ ಹಣವು ನನಗೆ ಅವಶ್ಯವಿರುವುದಿಲ್ಲ. ದೊರೆಗಳಿಗೆ (ಬ್ರಿಟೀಷ್ ಅಧಿಕಾರಿಗಳಿಗೆ) ನನ್ನ ನಮಸ್ಕಾರವಿದೆ.

ಅಂದೇ ಕವಿ ನಿರ್ಧರಿಸಿ ಆಗಿತ್ತು. ತನ್ನ ಮುಂದಿನ ಬದುಕಿನ ಬಗ್ಗೆ. ಹೆಂಡತಿ, ಮಗನನ್ನು ನಾಪೋಕ್ಲಿನ ಬಾಡಿಗೆ ಮನೆಯೊಂದರಲ್ಲಿ ಇರಿಸಿ ಹೊರಟೇ ಬಿಟ್ಟರು 'ಹರದಾಸ'ರಾಗಿ. ಅಂದಿನಿಂದ ಈ ಕೊಡವ ಕವಿ 'ಹರದಾಸ ಅಪ್ಪಚ್ಚ ಕವಿ'ಯಾದರು. 1927 ರಂದು ಮನೆ ಬಿಟ್ಟು ಹೊರಟ ಕೊಡವ ಕೀರ್ತನಕಾರ ಹರದಾಸ ಅಪ್ಪಚ್ಚ ಮಂಗಳೂರು, ಹುಣಸೂರು, ಪಿರಿಯಾಪಟ್ಟಣ, ಹಾಸನ ಮತ್ತು ಕೊಡಗಿನ ಹಳ್ಳಿ ಹಳ್ಳಿ ಸುತ್ತಿದ್ದಾರೆ. ಸಾಕಷ್ಟು ಕೀರ್ತನೆಗಳನ್ನು ಬರೆದು ತಾನೇ ರಾಗ ಕಟ್ಟಿ ಹಾಡಿದ್ದಾರೆ.

ಒಂದು ಭಾಷೆಯನ್ನು ಉಳಿಸಿಕೊಳ್ಳುವುದು ಕಷ್ಟ, ಅದರಲ್ಲೂ ಲಿಪಿಯಿಲ್ಲದ ಭಾಷೆಯನ್ನು ಉಳಿಸಿಕೊಳ್ಳುವುದೇ ಕಷ್ಟ ಇರುವಾಗ ಅದನ್ನು ಉಳಿಸಿ ಬೆಳೆಸಿದ್ದು, ಅತ್ಯಂತ ದೊಡ್ಡ ಸಾಹಸ. 1868ರ ಸೆಪ್ಟೆಂಬರ್ 21 ರಲ್ಲಿ ಹುಟ್ಟಿ ನಾಲ್ಕನೇ ತರಗತಿವರೆಗೆ ಓದಿದ ಒಬ್ಬ ಸಾಮಾನ್ಯ ವ್ಯಕ್ತಿ ಅದ್ಭುತ ಕವಿಯಾಗಿ ಅವತರಿಸಿದ್ದು, ವಸಾಹತುಶಾಹಿ ಪಾರುಪತ್ಯೆ ಮೆರೆದ ಕಾಲದಲ್ಲಿ. ಇವರ ಆಡಳಿತದ ಇಂಗ್ಲೀಷನ್ನು ಮೆಟ್ಟಿನಿಂತು ಕೊಡವ ಭಾಷೆಯನ್ನು ಬೆಳೆಸಿದವರು ನಾಟಕಕಾರ – ಕವಿ ಅಪ್ಪಚ್ಚ. ಪುರಾಣದ ಕಥೆಗಳನ್ನು ವಸ್ತುವಾಗಿ ಆರಿಸಿಕೊಂಡರೂ ಕೊಡವ ಸಂಸ್ಕೃತಿ ಛಾಪನ್ನು ಮೂಡಿಸುತ್ತಾ, ಸಮಾಜಕ್ಕೆ ಕನ್ನಡಿ ಹಿಡಿಯುವ ಕೆಲಸವನ್ನು ದಿಟ್ಟತನದಿಂದಲೇ ಮಾಡಿದ್ದಾರೆ.

ಕನ್ನಡ ಭಾಷೆಯೇ ಕೊಡಗಿನಲ್ಲಿ ಎಡವುತ್ತಾ ಸಾಗುತ್ತಿದ್ದ ಕಾಲಘಟ್ಟವದು. ಕೊಡಗಿನಲ್ಲಿ ಸಾಹಿತ್ಯ–ಕಾವ್ಯದ ವಾತಾವರಣವೇ ಇರಲಿಲ್ಲ. ಕೊಡವರು ತಮ್ಮ ಕ್ಷಾತ್ರ ಪರಂಪರೆಯಂತೆ ಯುದ್ಧ, ಬೇಟೆ, ಕ್ರೀಡೆ ಇದರಲ್ಲೇ ಆಸಕ್ತಿ ತಾಳಿಕೊಂಡಿದ್ದ, ತಮ್ಮನ್ನು ಪೂರ್ಣವಾಗಿ ಅರ್ಪಿಸಿಕೊಂಡಿದ್ದ ಕಾಲ. ಈ ಸಮಯದಲ್ಲಿ ಕೈಯ್ಯಲ್ಲಿ ಪುಸ್ತಕ ಹಿಡಿದು, 'ಕೊಡವ ಸಾಂಪ್ರದಾಯಿಕ ಉಡುಪಿ'ನಲ್ಲಿ ಕೊಡವರಿಗೆ ವಿದ್ಯೆಗೆ ಸಂಕೇತ ಎಂಬಂತೆ ಬಂದವರು ಅಪ್ಪಚ್ಚಕವಿ. ತಮ್ಮ ಬರಹಕ್ಕೆ ಆರಿಸಿಕೊಂಡ ಮಾಧ್ಯಮ ನಾಟಕ. ಜನರಿಗೆ ಸುಲಭವಾಗಿ ತಲುಪಬಹುದೆಂಬ ಕಾರಣವೂ ಇರಬಹುದು.

ಕೊಡವ ಭಾಷೆ ಹಳ್ಳಿಗಾಡಿನ ಗೊಡ್ಡು ಭಾಷೆ, ಇದಕ್ಕೇನು ಸ್ಥಾನಮಾನವಿಲ್ಲ ಎಂದು ಮೂಗು ಮುರಿಯುತ್ತಾ, ಭಾಷೆ ಅವಹೇಳನಕ್ಕೆ ತುತ್ತಾಗಿ ಮಾತೃಭಾಷೆಯನ್ನಾಡುವ ಜನರೂ ಕೊಡವ ಭಾಷೆಯನ್ನು ಮೂಲೆಗುಂಪು ಮಾಡುವ ಮನಸ್ಥಿತಿಗೆ ತಲುಪಿದಾಗ ಅಪ್ಪಚ್ಚುಕವಿ ಎದ್ದು ಬಂದರು. ಕೊಡವ ಭಾಷೆ ಒಂದು ಸ್ವತಂತ್ರ ಭಾಷೆ, ಈ ಭಾಷೆಗೊಂದು ಸುಂದರ, ಶ್ರೀಮಂತಿಕೆಯ ಸಂಸ್ಕೃತಿ ಇದೆ ಎಂದರಿತ ಕವಿ ಭಾಷೆಗೆ ಸಂಸ್ಕೃತದ ಲೇಪನ ಮಾಡಿದರು. ಪಂಡಿತ ಪಾಮರರು, ತಲೆದೂಗುವಂತೆ ಕಾವ್ಯ ರಚನೆ ಮಾಡಿ ತೋರಿಸಿದರು. ಅದ್ಭುತ ನಾಲ್ಕು ನಾಟಕಗಳನ್ನು ಬರೆದು ತಂಡ ಕಟ್ಟಿ ಪ್ರದರ್ಶನ ಮಾಡಿದರು. ಜೊತೆಗೆ ಈ ನಾಟಕಗಳ ಪ್ರಕಟಣೆಯನ್ನು ಮಾಡಿದರು. 1906ರಲ್ಲಿ ಇವರ ಮೊದಲ ನಾಟಕ 'ಯಯಾತಿ' ಪ್ರಕಟವಾಗುತ್ತದೆ.

ಕೊಡಗಿನ ಬೆಟ್ಟ ಗುಡ್ಡ, ನದಿ, ತೊರೆ ಕಾನನಗಳ ಪರಿಸರದಲ್ಲಿ ಪುರಾಣ ಪಾತ್ರಗಳಾದ ಯಯಾತಿ, ಪುರು, ದೇವಯಾನಿ, ಶರ್ಮಿಷ್ಠೆ, ಕಾವೇರಿ, ಅಗಸ್ತ್ಯ, ಸುಬ್ರಹ್ಮಣ್ಯ, ಸಾವಿತ್ರಿ, ಯಮ ಕೊಡವರಂತೆ ಓಡಾಡಿದರು, ಮಾತನಾಡಿದರು. ಕಾವೇರಿ ಅಗಸ್ತ್ಯರ ಮದುವೆ ಕೊಡವ ಸಂಪ್ರದಾಯದಂತೆ ನಡೆಯಿತು. ಯಯಾತಿ ಕೊಡವನಂತೆ ಕೋವಿ ಹಿಡಿದು ಬೇಟೆಗೆ ಹೊರಟ. ಯಮನಂತೂ ಕೊಡವತಿ ಸಾವಿತ್ರಿಯನ್ನು ಎದುರಿಸಲಾರದೆ, ಕಂಗಾಲಾಗಿ ಕುಳಿತ. ಹೀಗೆ ಕೊಡಗಿನ ಪಾತ್ರಗಳಾಗಿ ಪುರಾಣ ಪಾತ್ರಗಳು ವಿಜೃಂಭಿಸುತ್ತವೆ.

ಅಂದು ಸ್ವಾತಂತ್ರ್ಯ ಹೋರಾಟದ ಕಾಲ. ಕವಿ ಬ್ರಿಟಿಷರ ವಿರುದ್ಧ 'ಮುದ್ದುರಾಜಂಡ ನಾಟಕ' ಎಂದು ಬರೆದು ವಿಲಾಯತಿಯವರನ್ನು ನವಿರಾಗಿ ಟೀಕಿಸಿದ್ದರು. ಇವರು ಬರೆದದ್ದು ಕೊಡವ ಭಾಷೆಯಲ್ಲಿ ಎನ್ನುವ ಕಾರಣಕ್ಕೆ ಇವರ ನಾಟಕಗಳು, ಕಾವ್ಯಗಳು ಹೊರ ಪ್ರಪಂಚಕ್ಕೆ ತಿಳಿಯದೇ ಹೋಯಿತು. ಕೊಡಗಿನ ಕಾನನದ ದಟ್ಟ ಕತ್ತಲೆಯಲ್ಲಿ ಕವಿ ಕರಗಿ ಹೋದರು. ಈ ಕವಿಯ ನಿಧನದ ನಂತರವೇ ಕೊಡಗಿನ ಇನ್ನೊಬ್ಬ ವಿದ್ವಾನ್ ಡಾ. ಐ.ಮಾ. ಮುತ್ತಣ್ಣ ಎಂಬ ಸಾಹಿತಿಗಳು ಅಪ್ಪಚ್ಚಕವಿಯನ್ನು ಕನ್ನಡ ಲೋಕಕ್ಕೆ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದರು.

ಅಂದು ಕನ್ನಡ ಪತ್ರಿಕೆಗಳಲ್ಲಿ, ಮದ್ರಾಸ್ ಮೇಲ್ ನಂತಹ ಪ್ರಮುಖ ರಾಷ್ಟ್ರೀಯ ಪತ್ರಿಕೆಗಳಲ್ಲಿ ಅಪ್ಪಚ್ಚ ಕವಿ ಕಾಣಿಸಿಕೊಂಡರು. ಕನ್ನಡ ನಾಡು ಅಪ್ಪಚ್ಚ ಕವಿಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕನ್ನಡ ನಾಡಿನ ನಮ್ಮ ಜನ ಕೊಡವ ಭಾಷೆಯ ನಾಟಕವನ್ನು ಅಪರಿಚಿತದಂತೆ ನೋಡಿದರು. ಇದು ಅರ್ಥವಾಗುವುದಿಲ್ಲ ಎಂದು ತಿರಸ್ಕರಿಸಿದರು. ಇದು ಈ ಕವಿಗೆ ಮಾಡಿರುವ ದೊಡ್ಡ ಅನ್ಯಾಯ. ಇಂಗ್ಲೀಷ್ ಮತ್ತು ಬೇರೆ ಭಾಷೆಗಳ ನಾಟಕಗಳನ್ನು ಅನುವಾದ ಮಾಡಿಕೊಂಡು ಕನ್ನಡ ನಾಟಕವೆಂದೇ ಸಂಭ್ರಮಿಸಿ ಆನಂದಿಸುವ ನಮ್ಮ ಜನ ತನ್ನದೇ ಸಹೋದರಿ ಭಾಷೆ ಸ್ವೀಕರಿಸಲಿಲ್ಲ.

ವಿದ್ಯೆಯಿಲ್ಲದ, ಜ್ಞಾನಿಗಳ ಸಂಸರ್ಗ ಇಲ್ಲದ, ಹಳ್ಳಿಯ ಒಬ್ಬ ಮುಗ್ಧ ಕವಿ ವ್ಯಕ್ತ ಮಾಡಿರುವ ಅಭಿಪ್ರಾಯ ತತ್ವಜ್ಞಾನಿ ಸಾಕ್ರಟೀಸ್ ಎಂದಂತೆ 'ಆಸೆ ನಿರಾಸೆಯ ಕತ್ತಲು ಇಲ್ಲದಲ್ಲಿ ಕಷ್ಟ ದುಃಖಗಳ ಒಳಗುದಿ ಇಲ್ಲದಲ್ಲಿ, ನೋವು ಪೆಟ್ಟುಗಳ ಅಗ್ನಿಪರೀಕ್ಷೆಯಿಲ್ಲದಲ್ಲಿ, ಭಗವಂತನ ಆಶೀರ್ವಾದ ಎನ್ನುವ ಅಮರ ಬೆಳಕು ಕಾಣುವುದಿಲ್ಲ'. ಇದು ಅಪ್ಪಚ್ಚಕವಿಗೆ ಅನ್ವಯಿಸುತ್ತದೆ. ಈ ಕವಿ ತನ್ನ ಕೊನೆಯ ಕಾಲದಲ್ಲಿ ಬರೆದ ಒಂದು ಕಾವ್ಯ ಹೀಗಿದೆ.

**ಪಡ್‌ಚ ವಿದ್ಯೆಯೋ ತಾಂಗ್ ।
ಇರ್‌ಟ್‌ಕ್‌ಲೋ ತೂಡಾಚಿ ॥
ಅರಿವು ಬೇರಕು ಮೂಲ ।
ಎಳ್‌ತೇ ಮಹಾ ಭಾಗ್ಯಂದ್ ।
ಸುರದೇವ ಮೆಚ್ಚುವಕು ।
ನರಜನವೋ ತುದಿಚವಕು
ಅರಿಂಜಿ ಕೊಡವ ತಕ್ಕ್‌ಲ್ ।
ಎಳ್‌ದ್‌ನ ನಾಲ್ ನಾಟಕವೊ ।
(ತಾವು ಪಡೆದ ವಿದ್ಯೆ ಅದು ಅಜ್ಞಾನದಾ
ಅಂಧತೆಗೆ ಬೆಳಕೆನಿಸಿತು।
ಅದೇ ಅರಿವು ಗೆಲುವುಗಳಿಗೀ ।
ಜನ್ಮದಲ್ಲಿ ಮೂಲವಾಯ್ತು ।
ಸುರದೇವ ಮೆಚ್ಚುವಂತೆ ।
ನರಜನರು ಸ್ತುತಿಸಲು ।
ಅರಿತು ಕೊಡವ ಭಾಷೆಯಲ್ಲಿ ಬರೆದ ನಾಟಕ ।)**

ಅಪ್ಪಚ್ಚಕವಿ ಕೇವಲ ನಾಟಕಕಾರರಾಗಿ ಉಳಿದಿಲ್ಲ. ಭಾರತೀಯ ರಂಗಭೂಮಿಯಲ್ಲಿ ಪುರಾಣದ ಯಯಾತಿ ಕಥೆಯನ್ನು 1906ರಲ್ಲಿ ನಾಟಕದ ರೂಪದಲ್ಲಿ ತಂದು ಪ್ರಕಟಿಸಿದ ಮೊದಲ ನಾಟಕಕಾರ ಅಪ್ಪಚ್ಚಕವಿ ಎನ್ನುವುದು ಅತ್ಯಂತ ಹೆಮ್ಮೆಯ ವಿಚಾರ. 1944ರ ನವೆಂಬರ್ 21 ರಂದು ನಿಧನರಾದ ಈ ಕವಿ ಕೊಡಗಿನ ದಾಸಪರಂಪರೆಯ ಆದ್ಯರೂ ಕೂಡ. ಇಂದು ಕವಿಯ ಜನ್ಮದಿನ. ಒಬ್ಬ ಸೃಜನಶೀಲ ನಾಟಕಕಾರ, ದೇಸಿ ಕವಿಯನ್ನು ನಾಡಿನ ಜನ ಎಂದಿಗೂ ಮರೆಯಬಾರದು ಎನ್ನುವುದೇ ನಮ್ಮೆಲ್ಲರ ಆಶಯ.

ಕವಿಯ ಕಾವ್ಯ ಬದ್ಧತೆಗೆ ಸಾಕ್ಷಿ

ಅಪ್ಪಚ್ಚಕವಿಯ ಕಾವ್ಯಬದ್ಧತೆಗೆ ಸಾಕ್ಷಿ, ಅವರ ಕಿರಿಯ ಮಗ ಅಯ್ಯಣ್ಣನ ಮದುವೆ ಆಮಂತ್ರಣವನ್ನು 1936 ಮೇ 23 ರಂದು ಕಾವ್ಯ ರೂಪದಲ್ಲಿ ಮುದ್ರಿಸಿದ್ದು.

**ಚಿಂಗರತ್ ಬೆಂದುವೆ ಬಾರಿ ।
ನಿಂಗೆಲ್ಲಾ ಸೇರಿ ॥ ಪ ॥
ಮಂಗಲಕ್ಕ್ ಮನೆಕ್ ಬಂದ್ । ಆಂಗುಳ್ಳಿಕ್
ಆರಕೆಯಿರಿ ॥ ಪ ॥ ಚಂಗ್‌ಕೊತ್ತಬೆಂದು
ನೊಮ್ಮ । ನಾಂಗ್ ನೋಟಂಡು ॥
ಪೊಂಗಮಕ್ಕ ನಿಂಗ
ಕೂಡ । ಆಗಿ ಜೂಂಗಿ ಬಂದಳೆರಿ ॥ 1 ॥
ಮೂರ್‌ತೊಮ್ಮ ಕಯಿಚಿನಿಂಗ ।
ಆರಕೆಜ್ಜಿತ್ । ಹರದಾಸ
ತಪ್ಪಪಾಕುಡಿಚಿ ।
ಪೊರಟ್ ಪೋಲು ಶಿವದಯುತ್ ॥ 2 ॥
(ಸಿಂಗಾರದ ಬಂಧುವೇ ಬನ್ನಿ । ಎಲ್ಲರೂ
ಸೇರಿ ॥ ಪ ॥ ಮದುವೆ ಮನೆಗೆ ಬಂದು ।
ಮದುಮಗನಿಗೆ ಹರಸಿ । ನಲ್ಮೆಯ ಬಂಧುಗಳ
ನೋಡಲಾಸೆ । ನನಗೆ ಬಂದಿದೆ ।
ಪತ್ನಿ ಸಂಸಾರದೊಡಗೂಡಿ । ಸಾವಕಾಶದೀ
ಬದಿಲಿಯಿರಿ । ಮುಹೂರ್ತದಿ ಮಿಂದು ಎದ್ದು ।
ಹರಸಿ ಬನ್ನಿ ನನ್ನ ಮನೆಗೆ । ಹರದಾಸ
ತಪ್ಪ ಹಾಲು ಕುಡಿದು ।
ತೆರಳಬನ್ನಿ ಶಿವದಯದಿ । 2 ॥)**

ಇಂದಿನಿಂದ ಮೂರು ದಿನ ಬೆಂಗಳೂರಲ್ಲಿ ಏಷ್ಯಾದ ಅತೀ ದೊಡ್ಡ ಶಿಕ್ಷಣ, ಕೌಶಲ್ಯ ಕ್ಷೇತ್ರದ ಡೈಡ್ಯಾಕ್ಟ್ ಇಂಡಿಯಾ ಸಮಾವೇಶ

ಬೆಂಗಳೂರು, ಸೆ.20(ಕೆಎಂಶಿ)–ಶಿಕ್ಷಣ ಮತ್ತು ಕೌಶಲ್ಯ ಕ್ಷೇತ್ರದಲ್ಲಿ ಏಷ್ಯಾದ ಅತೀ ದೊಡ್ಡ ಮತ್ತು ಭಾರತದ ಏಕೈಕ ಸಮಾವೇಶವಾದ 'ಡೈಡ್ಯಾಕ್ಟ್ ಇಂಡಿಯಾ' ಬೆಂಗಳೂರಿನಲ್ಲಿ ಸೆ.21ರಿಂದ 23ರವರೆಗೆ ನಡೆಯಲಿದ್ದು, ನಮ್ಮ ಇಲಾಖೆ ಪ್ರಾಯೋಜಕತ್ವ ನೀಡುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿಎನ್.ಅಶ್ವತ್ಥ ನಾರಾಯಣ ಹೇಳಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ (BIEC) ಇದು ನಡೆಯಲಿದೆ. ಇಲ್ಲಿ ಶಿಕ್ಷಣ ಮತ್ತು ಕೌಶಲ್ಯ ಕ್ಷೇತ್ರಗಳ 4,000ಕ್ಕೂ ಹೆಚ್ಚು ನವೀನ ಉತ್ಪನ್ನ ಹಾಗೂ ಸೇವೆ ಅನಾವರಣಗೊಳ್ಳಲಿವೆ. ಮೈಕ್ರೋಸಾಫ್ಟ್, ಅಮೆಜಾನ್, ಸ್ಯಾಮ್ಸಂಗ್, ಎಚ್.ಪಿ. ಸೇರಿದಂತೆ 20 ದೇಶಗಳ 200ಕ್ಕೂ ಹೆಚ್ಚು ಪ್ರದರ್ಶಕರು ಭಾಗವಹಿಸುತ್ತಿದ್ದಾರೆ ಎಂದರು.

ಸಮಾವೇಶದಲ್ಲಿ ಯುಕೆ, ಜರ್ಮನಿ, ಆಸ್ಟ್ರೇಲಿಯಾ, ಕೆನಡಾ, ಫಿನ್ಲೆಂಡ್, ಪೋಲೆಂಡ್, ಸಿಂಗಾಪುರ ಮುಂತಾದ ದೇಶಗಳ ಪ್ರತ್ಯೇಕ ಅಂತರರಾಷ್ಟ್ರೀಯ ಪೆವಿಲಿಯನ್ ಇರಲಿವೆ ಎಂದು ವಿವರಿಸಿದರು. ಸಮಾವೇಶದಲ್ಲಿ ಇಂಡಿಯಾ ಡೈಡ್ಯಾಕ್ಟಿಕ್ ಅಸೋಸಿಯೇಷನ್ (IDA), ಕೇಂದ್ರ ಶಿಕ್ಷಣ ಇಲಾಖೆ, ನೀತಿ ಆಯೋಗ, ಕೇಂದ್ರ ಕೌಶಲ್ಯ ಮತ್ತು ಉದ್ಯಮಶೀಲತೆ ಇಲಾಖೆ ಮತ್ತು ಎಜುಕೇಶನ್ ವರ್ಲ್ಡ್ ಫೋರಂ ಸಹಯೋಗದಲ್ಲಿ ಜರುಗಲಿದೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (AICTE) ಹಾಗೂ ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತು (NCERT) ಈ ಸಮಾವೇಶದ ಸಹಭಾಗಿತ್ವ ವಹಿಸಿವೆ ಎಂದು ಮಾಹಿತಿ ನೀಡಿದರು.

"ಕರ್ನಾಟಕವು ಶಿಕ್ಷಣದಲ್ಲಿ ಮುಂಚೂಣಿಯಲ್ಲಿದೆ. ಬೆಂಗಳೂರು ವಿಶ್ವದ ನಾವೀನ್ಯತೆಯ ರಾಜಧಾನಿಗಳಲ್ಲಿ ಒಂದಾಗಿದೆ. ವಿವಿಧ ದೇಶಗಳ ಶಿಕ್ಷಣ ಸಚಿವರು, ನಿಯೋಗಗಳು ಮತ್ತು ಶಿಕ್ಷಣ ತಜ್ಞರಿಗೆ ಈ ಸಮಾವೇಶವು ಅತ್ಯಂತ ಆಸಕ್ತಿದಾಯಕವಾಗಿರಲಿದೆ ಎಂದು ಅಶ್ವತ್ಥ ನಾರಾಯಣ ಅಭಿಪ್ರಾಯಪಟ್ಟರು.

ಇಂಡಿಯಾ ಡೈಡ್ಯಾಕ್ಟಿಕ್ಸ್ ಅಸೋಸಿಯೇಷನ್ ಸಿಇಓ ಆದಿತ್ಯ ಗುಪ್ತಾ ಮಾತನಾಡಿ, ಈ ಸಮಾವೇಶವು ಶಿಕ್ಷಣ ಕ್ಷೇತ್ರದ ಆವಿಷ್ಕಾರಗಳನ್ನು ಒಂದೇ ಸೂರಿನಡಿ ತರಲಿದೆ. ಕೊರೊನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರ ಎದುರಿಸಿದ ಅನೇಕ ಸವಾಲುಗಳಿಗೆ ಪರಿಹಾರಗಳನ್ನು ಪ್ರಸ್ತುತಪಡಿಸಲಿದೆ ಎಂದು ವಿವರಿಸಿದರು.

ಇದರಲ್ಲಿ ಯುಕೆ, ಬ್ರೆಜಿಲ್, ಮಲೇಶಿಯಾ, ಸೌದಿ ಅರೇಬಿಯಾ ಸೇರಿದಂತೆ 15 ದೇಶಗಳ ಶಿಕ್ಷಣ ಸಚಿವರು, ಸಚಿವರ ನಿಯೋಗಗಳು ಪಾಲ್ಗೊಳ್ಳಲಿವೆ. ಭಾರತದ 10 ರಾಜ್ಯಗಳ ಶಿಕ್ಷಣ ಸಚಿವರು ಇದರಲ್ಲಿ ಭಾಗಿಯಾಗಲಿದ್ದಾರೆ ಎಂದು ನುಡಿದರು. ಡೈಡ್ಯಾಕ್ಟ್ ಇಂಡಿಯಾ ಸಮಾವೇಶದ ಜೊತೆ ಹಲವು ಕಾರ್ಯಾಗಾರಗಳು ಹಾಗೂ ಸಮ್ಮೇಳನಗಳು ಸಹ ಜರುಗಲಿವೆ. ಇಂಟರ್ ನ್ಯಾಷನಲ್ ಎಜುಕೇಶನ್ ಅಂಡ್ ಸ್ಕಿಲ್ ಸಮ್ಮಿಟ್, ಡೈಡ್ಯಾಕ್ಟ್ ಅಲೈಯನ್ಸ್ ಆಫ್ ಇಂಟರ್ ನ್ಯಾಷನಲ್ ಸ್ಕೂಲ್ಸ್ ಕಾನ್ಫರೆನ್ಸ್, ಅರ್ಲಿ ಲರ್ನಿಂಗ್ ಕಾನ್ಫರೆನ್ಸ್, ಕೆ–12 ಎಜುಕೇಶನ್ ಕಾನ್ಫರೆನ್ಸ್, ಐಡಿಎ ಕನೆಕ್ಟ್ ವರ್ಕ್ ಶಾಪ್ ಮುಂತಾದ ಕಾರ್ಯಾಗಾರಗಳು ಹಾಗೂ ಸಮ್ಮೇಳನಗಳು ಸಮಾವೇಶದ ಭಾಗವಾಗಿರಲಿವೆ.

ಪೊಲೀಸ್ ನೇಮಕಾತಿ ವಯೋಮಿತಿ ಸಡಿಲಿಕೆ ಪ್ರಸ್ತಾಪ ಸರ್ಕಾರದ ಮುಂದಿಲ್ಲ

ವಿಧಾನಸಭೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಸ್ಪಷ್ಟನೆ

ಬೆಂಗಳೂರು, ಸೆ.20(ಕೆಎಂಶಿ)– ಸದ್ಯದ ಪರಿಸ್ಥಿತಿಯಲ್ಲಿ ಪೊಲೀಸ್ ನೇಮಕಾತಿಯ ವಯೋಮಿತಿ ಸಡಿಲಿಕೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನ ಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ.



ಪೊಲೀಸ್ ಕಾನ್‌ಸ್ಟೆಬಲ್‌ಗಳ ನೇಮಕಾತಿ ವೇಳೆ ವಯೋಮಿತಿ ಸಡಿಲಿಕೆ ಮಾಡಬೇಕೆಂಬ ಬೇಡಿಕೆ ಇದೆ. ಸದ್ಯಕ್ಕೆ ಅಂತಹ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಪುನರುಚ್ಚರಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಪೊಲೀಸ್ ನೇಮಕಾತಿಗೆ ಸಂಬಂಧಿಸಿದ ಪ್ರಸ್ತಾವಕ್ಕೆ ಉತ್ತರಿಸುತ್ತಿದ್ದ ಸಚಿವರು, ಕೆಲ ಸದಸ್ಯರು ಪೊಲೀಸ್ ನೇಮಕಾತಿಗೆ ವಯೋಮಿತಿ ಸಡಿಲಿಕೆ ಮಾಡಬೇಕೆಂದು ಮನವಿ ಮಾಡಿದಾಗ, ಅದಕ್ಕೆ ಪ್ರತಿಕ್ರಿಯಿಸಿದರು. ಸಾಮಾನ್ಯ ವರ್ಗಕ್ಕೆ 18ರಿಂದ 25 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ. 2 ವರ್ಷ ಕಡಿಮೆ ಮಾಡಬೇಕೆಂಬ ಒತ್ತಡ ಇದೆ. ಯುವಕರನ್ನೇ ನೇಮಕಾತಿ ಮಾಡಿಕೊಳ್ಳುತ್ತಿರುವುದರಿಂದ ಸಡಿಲಿಕೆ ಸಾಧ್ಯವಿಲ್ಲ ಎಂದರು. ಗೃಹ ಇಲಾಖೆಯಲ್ಲಿ ಪ್ರಸ್ತುತ 9432 ಹುದ್ದೆಗಳು ಖಾಲಿ ಇವೆ. ಪೊಲೀಸ್ ಕಾನ್‌ಸ್ಟೆಬಲ್(ಸಿವಿಲ್)–2874, ಸಿಎಆರ್/ಡಿಎಆರ್ 3512, ಪಿಸಿ(ಎಫ್‌ಪಿಬಿ)–5, ಪಿಸಿ(ವೈರ್‌ಲೆಸ್)–99, ಆರ್‌ಪಿಸಿ(ಕೆಎಸ್‌ಆರ್‌ಪಿ) 2757, ಪಿಸಿ (ಕೆಎಸ್/ಐಎಸ್‌ಎಫ್) 185 ಹುದ್ದೆಗಳು ಖಾಲಿಯಿವೆ ಎಂದರು.

ನಾವು ಅಧಿಕಾರ ವಹಿಸಿಕೊಂಡಾಗ 22,000 ಹುದ್ದೆಗಳು ಖಾಲಿ ಇದ್ದವು. ಒಂದು ಕಾಲದಲ್ಲಿ 35 ಸಾವಿರ ಹುದ್ದೆ ಹಾಗೇ ಉಳಿದಿದ್ದವು. 12–09–2020ರಲ್ಲಿ 3500 ಪೊಲೀಸ್ ಕಾನ್‌ಸ್ಟೆಬಲ್‌ಗಳ ನೇಮಕಾತಿಗೆ ಅಸೂಚನೆ ಹೊರಡಿಸಲಾಗಿತ್ತು. ಈ ಬಾರಿ 1500 ಪೊಲೀಸ್ ಕಾನ್‌ಸ್ಟೆಬಲ್‌ಗಳ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸುತ್ತೇವೆ. ಒಟ್ಟು 5 ಸಾವಿರ ಹುದ್ದೆಗಳು ಭರ್ತಿಯಾಗಲಿವೆ ಎಂದರು. ಪೊಲೀಸ್ ಇಲಾಖೆಯಲ್ಲಿ ನಿರುದ್ಯೋಗ ನಿವಾರಣೆಯಾಗಲಿ ಎಂದು ಉದ್ಯೋಗ ತುಂಬುವುದಿಲ್ಲ. ದೈಹಿಕವಾಗಿ ಸಮರ್ಥ ಇರುವವರನ್ನು ಮಾತ್ರ ಆಯ್ಕೆ ಮಾಡುತ್ತೇವೆ. ಕೊರೊನಾ ಸಂಕಷ್ಟ ದಲ್ಲೂ ಹುದ್ದೆಗಳಿಗೆ ನೇಮಕ ಮಾಡಿದ್ದೇವೆ. ಹೀಗಾಗಿ ಕಾನೂನು–ಸುವ್ಯವಸ್ಥೆಗೆ ಧಕ್ಕೆಯಾಗುವುದಿಲ್ಲ ಎಂದರು.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಸೆ. 20– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಸೆ.22ರಂದು ಬೆಳಗ್ಗೆ 10ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com; For advertisements: ad@mysurumithra.com, website: www.mysurumithra.com

ಶಿವರಾಮು ಸಚಿವ ಸೋಮಶೇಖರ್ ಕ್ಷಮೆಯಾಚಿಸಬೇಕು

ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಆಗ್ರಹ


ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ತಮ್ಮ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.


ದಸರಾ ವಸ್ತುಪ್ರದರ್ಶನಕ್ಕೆ ಸಕಲ ಸಿದ್ಧತೆ ಮಾಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಸೆ.20(ಎಸ್‌ಬಿಡಿ)–ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರನ್ನು ದಸರಾ ಮಹೋತ್ಸವದಿಂದ ಹೊರಗಿಡಬೇಕೆಂದು ಹೇಳಿಕೆ ನೀಡಿರುವ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಕ್ಷಮೆಯಾಚಿಸಬೇಕೆಂದು ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಆಗ್ರಹಿಸಿದ್ದಾರೆ.

ಪ್ರಾಧಿಕಾರದ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಕೆ.ಎಸ್.ಶಿವರಾಮು ಹೇಳಿಕೆಯನ್ನು ಖಂಡಿಸಿದ ಅವರು, ಎಸ್.ಟಿ.ಸೋಮಶೇಖರ್ ಅವರು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ(ಬಿಡಿಎ)ದ ಅಧ್ಯಕ್ಷರಾಗಿದ್ದಾಗ ನೂರಾರು ಕೋಟಿ ರೂ. ಟೆಂಡರ್ ಅನ್ನು ಕಂಪನಿಯೊಂದಕ್ಕೆ ಕೊಡಿಸಲು ಒತ್ತಡ ಹೇರಿದ್ದರು. ಅದರಲ್ಲಿ ಭ್ರಷ್ಟಾಚಾರ ನಡೆದಿರುವುದರಿಂದ ಸಚಿವರನ್ನು ದಸರಾ ಮಹೋತ್ಸವದಿಂದ ದೂರವಿಡಬೇಕೆಂದು ಶಿವರಾಮು ಹೇಳಿದ್ದಾರೆ. ಆದರೆ ಸೋಮಶೇಖರ್ ಅವರು ಬಿಡಿಎ ಅಧ್ಯಕ್ಷರಾಗುವ ಮುಂಚಿನ ಟೆಂಡರ್ ವಿಚಾರವಿದು. ಅವರು 6 ತಿಂಗಳು ಮಾತ್ರ ಆ ಸ್ಥಾನದಲ್ಲಿದ್ದರು. ದೂರಿನಲ್ಲೂ ಕೂಡ ಟೆಂಡರ್ ಕೊಡಿಸಲು ಒತ್ತಡ ಹೇರಿದ್ದಾರೆಂಬ ಆರೋಪವಿದೆಯೇ ಹೊರತು, ಭ್ರಷ್ಟಾಚಾರವಾಗಿದೆ ಎಂದಿಲ್ಲ ಎಂದರು.

ಪ್ರಕರಣ ದಾಖಲಾದ ಮಾತ್ರಕ್ಕೆ ಅಪರಾಧಿಯಾಗುವುದಿಲ್ಲ. ಎಸ್.ಟಿ.ಸೋಮಶೇಖರ್ ಅವರು 6ನೇ ಆರೋಪಿಯಾಗಿದ್ದಾರೆ. ಟೆಂಡರ್ ಸಂಬಂಧ ಅವರಿಗೆ ಮಾಹಿತಿಯೇ ಇಲ್ಲ. ಹೀಗಿರುವಾಗ ದಸರಾ ಸಂದರ್ಭದಲ್ಲಿ ಈ ರೀತಿಯ ಆಪಾದನೆ ಮಾಡುವುದು ಎಷ್ಟು ಸರಿ?. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಾಚ್ ಹಗರಣ ಹಾಗೂ ಮಾಜಿ ಶಾಸಕ ವಿನಯ್ ಕುಲಕರ್ಣಿ ವಿರುದ್ಧದ ಕೊಲೆ ಆರೋಪ ಪ್ರಕರಣಗಳ ಬಗ್ಗೆ ಶಿವರಾಮು ಏಕೆ ಮಾತನಾಡಲಿಲ್ಲ?. ಕನ್ನಂಬಾಡಿ ಅಣೆಕಟ್ಟೆ ನಿರ್ಮಿಸಿ ಕುಡಿಯಲು ನೀರು, ತಿನ್ನಲು ಅನ್ನ ಕಲ್ಪಿಸಿದ ಸರ್ ಎಂ.ವಿಶ್ವೇಶ್ವರಯ್ಯನವರ ವಿರುದ್ಧವೂ ಮಾತನಾಡಿ ಶಿವರಾಮ್ ತಮ್ಮ ಮೂರ್ಖತನ ಪ್ರದರ್ಶಿಸಿದ್ದರು. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪನವರ ವಿರುದ್ಧವೂ ಆರೋಪ ಮಾಡಿದ್ದರು. ಆದರೆ ಅದು ಏನಾಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ ಎಂದರು.

ಶಿವರಾಮು ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯನವರ ಏಜೆಂಟ್. ಪಕ್ಷದ ಮುಖಂಡರ ಓಲೈಕೆ ಹಾಗೂ ಪ್ರಚಾರಕ್ಕಾಗಿ ಹೀಗೆ ಸುದ್ದಿಗೋಷ್ಠಿ ನಡೆಸಿ, ಆಧಾರ, ಅಂಕಿ ಅಂಶ, ವಾಸ್ತವಾಂಶವಿಲ್ಲದೆ ಆಪಾದನೆ ಮಾಡುತ್ತಿರುತ್ತಾರೆ. ಶಿವರಾಮು ರೋಲ್‌ಕಾಲ್ ರಾಜಕಾರಣಿಯಿದ್ದಂತೆ. ಮೂರು ವರ್ಷಗಳಿಂದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಸೋಮಶೇಖರ್ ಅವರು ಒಂದೇ ಒಂದು ಆರೋಪವಿಲ್ಲದೆ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದಾರೆ. ಅವರ ಪ್ರತಿನಿಧಿಸುವ ಕ್ಷೇತ್ರಕ್ಕಿಂತ ಹೆಚ್ಚಿನ ಸಮಯವನ್ನು ಮೈಸೂರಿನ ಅಭಿವೃದ್ಧಿಗಾಗಿ ನೀಡಿದ್ದಾರೆ. ಪ್ರತಿಪಕ್ಷಗಳ ಶಾಸಕರು, ಜನಪ್ರತಿನಿಧಿಗಳೂ ಮೆಚ್ಚುಗೆ ಮಾತುಗಳನ್ನಾಡುತ್ತಾರೆ. ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಹೋರಾಟ ನಡೆಸುವುದನ್ನು ಬಿಟ್ಟು ರಾಜಕೀಯ ಲಾಭಕ್ಕಾಗಿ, ಸ್ವಾರ್ಥಕ್ಕಾಗಿ ಹೀಗೆ ಆರೋಪ ಮಾಡಬೇಡಿ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸೋಮಶೇಖರ್ ಅವರ ವಿರುದ್ಧ ದಸರಾ ಸಂದರ್ಭದಲ್ಲಿ ಈ ರೀತಿ ಆರೋಪ ಮಾಡುತ್ತಿರುವುದು ಎಷ್ಟು ಸರಿ?. ಕೂಡಲೇ ಶಿವರಾಮು, ಸಚಿವರ ಕ್ಷಮೆಯಾಚಿಸಬೇಕು. ಸೋಮಶೇಖರ್ ಅವರ ಬಗ್ಗೆ ಜನರಲ್ಲಿ ಒಳ್ಳೆಯ ಅಭಿಪ್ರಾಯ, ಗೌರವ ಭಾವನೆಯಿದೆ. ಹಾಗಾಗಿ ಶಿವರಾಮು ಅಂತಹವರ ಹೇಳಿಕೆಗೆ ಕಿವಿಗೊಡದೆ ದಸರಾ ಯಶಸ್ವಿಗೆ ಶ್ರಮಿಸಬೇಕೆಂದು ಮಿರ್ಲೆ ಶ್ರೀನಿವಾಸ್ ಮನವಿ ಮಾಡಿದರು.

ವಸ್ತುಪ್ರದರ್ಶನಕ್ಕೆ ಸಕಲ ಸಿದ್ಧತೆ

ದಸರಾ ಮಹೋತ್ಸವ ಉದ್ಘಾಟನೆಗೆ 2 ವಾರ ಮುಂಚಿತವಾಗಿ ದಸರಾ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಬೇಕೆಂಬ ಆಶಯದೊಂದಿಗೆ ಸಿದ್ಧತಾ ಕಾರ್ಯ ಆರಂಭಿಸಲಾಗಿತ್ತು. ಆದರೆ 15–20 ದಿನ ನಿರಂತರವಾಗಿ ಮಳೆಯಾದ ಕಾರಣ ಕಾಮಗಾರಿ ನಡೆಸಲು ಅಡ್ಡಿಯಾಯಿತು. ಜಿಲ್ಲಾ ಪಂಚಾಯ್ತಿ ಸೇರಿದಂತೆ ವಿವಿಧ ಇಲಾಖೆಗಳ 32 ಸರ್ಕಾರಿ ಮಳಿಗೆಗಳು ಸಿದ್ಧವಾಗುತ್ತಿವೆ. ಎಲ್ಲಾ 250 ಮಳಿಗೆ ಹಾಗೂ ಫುಡ್‌ಕೋರ್ಟ್ ಅ.1ರೊಳಗೆ ಪೂರ್ಣವಾಗಲಿವೆ. ಸೆ.26ರಂದು ಸಂಜೆ 4 ಗಂಟೆಗೆ ವಸ್ತುಪ್ರದರ್ಶನ ಉದ್ಘಾಟನೆ ನೆರವೇರಲಿದ್ದು, ಅಷ್ಟರಲ್ಲಿ ಶೇ.75ರಷ್ಟು ಮಳಿಗೆಗಳು ಆರಂಭವಾಗಲಿವೆ. ಫನ್ ವರ್ಲ್ಡ್ ಮಾಲೀಕರೊಬ್ಬರೇ ಟೆಂಡರ್‌ನಲ್ಲಿ ಭಾಗಿಯಾಗಿದ್ದರಿಂದ ಅವರಿಗೆ 8.09 ಕೋಟಿ ರೂ.ಗೆ ಟೆಂಡರ್ ನೀಡಲಾಗಿದೆ. ವಯಸ್ಕರಿಗೆ 30 ರೂ. ಹಾಗೂ ಮಕ್ಕಳಿಗೆ 20 ರೂ. ಟಿಕೆಟ್ ನಿಗದಿಪಡಿಸಲಾಗಿದೆ. ವಸ್ತುಪ್ರದರ್ಶನದ ಸಮಗ್ರ ಮಾಹಿತಿಯನ್ನು ಆ್ಯಪ್ ಮೂಲಕ ತಿಳಿದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ನಿಗದಿತ ಸ್ಥಳಗಳಲ್ಲಿ ದೊಡ್ಡದಾದ ನಕ್ಷೆಗಳನ್ನು ಅಳವಡಿಸಲಾಗುತ್ತದೆ. ವಿಡಿಯೋ ಮ್ಯಾಪ್ ಸೌಲಭ್ಯವನ್ನೂ ಕಲ್ಪಿಸಲಾಗುತ್ತಿದ್ದು, ಸಾರ್ವಜನಿಕರು ಯಾವುದೇ ಗೊಂದಲವಿಲ್ಲದೆ ವೀಕ್ಷಿಸಲು ಅನುಕೂಲವಾಗಲಿದೆ. ಭಾರತಮಾತೆ, ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್, ನೇತಾಜಿ ಸುಭಾಷ್ ಚಂದ್ರಬೋಸ್, ಸಾವರ್ಕರ್, ಪುನೀತ್ ರಾಜ್‌ಕುಮಾರ್ ಮರಳಿನ ಆಕೃತಿಗಳು ವಿಶೇಷವಾಗಿರಲಿದೆ. ಕಾವೇರಿ ಗ್ಯಾಲರಿ ವೀಕ್ಷಿಸುವ ಸದವಕಾಶವಿದೆ. ಈ ಬಾರಿ 2 ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸಲಾಗುವುದು. ಅವರಿಗೆ ಪ್ರಾಧಿಕಾರ ಹಾಗೂ ಪ್ರಾಯೋಜಕರ ವತಿಯಿಂದ ಗೌರವಧನ ನೀಡಲಾಗುವುದು ಎಂದು ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ತಿಳಿಸಿದರು.


ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಕರ್ನಾಟಕದ ರೀಜನಲ್ ಮುಖ್ಯಸ್ಥ ಫಿಲ್ಸರ್ ಬಾಬು ಅವರು ದಕ್ಷಿಣ ಆಭರಣ ಪ್ರದರ್ಶನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಆಭರಣ ಕ್ಷೇತ್ರದಲ್ಲಿ ಅತ್ಯುನ್ನತ ಉದ್ಯೋಗ ವಿಭಾಗದಲ್ಲಿ 2022 ಪ್ರೈಡ್ ಆಫ್ ಇಂಡಿಯಾ ಪ್ರಶಸ್ತಿ ಸ್ವೀಕರಿಸಿದರು.


ದೆಹಲಿಯ ಕರ್ತವ್ಯ ಪಥದಲ್ಲಿ ನೂತನವಾಗಿ ಸ್ಥಾಪಿಸಲಾದ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆ ರೂಪಿಸಿದ ಮೈಸೂರಿನ ಕಲಾವಿದ ಅರುಣ್ ಯೋಗಿರಾಜ್ ಹಾಗೂ ಕುಟುಂಬಸ್ಥರನ್ನು ನಗರಪಾಲಿಕೆ ಬಿಜೆಪಿ ಸದಸ್ಯರು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಮೇಯರ್ ಶಿವಕುಮಾರ್, ಉಪ ಮೇಯರ್ ಜಿ.ರೂಪ, ಸದಸ್ಯರಾದ ಮಾ.ವಿ.ರಾಮ್ ಪ್ರಸಾದ್, ಬಿ.ವಿ.ಮಂಜುನಾಥ್, ಎಂ.ಯು.ಸುಬ್ಬಯ್ಯ ಮತ್ತಿತರರಿದ್ದರು.


ಹೊಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಸದಸ್ಯ ಹೆಚ್.ಎನ್.ಮಾದೇಶ ನಿಧನ ಹೊಂದಿದ ಹಿನ್ನೆಲೆಯಲ್ಲಿ ಅವರ ಕುಟುಂಬದವರಿಗೆ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ರೈತರ ಕಲ್ಯಾಣ ಟ್ರಸ್ಟ್‌ನಿಂದ 50 ಸಾವಿರ ರೂ. ಪರಿಹಾರ ಧನವನ್ನು ವಿತರಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಪೈ.ಹೊನ್ನೇಗೌಡ, ನಿರ್ದೇಶಕರಾದ ವಿವೇಕಾನಂದ, ಹೆಚ್.ಎಸ್.ಭೈರಪ್ಪ, ಹೆಚ್.ಕೆ.ವೆಂಕಟೇಶ, ಪೈ.ನಾಗರಾಜ್, ಕಾರ್ಯದರ್ಶಿ ನಾಗರಾಜು ಉಪಸ್ಥಿತರಿದ್ದರು.


ಅಲ್ಪಸಂಖ್ಯಾತರ ಕಲ್ಯಾಣ ನಿಧಿಯಲ್ಲಿ ಆಯ್ಕೆಯಾದ ಫಲಾನುಭವಿಗೆ ಜೆಡಿಎಸ್ ರಾಜ್ಯ ಕಾರ್ಯದರ್ಶಿ ಅಬ್ದುಲ್ ಅಜೀಜ್ ಆಟೋರಿಕ್ಷಾ ಹಸ್ತಾಂತರಿಸಿದರು. ಈ ವೇಳೆ ನರಸಿಂಹರಾಜ ಎಸ್ಸಿ ಘಟಕದ ಅಧ್ಯಕ್ಷ ಕಿರಣ್‌ಕುಮಾರ್, ಬ್ಲಾಕ್ ಅಧ್ಯಕ್ಷ ರಾಮು, ಇಂದ್ರಮ್ಮ, ತಜ್ಜು, ಲೋಕಿ, ಚೇತನ್, ಪರು ಇನ್ನಿತರರು ಉಪಸ್ಥಿತರಿದ್ದರು.

ಯುವ ಜನತೆಗಾಗಿ ಅಂತಾರಾಷ್ಟ್ರೀಯ ಮಟ್ಟದ ಪ್ರಬಂಧ ಸ್ಪರ್ಧೆ

ಮೈಸೂರು,ಸೆ.20(ಪಿಎಂ)– ಶ್ರೀ ರಾಮಚಂದ್ರ ಮಿಷನ್‌ನ ಅಂಗಸಂಸ್ಥೆಯಾದ ಹಾರ್ಟ್ ಫುಲ್‌ನೆಸ್ ಎಜುಕೇಷನ್ ಟ್ರಸ್ಟ್ ವತಿಯಿಂದ ಯುವ ಜನರಿಗಾಗಿ ಅಂತಾರಾಷ್ಟ್ರೀಯ ಮಟ್ಟದ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಸ್ವಯಂ ಸೇವಕಿ ಶ್ಯಾಮಲಕೃಷ್ಣ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎರಡು ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, 'ಕರುಣೆಯನ್ನು ಕಾರ್ಯರೂಪಕ್ಕಿಳಿಸುವುದೇ ದಯೆ' ವಿಷಯ ಕುರಿತಂತೆ 14ರಿಂದ 18 ವರ್ಷ ವಯೋಮಿತಿಯವರಿಗೆ ಸ್ಪರ್ಧೆ ನಡೆದರೆ, 'ದಯೆಯಿಂದ ಪ್ರವರ್ಧಮಾನ' ಕುರಿತು 19ರಿಂದ 25 ವರ್ಷ ವಯೋಮಿತಿಯವರಿಗೆ ಸ್ಪರ್ಧೆ ನಡೆಯಲಿದೆ. ವಿಶ್ವಸಂಸ್ಥೆಯ ಅಧಿಕೃತ ಭಾಷೆಗಳಾದ ಅರಬ್ಬಿ, ಚೀನಿ, ಇಂಗ್ಲಿಷ್, ಫ್ರೆಂಚ್, ರಷ್ಯನ್, ಸ್ಪ್ಯಾನಿಷ್ ಹಾಗೂ ಭಾರತೀಯ ಭಾಷೆಗಳಾದ ಕನ್ನಡ, ತಮಿಳು, ತೆಲುಗು, ಬಂಗಾಳಿ, ಗುಜರಾತಿ, ಹಿಂದಿ, ಮಲಯಾಳಂ, ಮರಾಠಿ, ಒಡಿಯಾದಲ್ಲಿ ಪ್ರಬಂಧ ರಚಿಸಬಹುದು ಎಂದರು.

ಪ್ರಬಂಧ ಸಲ್ಲಿಸಲು ವೆಬ್‌ಸೈಟ್‌ಗೆ (https://heartfulness.org/education/essay-event/) ಭೇಟಿ ನೀಡಬಹುದು. ಪ್ರಬಂಧ ಸಲ್ಲಿಸಲು ಅ.30 ಕಡೇ ದಿನ. ಸ್ಪರ್ಧೆಯಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇಲ್ಲ. ಸಂಪೂರ್ಣ ಉಚಿತವಾಗಿದೆ. ಪ್ರತಿ ಭಾಷೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನಕ್ಕೆ ಆಯ್ಕೆ ನಡೆಯಲಿದೆ. ಪ್ರಥಮ ಸ್ಥಾನಕ್ಕೆ 10 ಸಾವಿರ ರೂ. ಮೌಲ್ಯದ ಉಡುಗೊರೆಯ ಕೂಪನ್ ಹಾಗೂ ದ್ವಿತೀಯ ಸ್ಥಾನಕ್ಕೆ 5 ಸಾವಿರ ರೂ. ಮೌಲ್ಯದ ಉಡುಗೊರೆಯ ಕೂಪನ್ ನೀಡಲಾಗುವುದು ಎಂದು ಹೇಳಿದರು. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಜೊತೆಗೆ ಮೊ.ಸಂ. 94494 45641 ಅನ್ನು ಸಂಪರ್ಕಿಸಬಹುದು ಎಂದರು. ಇದೇ ವೇಳೆ ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಟ್ರಸ್ಟ್‌ನ ಸ್ವಯಂ ಸೇವಕರಾದ ಸುಬ್ರಹ್ಮಣ್ಯ, ಯಶವಂತ್‌ರಾವ್, ಪ್ರಭು ಗೋಷ್ಠಿಯಲ್ಲಿದ್ದರು.

ಕನ್ನಡ ದೇಶ ಪಕ್ಷ ಉದ್ಘಾಟನೆ



ಮೈಸೂರು,ಸೆ.20(ಪಿಎಂ)– ನೂತನವಾಗಿ ಅಸ್ತಿತ್ವಕ್ಕೆ ತಂದಿರುವ ಕನ್ನಡ ದೇಶ ಪಕ್ಷದ ಉದ್ಘಾಟನೆಯನ್ನು ಬ್ಯಾಂಕ್ ಮಾಜಿ ಉದ್ಯೋಗಿ ಶೈಲೇಂದ್ರ ಪಾಟೀಲ್ ಮತ್ತು ಕಲಾವಿದೆ ಸುಮಾ ರಾಜ್‌ಕುಮಾರ್ ನೆರವೇರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಕ್ಷವನ್ನು ಉದ್ಘಾಟಿಸಲಾಯಿತು. ಇದೇ ವೇಳೆ ಮಾತನಾಡಿದ ಪಕ್ಷದ ಸಂಸ್ಥಾಪಕ ಅರುಣ್ ಲಿಂಗ, ಕನ್ನಡ ಭಾಷೆ ಮತ್ತು ಕನ್ನಡಿಗರ ಸರ್ವತೋಮುಖ ಅಭಿವೃದ್ಧಿಯ ಪ್ರಮುಖ ಧ್ಯೇಯೋದ್ದೇಶದೊಂದಿಗೆ ನಮ್ಮ ಪಕ್ಷ ಅಸ್ತಿತ್ವಕ್ಕೆ ಬಂದಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಅನ್ಯಾಯ ಆಗುತ್ತಿದೆ. ಹಾಗಾಗಿ ಮೌಲ್ಯಾಧಾರಿತ ರಾಜಕಾರಣದ ಮೂಲಕ ಸುಭದ್ರ, ಸದೃಢ ಕರ್ನಾಟಕ ಕಟ್ಟುವ ಉದ್ದೇಶದಿಂದ ಈ ಪಕ್ಷ ಸ್ಥಾಪಿಸಲಾಗಿದೆ ಎಂದು ಹೇಳಿದರು. ಪಕ್ಷದ ರಾಜ್ಯಾಧ್ಯಕ್ಷ ಡಾ.ಹರಿಪ್ರಸಾದ್, ಪಕ್ಷದ ಮುಖಂಡರಾದ ಮಂಜುನಾಥ್, ಶಂಕರ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಒಡಲ ಒಗಟು ಪುಸ್ತಕ ಬಿಡುಗಡೆ

ಹಿಂದಿನ ಮೈಸೂರು ಹೇಗಿತ್ತೆಂದು ತಿಳಿಯಲು ಈ ಪುಸ್ತಕ ಓದಬೇಕು; ರಂಗಸಂಘಟಕ ಮಾಧವಖರೆ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಕರ್ತ ರಾಮಚಂದ್ರ ಗಂಗಾ ಅವರ 'ಒಡಲ ಒಗಟು' ಕೃತಿ ಬಿಡುಗಡೆ ಮಾಡಲಾಯಿತು.

ಮೈಸೂರು,ಸೆ.20(ಪಿಎಂ)– ಪರಿವರ್ತನ ರಂಗ ಸಮಾಜ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಜಂಟಿ ಆಶ್ರಯದಲ್ಲಿ ಮಂಗಳವಾರ ರಾಮಚಂದ್ರ ಗಂಗಾ ಅವರ 'ಒಡಲ ಒಗಟು' ಪುಸ್ತಕ ಬಿಡುಗಡೆ ಮಾಡಲಾಯಿತು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮೈಸೂರು ದಿಗಂತ ಪತ್ರಿಕೆ ಸಂಪಾದಕ ಮಳಲಿ ನಟರಾಜ್ ಕುಮಾರ್ ಪುಸ್ತಕ ಬಿಡುಗಡೆಗೊಳಿಸಿದರು. ಬಳಿಕ ಮಾತನಾಡಿದ ಅವರು, ರಾಮಚಂದ್ರ ಗಂಗಾ ಅವರು ಪತ್ರಿಕಾರಂಗಕ್ಕೆ ಸಂಬಂಧಿಸಿದಂತೆ ಒಂದಿಷ್ಟು ಪುಸ್ತಕ ಬರೆಯಲಿ ಎಂದು ಹಾರೈಸಿದರು.

ಅತಿಥಿಯಾಗಿ ಪಾಲ್ಗೊಂಡಿದ್ದ ರಂಗಸಂಘಟಕ ಮಾಧವಖರೆ ಮಾತನಾಡಿ, ಪುಸ್ತಕದ ಲೇಖನಗಳಲ್ಲಿ ಮಾನವೀಯ ಮೌಲ್ಯಗಳಿವೆ. ಆರ್ಥಿಕವಾಗಿ ಭದ್ರತೆ ಇಲ್ಲ ಎಂಬುದು ಗೊತ್ತಿದ್ದರೂ ತಾವು ನಂಬಿದ್ದ ಕಾಯಕದಲ್ಲಿ ಬದ್ಧತೆ ಹೊಂದಿದ್ದ ಮೈಸೂರಿನ ಹಲವರ ಬಗ್ಗೆ ರಾಮಚಂದ್ರ ಗಂಗಾ ಬೆಳಕು ಚೆಲ್ಲಿದ್ದಾರೆ. ಕೆಲ ದಶಕಗಳ ಹಿಂದಿನ ಮೈಸೂರು ಹೇಗಿತ್ತು? ಎಂಬುದನ್ನು ತಿಳಿಯಲು ಈ ಪುಸ್ತಕ ಓದಬೇಕು ಎಂದು ತಿಳಿಸಿದರು.

ಪ್ರಕಾಶಕ ಯು.ಎಸ್.ಮಹೇಶ್ ಮಾತನಾಡಿ, 60ಕ್ಕೂ ಹೆಚ್ಚು ಲೇಖನಗಳನ್ನು ಈ ಪುಸ್ತಕ ಒಳಗೊಂಡಿದೆ. ಅವೆಲ್ಲವೂ ಹಳೆಯ ಲೇಖನಗಳಾದರೂ ಪ್ರಸ್ತುತಕ್ಕೆ ಪೂರಕವಾಗಿವೆ ಎಂದು ಹೇಳಿದರು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಪರಿವರ್ತನ ರಂಗ ಸಮಾಜದ ಉಪಾಧ್ಯಕ್ಷ ಹೆಚ್.ಆರ್.ಅಧ್ಯಾಪಕ್, ಕೃತಿ ಕರ್ತೃ ಹಾಗೂ ಪತ್ರಕರ್ತ ರಾಮಚಂದ್ರ ಗಂಗಾ, ಪತ್ರಕರ್ತರಾದ ಕೆ. ದೀಪಕ್, ರವಿಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ ಮತ್ತಿತರರು ಹಾಜರಿದ್ದರು.

> “50ರ ದಶಕದಲ್ಲಿ ಮೈಸೂರಿನಲ್ಲೂ ಸರಕು ಸಾಗಾಣಿಕೆಗೆ ಎತ್ತಿನಗಾಡಿ ಬಳಸಲಾಗುತ್ತಿತ್ತು. ಈ ಎತ್ತಿನಗಾಡಿಗಳ ಚಕ್ರಕ್ಕೆ ಕೀಲೆಣ್ಣೆ ಹಾಕುವ ಕಾಯಕ ಮಾಡಿಕೊಂಡು ಬದುಕು ಕಟ್ಟಿಕೊಳ್ಳುತ್ತಿದ್ದವರಿದ್ದರು. 70ರ ದಶಕದ ಬಳಿಕ ಎತ್ತಿನಗಾಡಿ ಬಹುತೇಕ ಮೈಸೂರಿನಲ್ಲಿ ಇಲ್ಲವಾಯಿತು. ಹೀಗಾಗಿ ಇದೇ ವೃತ್ತಿ ನಂಬಿದ್ದವರ ಬದುಕಿನಲ್ಲಿ ಅನಿಶ್ಚಿತತೆ ಉಂಟಾಯಿತು. ಈ ಬಗ್ಗೆಯೂ ಲೇಖಕರು ಇಲ್ಲಿ ಬರೆದಿದ್ದಾರೆ. ಇಡೀ ಮೈಸೂರಿನ ಚಿತ್ರಣವನ್ನು ಲೇಖಕರು ಈ ಪುಸ್ತಕದಲ್ಲಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿನ ಮಾರುಕಟ್ಟೆ, ರಸ್ತೆಗಳು, ಕಲಾವಿದರು, ಸಂಗೀತಗಾರರು ಮೊದಲಾದವುಗಳ ಬಗ್ಗೆ ಚಿತ್ರಣ ಇಲ್ಲಿ ಲಭ್ಯವಾಗಲಿದೆ. **–ಮಾಧವಖರೆ, ರಂಗ ಸಂಘಟಕ**

ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘಕ್ಕೆ 50 ಲಕ್ಷ ಅನುದಾನ

ಒಕ್ಕಲಿಗರ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಶಾಸಕ ಎಂ.ಕೃಷ್ಣಪ್ಪ ಘೋಷಣೆ



ಮೈಸೂರು,ಸೆ.20(ಪಿಎಂ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘಕ್ಕೆ ಕರ್ನಾಟಕ ಒಕ್ಕಲಿಗರ ಸಮುದಾಯ ಅಭಿವೃದ್ಧಿ ನಿಗಮದಿಂದ 50 ಲಕ್ಷ ರೂ. ಅನುದಾನ ನೀಡುವುದಾಗಿ ನಿಗಮದ ಅಧ್ಯಕ್ಷರೂ ಆದ ಶಾಸಕ ಎಂ.ಕೃಷ್ಣಪ್ಪ ಪ್ರಕಟಿಸಿದರು.

ಮೈಸೂರಿನ ವಿದ್ಯಾರಣ್ಯಪುರಂನ ಶ್ರೀ ರಾಮಲಿಂಗೇಶ್ವರ ಉದ್ಯಾನವನದಲ್ಲಿ ಮಂಗಳವಾರ ಮೋದಿ ಯುಗ್ ಉತ್ಸವದಲ್ಲಿ ಪಾಲ್ಗೊಂಡಿದ್ದ ಅವರು, ಸಂಘದ ನಿರ್ದೇಶಕರು ಮತ್ತು ಆಡಳಿತ ಮಂಡಳಿಯ ಮನವಿ ಮೇರೆಗೆ ಅನುದಾನ ನೀಡುವ ಘೋಷಣೆ ಮಾಡಿದರು. ಬಳಿಕ ವಿದ್ಯಾರಣ್ಯಪುರಂನಲ್ಲಿರುವ ಸಂಘದ ಕಚೇರಿಗೆ ಕೃಷ್ಣಪ್ಪ ಹಾಗೂ ಸಚಿವ ಆರ್.ಅಶೋಕ್ ಅವರನ್ನು ಆಹ್ವಾನಿಸಲಾಯಿತು. ಕಚೇರಿಗೆ ಆಗಮಿಸಿದ ವೇಳೆ ಕೃಷ್ಣಪ್ಪ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶಾಸಕ ಎಸ್.ಎ.ರಾಮದಾಸ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಗಂಗಾಧರ್, ಸಂಘದ ಅಧ್ಯಕ್ಷ ಪಡುವಾರಹಳ್ಳಿ ಮರಿಸ್ವಾಮಿ, ಉಪಾಧ್ಯಕ್ಷ ರವಿ ರಾಜಕೀಯ, ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ಕೆ.ಪಿ.ನಾಗಣ್ಣ, ಕುಮಾರ್‌ಗೌಡ, ಪ್ರಶಾಂತಗೌಡ, ಆಲತ್ತೂರು ಜಯರಾಮ್, ಕುಮಾರ್, ಗಿರೀಶ್‌ಗೌಡ, ನಾಗಣ್ಣ, ಗೋಪಾಲ್ ಮತ್ತಿತರರು ಹಾಜರಿದ್ದರು.

ನಾಳೆ ಪರೀಕ್ಷಾ ತರಬೇತಿ ಶಿಬಿರದ ಉದ್ಘಾಟನೆ

ಮೈಸೂರು, ಸೆ.20– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಪರೀಕ್ಷಾ ತರಬೇತಿ ಶಿಬಿರದ ಉದ್ಘಾಟನಾ ಕಾರ್ಯಕ್ರಮವನ್ನು ಸೆ.22ರಂದು ಬೆಳಿಗ್ಗೆ 11 ಗಂಟೆಗೆ ಕರಾಮುವಿಯ ಆವರಣದಲ್ಲಿರುವ ಕಾವೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದ ಉದ್ಘಾಟನೆಯನ್ನು ಮೈಸೂರಿನ ಪ್ರಾದೇಶಿಕ ಕಚೇರಿ ಕರ್ನಾಟಕ ಬ್ಯಾಂಕ್‌ನ ಸಹಾಯಕ ಮಹಾ ಪ್ರಬಂಧಕ ರಮೇಶ್‌ರಾವ್ ಉದ್ಘಾಟಿಸಲಿದ್ದು, ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ಸಮಾರಂಭದ ಅಧ್ಯಕ್ಷತೆ ವಹಿಸುವರು. ಕುಲಪತಿಗಳ ಮಾರ್ಗ ದರ್ಶನದಲ್ಲಿ 45 ದಿನಗಳ ಕಾಲ ನಡೆಯಲಿರುವ ಶಿಬಿರದಲ್ಲಿ ಬ್ಯಾಂಕಿಂಗ್ ಹುದ್ದೆಗಳ ನೇಮಕಾತಿ ಪರೀಕ್ಷಾ ತರಬೇತಿಯು ಪ್ರಸ್ತುತ ಕೇಂದ್ರ ಸಿಬ್ಬಂದಿ ನೇಮಕಾತಿ ಆಯೋಗದವರು ನಡೆಸಲಿರುವ 20 ಸಾವಿರ ಹುದ್ದೆಗಳ ನೇಮಕಾತಿ ಪರೀಕ್ಷೆಗೂ ಈ ತರಬೇತಿ ಉಪಯೋಗವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 9964760090 ಸಂಪರ್ಕಿಸಬಹುದು ಎಂದು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆ ನಿಂತ ತಕ್ಷಣ ರಸ್ತೆ ದುರಸ್ತಿ

ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಭರವಸೆ

ಬೆಂಗಳೂರು, ಸೆ.20(ಕೆಎಂಶಿ)–ರಾಜ್ಯದಲ್ಲಿ ಇತ್ತೀಚೆಗೆ ಸುರಿದ ಭಾರೀ ಪ್ರಮಾಣದ ಮಳೆಯಿಂದಾಗಿ ರಸ್ತೆಗಳು ಹಾಳಾಗಿವೆ. ಮಳೆ ನಿಂತ ತಕ್ಷಣವೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ತಿಳಿಸಿದರು.



ಪ್ರಶ್ನೋತ್ತರ ಅವಧಿಯಲ್ಲಿ ಎಚ್.ಡಿ. ರೇವಣ್ಣ ಅವರ ಪರವಾಗಿ ಲಿಂಗೇಶ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು ಕಳೆದ ಎರಡು–ಮೂರು ವರ್ಷಗಳಿಂದ ನಿರಂತರವಾಗಿ ಮಳೆಯಾಗುತ್ತಲೇ ಇರುವುದರಿಂದ ರಸ್ತೆಗಳು ವ್ಯಾಪಕವಾಗಿ ಹಾಳಾಗಿವೆ. ಮಳೆ ಬಂದ ಸಂದರ್ಭದಲ್ಲಿ ದುರಸ್ತಿ ಕಾರ್ಯ ಸಾಧ್ಯವಿಲ್ಲ. ಮಳೆ ನಿಂತ ತಕ್ಷಣ ಆದ್ಯತೆ ಮೇರೆಗೆ ಕಾಮಗಾರಿ ಪ್ರಾರಂಭಿಸುತ್ತೇವೆ ಎಂದರು. ಮುಖ್ಯಮಂತ್ರಿ ಬೊಮ್ಮಾಯಿ ಅವರು ಲೋಕೋಪಯೋಗಿ ಇಲಾಖೆಗೆ ರಸ್ತೆಗಳ ಅಭಿವೃದ್ಧಿಗಾಗಿ 300 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಎಲ್ಲೆಲ್ಲಿ ಅಗತ್ಯವಿದೆಯೋ ಅಂತಹ ಆದ್ಯತೆ ಮೇರೆಗೆ ತೆಗೆದುಕೊಳ್ಳುತ್ತೇವೆ. ಪ್ರಸ್ತುತ ಮಳೆ ನಿಂತಿರುವುದರಿಂದ ಕಾಮಗಾರಿ ಆರಂಭಿಸಲಾಗುವುದು ಎಂದರು.

ಇ–ಖಾತೆ ವಿಧೇಯಕಕ್ಕೆ ಅಂಗೀಕಾರ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳಲ್ಲಿ 2006ರ ನಗರ ಮತ್ತು ಪಟ್ಟಣ ಯೋಜನಾ ಪ್ರಾಧಿಕಾರ ರಚನೆಗೂ. ಮುಂಚೆ ನಿರ್ಮಾಣಗೊಂಡ ಬಡಾವಣೆ ಹಾಗೂ ನಿವೇಶನಗಳಿಗೆ ಇ–ಖಾತೆ. ಸುಗಮವಾಗಿ ಲಭ್ಯವಾಗುವಂತೆ ಅವಕಾಶ ಮಾಡಿಕೊಡುವ ಕರ್ನಾಟಕ ಮುನ್ಸಿ ಪಾಲಿಟಿಗಳ ತಿದ್ದುಪಡಿ ವಿಧೇಯಕಕ್ಕೆ ಅಂಗೀಕಾರ ದೊರೆಯಿತು. ಈ ವಿಚಾರದಲ್ಲಿ ಯು.ಟಿ.ಖಾದರ್ ಹಾಗೂ ಕರಾವಳಿ ಭಾಗದ ಬಿಜೆಪಿ ಶಾಸಕರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಸಚಿವ ಎಂ.ಟಿ.ಬಿ.ನಾಗರಾಜ್ ವಿಧೇಯಕದ ಉದ್ದೇಶ ವಿವರಿಸಿದರು. ಅಂತಿಮವಾಗಿ ಅನುಮೋದನೆ ನೀಡಲಾಯಿತು. ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಲಾಗಿದ್ದ ಬಿಬಿಎಂಪಿ ತಿದ್ದುಪಡಿ ವಿಧೇಯಕ, ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ತಿದ್ದುಪಡಿ ವಿಧೆಯಕ ಹಾಗೂ ಕರ್ನಾಟಕ ಭೂ ಕಬಳಿಕೆ ನಿಷೇಧ ತಿದ್ದುಪಡಿ ವಿಧೇಯಕ, ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ವಿಧೇಯಕ, ರೇಷ್ಮೆ ಹುಳು ಬಿತ್ತನೆ ರೇಷ್ಮೆಗೂಡು ಮತ್ತು ರೇಷ್ಮೆ ನೂಲು ತಿದ್ದುಪಡಿ ವಿಧೇಯಕ ಮಂಡಿಸಿ ಅನುಮೋದನೆ ಪಡೆಯಲಾಯಿತು.

ಮಾನಸಿಕ ಅಸ್ವಸ್ಥ ನಾಪತ್ತೆ



ಮೈಸೂರು,ಸೆ.20–ಮಾನಸಿಕ ಅಸ್ವಸ್ಥ ವ್ಯಕ್ತಿಯೊಬ್ಬರು ಕಾಣೆಯಾಗಿರುವ ಪ್ರಕರಣ ಇಲವಾಲ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಮರಿಸ್ವಾಮಿ ನಾಯಕ (67) ಕಾಣೆಯಾದವರು. ನಮ್ಮ ತಂದೆ ಸೆ.16ರಂದು ಮನೆಯಿಂದ ಹೊರಗೆ ಹೋದ ವರು ಮರಳಿ ಮನೆಗೆ ಬಂದಿಲ್ಲ ಎಂದು ಪುತ್ರ ಉದಯ್‌ಕುಮಾರ್ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ.0821–2418339/ 9591330567 ಸಂಪರ್ಕಿಸುವಂತೆ ಕೋರಲಾಗಿದೆ.

ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿಗೆ

ರೋಟರಿ ದತ್ತ ಟೀಚರ್ಸ್ ಅವಾರ್ಡ್ ಪ್ರದಾನ

ಮೈಸೂರು,ಸೆ.20(ಎಸ್‌ಪಿಎನ್)– ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಮೈಸೂರು(ಜಿಲ್ಲಾ 3181) ಹಾಗೂ ವಲಯ 7ರ ಸಹಯೋಗದೊಂದಿಗೆ 'ಶಿಕ್ಷಕ ದಿನಾಚರಣೆ' ಅಂಗವಾಗಿ ಆಯೋಜಿಸಿದ್ದ ಸಮಾರಂಭದಲ್ಲಿ 25ನೇ ವರ್ಷದ 'ರೋಟರಿ ದತ್ತ ಟೀಚರ್ಸ್ ಅವಾರ್ಡ್' ಅನ್ನು ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ಅವರಿಗೆ ಅವಧೂತ ದತ್ತ ಪೀಠದ ಕಿರಿಯ ಶ್ರೀಗಳಾದ ವಿಜಯಾನಂದ ತೀರ್ಥ ಸ್ವಾಮೀಜಿ ಪ್ರದಾನ ಮಾಡಿದರು.



ನಂತರ ಮಾತನಾಡಿದ ಶ್ರೀಗಳು, ಇತ್ತೀಚೆಗೆ ವಿದ್ಯಾರ್ಥಿ–ಶಿಕ್ಷಕರ ನಡುವಿನ ಬಾಂಧವ್ಯ ಕಡಿಮೆಯಾಗುತ್ತಿದೆ. ಏಕೆಂದರೆ, ಪರಸ್ಪರ ಗೌರವಿಸುವ ಮನೋಭಾವ ಕಡಿಮೆಯಾಗುತ್ತಿರುವುದರಿಂದ ಸಂಬಂಧಗಳು ಹದಗೆಡುತ್ತಿದೆ. ಹಾಗಾಗಿ ಶಿಕ್ಷಕರನ್ನು ಗೌರವಿಸುವ ಕೆಲಸ ಸಂಘ–ಸಂಸ್ಥೆಗಳಿಂದ ಆಗಬೇಕು. ಇದರಿಂದ ತೆರೆಮರೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸುವ ಗುರುಗಳನ್ನು ಗೌರವಿಸಿದರೆ ಪ್ರಸ್ತುತ ಸಮಾಜವನ್ನು ಗೌರವಿಸಿದಂತೆ ಎಂದರು.

ಧ್ಯಾನ ಮನೋಭಾವದ, ದಯೆ– ಕರುಣೆ ಅಳವಡಿಸಿಕೊಂಡಿರುವ, ಇಂದ್ರಿಯಗಳನ್ನು ನಿಗ್ರಹಿಸುವ ಶಕ್ತಿ ಹೊಂದಿರುವವರು ಹಾಗೂ ಶಿಕ್ಷಕರಾದವರು ಸದಾ ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ಗುರುಗಳಾಗಲು ಸಾಧ್ಯ. ಶಿಕ್ಷಕರು ಲೌಕಿಕ ಮತ್ತು ಅಲೌಕಿಕ ಬದುಕಿನ ಕೊಂಡಿಯಂತೆ ಕೆಲಸ ಮಾಡುತ್ತಾರೆ. ಹಾಗಾಗಿ ಶಿಕ್ಷಕರನ್ನು ಗೌರವದಿಂದ ನಡೆಸಿಕೊಂಡರೆ ಮಾತ್ರ ಶಿಕ್ಷಕರು ತರಗತಿಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಬೋಧನೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯ ಎಂದರು.

ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವನೆ, ಮಾನಸಿಕ ಸ್ಥೈರ್ಯ ಹಾಗೂ ಅವರಲ್ಲಿರುವ ಕೌಶಲ್ಯವನ್ನು ಗುರುತಿಸುವ ಕೆಲಸ ಶಿಕ್ಷಕರದ್ದು, ಹಾಗಾಗಿ ಶಿಕ್ಷಕರ ದಿನಾಚರಣೆ ದಿನದಂದು ಶಿಕ್ಷಕರನ್ನು ವಿಶೇಷವಾಗಿ ನೆನೆಯುವ ಕೆಲಸವಾಗಬೇಕು. ಈ ಹಿಂದೆ ಗುರುಕುಲ ಪದ್ಧತಿಯಲ್ಲಿ ಮಕ್ಕಳುಗಳಿಗೆ ವಿಶೇಷ ಕಾಳಜಿ ವಹಿಸಿ, ವಿದ್ಯಾರ್ಜನೆ ಮಾಡಿಸಲಾಗುತ್ತಿತ್ತು. ಕಾಲ ಬದಲಾದಂತೆ ಜ್ಞಾನಾರ್ಜನೆ ಸ್ವರೂಪ ಬದಲಾಯಿತು ಎಂದರು. ಈ ವೇಳೆ ರೋಟರಿ ಮೈಸೂರು ಅಧ್ಯಕ್ಷ ರೊ.ಕೆ.ಸುಬ್ರಹ್ಮಣ್ಯರಾವ್, ರೊ.ಕೆ.ದಿನೇಶ್ ಬಾಬು, ಜಂಟಿ ಕಾರ್ಯದರ್ಶಿ ರೊ.ಸುಜಯ್, ಮೈಸೂರಿನ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಗೌರಿ ಗೋಕುಲ್ ಉಪಸ್ಥಿತರಿದ್ದರು.

ಇಂದು ಬೃಹತ್ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಸೆ.20–ಆರೋಗ್ಯ ಕರ್ನಾಟಕ ಅಭಿಯಾನದ ಅಂಗವಾಗಿ ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಸೆ.21ರಂದು ನಗರದ ಎಸ್.ಎಂ.ಟಿ. ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಸಾಮಾನ್ಯ ವೈದ್ಯಕೀಯ, ಹೃದ್ರೋಗ, ಪ್ರಸೂತಿ, ಸ್ತ್ರೀರೋಗ, ಮಕ್ಕಳ, ಕ್ಯಾನ್ಸರ್ ರೋಗ, ಕಣ್ಣಿನ, ಹಲ್ಲಿನ, ಮನೋರೋಗ, ಕಿವಿ/ಮೂಗು/ಗಂಟಲು ರೋಗದ ತಜ್ಞರು ಹಾಗೂ ಆಯುಷ್ ತಜ್ಞ ವೈದ್ಯರ ಸೇವೆಗಳು ಲಭ್ಯವಿರುತ್ತದೆ. ಸಾರ್ವಜನಿಕರು ಈ ಶಿಬಿರದ ಸೇವೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ದಶಪಥ ಹೆದ್ದಾರಿ ಅಕ್ಕಪಕ್ಕದ ಗ್ರಾಮಸ್ಥರಿಗೆ ಶಾಪ



6 ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯೂ ಕಳಪೆಯಿಂದ ಕೂಡಿದೆ. ಬಹುತೇಕ ಕಡೆ ರಸ್ತೆಯ ಗುಣಮಟ್ಟ ಕಾಪಾಡಿಕೊಂಡಿಲ್ಲ. ಇಷ್ಟ ಬಂದಂತೆ ಕಾಮಗಾರಿ ಮಾಡಲಾಗುತ್ತಿದೆ. ಸರ್ಕಾರ ಕೂಡಲೇ ಹೆದ್ದಾರಿಯ ಬಗ್ಗೆ ಗಂಭೀರವಾಗಿ ತೆಗೆದುಕೊಂಡು ಜನರಿಗೆ ಆಗುತ್ತಿರುವ ಸಮಸ್ಯೆಯನ್ನು ಸರಿಪಡಿಸಬೇಕು. ಅಲ್ಲದೆ, ಗುಣಮಟ್ಟದ ಕಾಮಗಾರಿ ಕಾಪಾಡಿಕೊಳ್ಳಬೇಕು. -ಡಿ.ಸಿ.ತಮ್ಮಣ್ಣ, ಶಾಸಕರು.

ಮಂಡ್ಯ, ಸೆ.20- ಬೆಂಗಳೂರು-ಮೈಸೂರು ದಶಪಥ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಿಂದ ಸಾಕಷ್ಟು ಸಮಸ್ಯೆ ತೊಂದರೆ ಉಂಟಾಗಿದ್ದು, ಅಕ್ಕಪಕ್ಕದ ಗ್ರಾಮಸ್ಥರಿಗೆ ಶಾಪವಾಗಿ ಪರಿಣಮಿಸಿದೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ಹೇಳಿದರು.

ನಗರದ ಕಲಾಮಂದಿರದಲ್ಲಿ ಪಾಂಚಜನ್ಯ ಸೇವಾ ಟ್ರಸ್ಟ್‌ನಿಂದ ನಡೆದ ನಟ ದಿ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ರಾಜ್ಯ ಮಟ್ಟದ ಗಾಯನ ಸ್ಪರ್ಧೆ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ರಾಮನಗರದಿಂದ ಮೈಸೂರಿನವರೆಗೂ ಇದೇ ಸಮಸ್ಯೆಯಾಗಿದೆ. ಸಣ್ಣಪುಟ್ಟ ಅಂಗಡಿ-ಮುಂಗಟ್ಟುಗಳನ್ನಿಟ್ಟುಕೊಂಡು ಜೀವನ ಕಂಡುಕೊಂಡಿದ್ದ ವ್ಯಾಪಾರಸ್ಥರು, ಹೋಟೆಲ್‌ಗಳು ಮುಚ್ಚಲಿವೆ. ಇದರಿಂದ ನಿರುದ್ಯೋಗ ಸಮಸ್ಯೆ ಹೆಚ್ಚಾಗಲಿದೆ. ಅಲ್ಲದೆ, ಎಲ್ಲಿಯೂ ಗ್ರಾಮಸ್ಥರು ಸಂಚರಿಸಲು ಆಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಂಗಳೂರಿನಿಂದ ಹೊರಟರೆ ಮೈಸೂರಿನಲ್ಲಿಯೇ ನಿಲ್ಲಲು ಸಾಧ್ಯ. ಮಧ್ಯೆ ನಿಲ್ದಾಣಗಳೇ ಇಲ್ಲ. ಇದೊಂದು ಅವೈಜ್ಞಾನಿಕ ಕಾಮಗಾರಿಯಾಗಿದೆ ಎಂದರು.

ಸಮಾರೋಪ ಸಮಾರಂಭದಲ್ಲಿ ಶಾಸಕ ಕೆ.ಅನ್ನದಾನಿ ಮಾತನಾಡಿ, ಕಲಾವಿದರು ಹೆಚ್ಚು ಇರುವ ಜಿಲ್ಲೆ ಮಂಡ್ಯ. ಇಂಥ ಜಿಲ್ಲೆಯಲ್ಲಿ ಕಲಾವಿದರಿಗೆ ಹೆಚ್ಚು ಗೌರವ ಹಾಗೂ ಮನ್ನಣೆ ನೀಡಬೇಕು ಎಂದರು.

ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಮಾತನಾಡಿ, ಸರ್ಕಾರಗಳು ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಅಲ್ಲದೆ, ಸಂಘ-ಸಂಸ್ಥೆಗಳು ಇಂಥ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕಲಾವಿದರನ್ನು ಬೆಳೆಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರನ್ನು ಅಭಿನಂದಿಸಲಾಯಿತು. ನಂತರ ಗಾಯನ ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ನಗದು ಬಹುಮಾನ, ಪ್ರಮಾಣ ಪತ್ರ ವಿತರಿಸಲಾಯಿತು.

ವೇದಿಕೆಯಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಮಾಜಿ ಸಚಿವ ಎಂ.ಎಸ್. ಆತ್ಮಾನಂದ, ನಗರಸಭೆ ಅಧ್ಯಕ್ಷ ಎಚ್.ಎಸ್. ಮಂಜು, ಕೆಎಂಎಫ್ ನಿರ್ದೇಶಕ ಎಂ.ವಿ.ವಿಶ್ವನಾಥ್, ಚಲನಚಿತ್ರ ನಟ ಸಚಿನ್ ಚಲುವರಾಯಸ್ವಾಮಿ, ಮುಖಂಡರಾದ ಪಟ್ಟೇಗೌಡ, ಡಾ.ಇಂದ್ರೇಶ್, ಸಂತೋಷ್‌ಕುಮಾರ್, ಮಹಾಲಿಂಗೇಗೌಡ ಮುದ್ದನಘಟ್ಟ, ಹಿರಿಯ ಪತ್ರಕರ್ತರಾದ ಮತ್ತೀಕೆರೆ ಜಯರಾಂ, ಎಸ್.ಕೃಷ್ಣ ಸ್ವರ್ಣಸಂದ್ರ, ಬಿ.ಪಿ.ಪ್ರಕಾಶ್, ಶಿವು ಬೆಸಗರಹಳ್ಳಿ, ನಗರಸಭೆ ಸದಸ್ಯರಾದ ನಾಗೇಶ್, ನಹೀಂ, ಪ್ರಸನ್ನ, ನೀನಾ ಪಟೇಲ್, ಪ್ರಿಯಾಂಕ ಅಪ್ಪುಗೌಡ, ಶಬ್ರೀನ್ ತಾಜ್ ಇದ್ದರು.

ವಿಶ್ವಕರ್ಮ ಜಯಂತಿ ಆಚರಣೆ



ಕಿಕ್ಕೇರಿ, ಸೆ.20- ನಾಡಿನಲ್ಲಿ ಶಿಲ್ಪಕಲೆಯ ನೈಪುಣ್ಯತೆಯನ್ನು ತೋರಿಸಿಕೊಟ್ಟ ಜಕಣಾಚಾರಿ ವಿಶ್ವಕರ್ಮ ಸಮುದಾಯದವರಾಗಿದ್ದು, ಇವರಂತೆ ನೂರಾರು ಶಿಲ್ಪಿಗಳು ಸಮುದಾಯದಲ್ಲಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಮುಖಂಡ ಮಹೇಶಚಾರಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ವಿಶ್ವಕರ್ಮ ಸಮುದಾಯದಿಂದ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರ ವಿಶ್ವಕರ್ಮ ಅಭಿವೃದ್ಧಿ ನಿಗಮ ಸ್ಥಾಪಿಸಿದ್ದು, ಕೊರೊನಾ ಕಾಲಘಟ್ಟದಲ್ಲಿ ಕೆಲಸವಿಲ್ಲದೆ ಬದುಕು ಕಷ್ಟವಾಗಿತ್ತು. ಸರ್ಕಾರದಿಂದ ನೆರವಿಲ್ಲದೆ ಪರದಾಟವಾಗಿತ್ತು. ಹುಟ್ಟಿನಿಂದ ಸಾಯುವ ತನಕ ಎಲ್ಲ ಕಸುಬಿಗೆ ಬೇಕಿರುವ ತಮಗೆ ವಿಶೇಷ ಸೌಲಭ್ಯ, ಹಿರಿಯ ನಾಗರಿಕರಿಗೆ ಆಸರೆಯಾಗಲು ಸರ್ಕಾರ ಮುಂದಾಗಬೇಕು ಎಂದು ತಿಳಿಸಿದರು.

ಹಿರಿಯ ಮುಖಂಡ ಗೋವರ್ಧನಾಚಾರ್ ಮಾತನಾಡಿದರು. ಈ ವೇಳೆ ಮುಖಂಡರಾದ ಶ್ಯಾಮ್ ಪ್ರಸಾದ್, ದಿವಾಕರ್, ಬಾಲಚಂದ್ರು, ನಾಗರಾಜು, ಈಶ್ವರ, ಲೋಕೇಶ್, ಯೋಗೇಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಭಾರತ್ ಜೋಡೊ ಯಶಸ್ವಿಗೆ ಸಂಘಟನೆ ಅಗತ್ಯ



ಶ್ರೀರಂಗಪಟ್ಟಣ, ಸೆ.20- ಕಾಂಗ್ರೆಸ್‌ನ ಮಹತ್ವಾಕಾಂಕ್ಷೆಯ ಭಾರತ್ ಜೋಡೊ ಕಾರ್ಯಕ್ರಮಕ್ಕೆ ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರದಿಂದ 10 ಸಾವಿರಕ್ಕೂ ಹೆಚ್ಚು ಜನ ಕಾರ್ಯಕರ್ತರು ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಬೂತ್ ಮಟ್ಟದಿಂದ ಸಂಘಟನೆ ನಡೆಸಬೇಕು ಎಂದು ಕಾರ್ಯಕ್ರಮದ ವೀಕ್ಷಕ ಹಾಗೂ ಮಾಜಿ ಶಾಸಕ ಎಸ್.ಬಾಲರಾಜು ಹೇಳಿದರು.

ಪಟ್ಟಣದ ಹೊರವಲಯದ ಗಾಯತ್ರಿ ಕನ್‌ವೆನ್ಷನ್ ಹಾಲ್‌ನಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಹುಲ್ ಗಾಂಧಿಯವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಭಾರತ್ ಜೋಡೋ ಯಾತ್ರೆ ಹಮ್ಮಿಕೊಂಡಿದ್ದಾರೆ. ಸುಮಾರು 3,570 ಕಿ.ಮೀ ದೂರ ಯಾತ್ರೆಯನ್ನು ಆರಂಭಿಸುತ್ತಿದ್ದು ಕಾರ್ಯಕ್ರಮದ ಅಭೂತ ಪೂರ್ವ ಯಶಸ್ಸಿಗೆ ಪ್ರತಿಯೊಬ್ಬ ಕಾರ್ಯಕರ್ತರು ಶ್ರಮಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ತಾಲೂಕಿನ ಪ್ರತಿ ಗ್ರಾಮಗಳಿಗೂ ಕಾರ್ಯಕರ್ತರು ಭೇಟಿ ನೀಡಿ, ಯಾತ್ರೆಯ ಉದ್ದೇಶವನ್ನು ತಿಳಿಸಬೇಕು. ಕಾರ್ಯಕ್ರಮಕ್ಕೆ ಹೆಚ್ಚು ಜನರು ಬರುವಂತೆ ನೋಡಿಕೊಳ್ಳಬೇಕು. ಈ ಸಂಬಂಧ ಗ್ರಾಪಂ ಮಟ್ಟದಲ್ಲಿ ಸಭೆ ನಡೆಸಿ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಕಾಂಗ್ರೆಸ್ ಹಿರಿಯ ಮುಖಂಡ ಪಾಲಹಳ್ಳಿ ಚಂದ್ರಶೇಖರ್ ಮಾತನಾಡಿ, ಶ್ರೀರಂಗಪಟ್ಟಣ ತಾಲೂಕಿನಲ್ಲಿ ಕಾಂಗ್ರೆಸ್ ಶಾಸಕರಾಗಿ 25 ವರ್ಷಗಳಾಗಿವೆ 1999ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನೇತೃತ್ವದಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಗೆದಿದ್ದನ್ನು ಬಿಟ್ಟರೆ ಇಲ್ಲಿಯವರೆಗೂ ಪಕ್ಷದಿಂದ ಎಂಎಲ್‌ಎ ಆಗಿಲ್ಲ. ಈ ಮೂಲಕ ಪಕ್ಷ ತಾಲೂಕಿನಲ್ಲಿ ಹೀನಾಯ ಪರಿಸ್ಥಿತಿಗೆ ತಲುಪಿದೆ ಎಂದು ವೇದಿಕೆ ಮೇಲಿದ್ದ ಮಾಜಿ ಶಾಸಕರ ಬಣಕ್ಕೆ ಠಕ್ಕರ್ ನೀಡಿದರು.

ಇದಕ್ಕೆ ಕೆರಳಿದ ಕೆಲ ಮಾಜಿ ಶಾಸಕರ ಬೆಂಬಲಿಗರು ಕೂಡ ವೇದಿಕೆ ಮೇಲೆ ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಈ ಮೂಲಕ ಶ್ರೀರಂಗಪಟ್ಟಣ ಕಾಂಗ್ರೆಸ್ ಪಕ್ಷದಲ್ಲಿ ಮೂಲ ಹಾಗೂ ವಲಸಿಗ ಕಾಂಗ್ರೆಸ್ ಕಿತ್ತಾಟ ಬಹಿರಂಗವಾಯಿತು. ಸಭೆಯಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾ ಮಾಧ್ಯಮ ಸಂಚಾಲಕ ಪುಟ್ಟೇಗೌಡ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಗುವಿನಹಳ್ಳಿ ಪ್ರಕಾಶ್, ತಾಲೂಕು ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಹೊಸಹುಂಡವಾಡಿ ಸಂಜಯ್, ಪುರಸಭೆ ಸದಸ್ಯರಾದ ಎಂ.ಎಲ್.ದಿನೇಶ್, ನಂದೀಶ್, ಗ್ರಾಪಂ ಸದಸ್ಯರಾದ ಮಂಟಿ ವಿಶ್ವನಾಥ್, ತರುಣ್, ಮುಖಂಡರಾದ ಹೊಸಹಳ್ಳಿ ಕೃಷ್ಣಮೂರ್ತಿ, ಕೂಡಲಕುಪ್ಪೆ ರವಿಶಂಕರ್, ನಂದಕುಮಾರ್ ಇದ್ದರು.

ಕೃಷಿ ಪತ್ತಿನ ಸಂಘದ ಷೇರುದಾರರಾಗಲು ಸಲಹೆ



ಕೆ.ಆರ್.ಪೇಟೆ, ಸೆ.20- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಷೇರುದಾರರಿಗೆ ಮಾತ್ರ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತಿದ್ದು, ರೈತರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಷೇರುದಾರರಾಗುವ ಮೂಲಕ ಸಾಲ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಮಂಡ್ಯ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್ ಸಲಹೆ ನೀಡಿದರು.

ತಾಲೂಕಿನ ಹೊಸಹೊಳಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹೊಸಹೊಳಲು ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ನಿವ್ವಳ ಲಾಭ 19ಲಕ್ಷ ರೂ.ಗಳಿಗಿಂತ ಹೆಚ್ಚು ಆದಾಯ ಬಂದಿರುವುದು. ಸರ್ವ ಸದಸ್ಯರ ಪಾತ್ರ ಮಹತ್ವದ್ದಾಗಿದೆ. ವಾರ್ಷಿಕ ಸಭೆಗೆ ಕಡ್ಡಾಯವಾಗಿ ಭಾಗವಹಿಸಿ ಬ್ಯಾಂಕ್ ಆಗುಹೋಗುಗಳ ಬಗ್ಗೆ ಚರ್ಚಿಸಿ ಮಾಹಿತಿ ಪಡೆಯಬೇಕು ಹಾಗೂ ಸಲಹೆಗಳನ್ನು ನೀಡಬೇಕು ಎಂದರು. ಬ್ಯಾಂಕ್ ಅಧ್ಯಕ್ಷ ಹೆಚ್.ಜೆ.ಚಂದ್ರೇಗೌಡ ಮಾತನಾಡಿ, ಮಹಿಳೆಯರಿಗೆ ಬ್ಯಾಂಕ್‌ನಿಂದ 5 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಸೌಲಭ್ಯ ನೀಡಲಾಗುತ್ತಿದೆ. ಕ್ಷೀರ ಸಮೃದ್ಧಿ ಯೋಜನೆಯಡಿ ರಾಸುಗಳನ್ನು ಕೊಳ್ಳಲು ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆಯುವ ವ್ಯವಸ್ಥೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ರಾಮಕೃಷ್ಣೇಗೌಡ, ಮೇಲ್ವಿಚಾರಕ ಆದಿಲ್ ಪಾಷಾ, ಸಂಘದ ಉಪಾಧ್ಯಕ್ಷ ತೇಜಾವತಿ ಚಂಚೇಗೌಡ, ನಿರ್ದೇಶಕರಾದ ಎಸ್.ಪ್ರಕಾಶ್, ಯೋಗೇಶ್, ನಾಗರಾಜು, ಸಚಿನ್‌ಬಾಬು, ಕೃಷ್ಣ, ಬಲರಾಮೇಗೌಡ, ಜಾನಕಮ್ಮ, ಅಭಿಶೇಖರ್, ಸಿದ್ದಯ್ಯ, ಪುಟ್ಟರಾಜು, ಹೆಚ್.ಪಿ.ಕಾಂತರಾಜು, ಚಿಕ್ಕೇಗೌಡ, ರಾಮೇಗೌಡ, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯೋಗೇಂದ್ರ, ಸಹಾಯಕ ವ್ಯವಸ್ಥಾಪಕ ಪ್ರಮೋದ್, ಡಾ.ಶ್ರೀನಿವಾಸ ಶೆಟ್ಟಿ, ಮಾಸ್ಟರ್ ಗಣೇಶ್, ಹೆಚ್.ಜೆ.ಶ್ರೀನಿವಾಸ್ ಇದ್ದರು.

ಶೋಷಿತ ಸಮುದಾಯಗಳ ಆರ್ಥಿಕ ಸಬಲೀಕರಣ ಅವಶ್ಯ



ಮಂಡ್ಯ, ಸೆ.20- ಪ್ರಸ್ತುತ ದಿನಗಳಲ್ಲಿ ಶೋಷಿತ ಸಮುದಾಯಗಳು ಆರ್ಥಿಕ ಕ್ಷೇತ್ರದಲ್ಲಿ ಸಬಲೀಕರಣಗೊಳ್ಳುವುದು ಅತ್ಯವಶ್ಯ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಪೀಠಾಧ್ಯಕ್ಷ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘ (ಎವಿಎಸ್‌ಎಸ್) ತಾಲೂಕು ಶಾಖೆ ಆಯೋಜಿಸಿದ್ದ ವಾರ್ಷಿಕ ಮಹಾಸಭೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಆರ್ಥಿಕ ಸಬಲೀಕರಣಕ್ಕೆ ಆರ್‌ಬಿಐ ಸ್ಥಾಪನೆ ಮುನ್ನುಡಿ ಬರೆದ ಆರ್ಥಿಕ ತಜ್ಞ ಡಾ.ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ಒಂದು ರಾಷ್ಟ್ರೀಕೃತ ಬ್ಯಾಂಕ್ ಇಲ್ಲದಿರುವುದು ದುರಂತವಲ್ಲದೆ ಮತ್ತೇನು ಎಂದು ಎಚ್ಚರಿಸಿದರು. ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘವು ಮುಂದಿನ 5 ವರ್ಷಗಳಲ್ಲಿ 100 ಕೋಟಿ ರೂ.ಗೂ ಹೆಚ್ಚು ವ್ಯವಹಾರ ನಡೆಸಲು ರಾಜ್ಯದಲ್ಲಿರುವ ಜನತೆ ಷೇರುದಾರರಾಗಿ, ವಾರ್ಷಿಕ 100ಕೋಟಿ ರೂ. ವ್ಯವಹಾರ ನಡೆಸಿದರೆ ಆರ್‌ಬಿಐನಿಂದ ಅನುಮತಿ ಪಡೆದು ಅಂಬೇಡ್ಕರ್ ಬ್ಯಾಂಕ್ ಸ್ಥಾಪಿಸಲು ಯೋಜನೆ ರೂಪಿಸಬಹುದು ಎಂದು ಕಿವಿ ಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ, ಮತ್ತು ಪಿಯುಸಿ ಪ್ರತಿಭಾಂತ ವಿದ್ಯಾರ್ಥಿಗಳಿಗೆ ಗಣ್ಯರು ಪುರಸ್ಕಾರ ನೀಡಿದರು. ಶೇರುದಾರರ ಸ್ವ-ಸಹಾಯ ಸಂಘಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಬೌದ್ಧ ಧರ್ಮಗುರು ಬೋಧಿದತ್ತ ಬಂತೇಜಿ, ಬಿಎಸ್‌ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ, ಎವಿಎಸ್‌ಎಸ್ ಸಂಸ್ಥಾಪಕ ಅಧ್ಯಕ್ಷ ರಾಮಣ್ಣ, ತಾಲೂಕು ಶಾಖೆ ಮುಖ್ಯಸ್ಥ ಗುರುಶಂಕರ್, ಅಧೀಕ್ಷಕ ಅಭಿಯಂತರ ಚಂದ್ರಹಾಸ, ಡಿಎಸ್‌ಎಸ್ ರಾಜ್ಯ ಸಂಚಾಲಕ ಅಂದಾನಿ, ಸಂಘದ ಸದಸ್ಯರಾದ ಆಶಾ ರಾಣಿ, ಕಾರ್ಯದರ್ಶಿ ಜಯಶಂಕರ್, ಸಿಇಓ ವರಲಕ್ಷ್ಮಿ, ಕುಮಾರ್, ಮುರುಗನ್ ಮತ್ತಿತರರಿದ್ದರು.

ಇಂದು ಬೃಹತ್ ಉದ್ಯೋಗ ಮೇಳ

ಮಂಡ್ಯ, ಸೆ.20- ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಬೆಂಗಳೂರು ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಎಸ್‌ಬಿ ಎಜುಕೇಷನ್ ಟ್ರಸ್ಟ್, ಮಂಡ್ಯ, ತಾವರಗೆರೆ ಕೈಗಾರಿಕಾ ತರಬೇತಿ ಕೇಂದ್ರ, ಮದ್ದೂರು ಮಾಂಡವ್ಯ ಕೈಗಾರಿಕಾ ತರಬೇತಿ ಕೇಂದ್ರ, ಇವರುಗಳ ಸಹಯೋಗದೊಂದಿಗೆ ಸೆ. 21ರಂದು ಬೆಳಗ್ಗೆ 10.30ಕ್ಕೆ ಮಂಡ್ಯ ನೆಹರು ನಗರದ ಎಸ್.ಬಿ.ಸಮುದಾಯ ಭವನದಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ.

ಓಝೋನ್ ವಿನಾಶದಿಂದ ಚರ್ಮ ಕ್ಯಾನ್ಸರ್ ಹೆಚ್ಚಳ



ಮಂಡ್ಯ, ಸೆ.20- ಜೀವರಕ್ಷಕ ಓಝೋನ್ ಪದರ ವಿನಾಶಗೊಂಡರೆ ಚರ್ಮ ಕ್ಯಾನ್ಸರ್ ಹೆಚ್ಚಾಗುತ್ತದೆ ಎಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಜಿಲ್ಲಾ ಸಭಾಧ್ಯಕ್ಷೆ ಮೀರಾ ಶಿವಲಿಂಗಯ್ಯ ಹೇಳಿದರು.

ತಾಲೂಕಿನ ತಿಮ್ಮನಹೊಸೂರು ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನಂಜಮ್ಮ ಮೋಟೆಗೌಡ ಚಾರಿಟಬಲ್ ಟ್ರಸ್ಟ್ ಕೊಪ್ಪ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಕೃಷಿಕ ಲಯನ್ಸ್ ಸಂಸ್ಥೆ ಇವರು ಆಯೋಜಿಸಿದ 'ವಿಶ್ವ ಓಝೋನ್ ದಿನ' ಪ್ರಯುಕ್ತ ಉಪನ್ಯಾಸ, ಪ್ರಾತ್ಯಕ್ಷಿಕೆ, ಸಸ್ಯೋತ್ಸವ, ಪರಿಸರ ಗೀತೆಗಳ ಗಾಯನ, ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ಹಾಗೂ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ಪ್ರದಾನ ಕಾರ್ಯ ಕ್ರಮವನ್ನು ಸಸಿ ನೆಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ಜಗತ್ತು ಬೆಳೆದಂತೆ ಜಾಗತಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ. ಜೀವ ಸಂಪತ್ತಿಗೆ ಮಾರಕವಾಗುತ್ತಿದೆ. ಆಧುನಿಕ ಜೀವನ ಶೈಲಿಗಾಗಿ ಮನುಷ್ಯ ಬಳಸುವ ವಸ್ತುಗಳಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಗೃಹ ಬಳಕೆಗಾಗಿ ತಯಾರಿಸಿದ ರೆಫ್ರಿಜರೇಟರ್, ಏರ್ ಕಂಡೀಷನರ್, ಕಾಸ್ಮೆಟಿಕ್ಸ್ ಬಳಕೆ ಹೆಚ್ಚಾಗುತ್ತಿದೆ. ಇದರಿಂದ ಕ್ಲೋರೋಫ್ಲೋರ್ ಕಾರ್ಬನ್ ಬಿಡುಗಡೆಯಾಗಿ ಓಝೋನ್ ಮಾರಕವಾಗುತ್ತದೆ ಎಂದರು. ನಂಜಮ್ಮ ಮೋಟೆಗೌಡ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಕೆ.ಟಿ.ಹನುಮಂತು ಮಾತನಾಡಿ, ಇಂದಿನ ಗ್ರಾಮೀಣ ವ್ಯಾಪ್ತಿಯ ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವ ಹೆಚ್ಚಿಸಿ ಕೊಂಡು ಮೂಢ ನಂಬಿಕೆಯಿಂದ ಹೊರ ಬರಬೇಕಿದೆ. ವಿಜ್ಞಾನ, ಗಣಿತ, ಇತಿಹಾಸ, ಪರಿಸರ ಕಾಳಜಿ ಬಗ್ಗೆ ಹೆಚ್ಚು ಆಸಕ್ತಿ ಬೆಳೆಸಿಕೊಳ್ಳಬೇಕಿದೆ ಎಂದರು. ಇದೇ ಸಂದರ್ಭದಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ನೀಡಲಾಯಿತು. ಪರಿಸರ ಬಗ್ಗೆ ಕಾಳಜಿ ವಹಿಸಿರುವ ಶಿಕ್ಷಕರಿಗೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕ ಯೋಗೇಶ್, ಪರಿಸರ ತಜ್ಞೆ ಭವ್ಯಾ, ಪರಿಸರ ಪ್ರೇಮಿ ಹಾಗೂ ಗಾಯಕ ರಮೇಶ್ ಕರಿಘಟ್ಟ, ಕೃಷಿಕ ಲೈನ್ಸ್ ಸಂಸ್ಥೆ ಅಧ್ಯಕ್ಷ ಮೋಹನ್ ಕುಮಾರ್, ವಿಷಯ ಪರಿವೀಕ್ಷಕರಾದ ಸಿ.ಎಲ್. ನಂಜರಾಜು, ಎಸ್.ಲೋಕೇಶ್, ಲಯನ್ಸ್ ಸಂಸ್ಥೆಯ ರಕ್ಷಿತ್‌ರಾಜ್, ಸುಬ್ಬೆಗೌಡ, ಗ್ರಾಪಂ ಸದಸ್ಯ ಆನಂದ್, ಶಾಲಾ ಶಿಕ್ಷಕರು ಹಾಜರಿದ್ದರು.

ಕರಾಟೆ: ಲಿಖಿತಾ ರಾಜ್ಯ ಮಟ್ಟಕ್ಕೆ ಆಯ್ಕೆ

ಭಾರತೀನಗರ, ಸೆ.20- ಇಲ್ಲಿಗೆ ಸಮೀಪದ ದಳವಾಯಿ ಕೋಡಿಹಳ್ಳಿಯ ಕಸ್ತೂರಿ ಬಾಯಿ ವಸತಿ



ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ ವೈ.ಎನ್.ಲಿಖಿತಾ ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಮುಖ್ಯ ಶಿಕ್ಷಕಿ ನಾಗವೇಣಿ ತಿಳಿಸಿದರು.

ಅಲ್ಲದೇ ಎತ್ತರ ಜಿಗಿತದಲ್ಲಿ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈಕೆಯನ್ನು ಶಾಲೆಯ ಮುಖ್ಯಶಿಕ್ಷಕರು ಮತ್ತು ಶಿಕ್ಷಕರು ಅಭಿನಂದಿಸಿದ್ದಾರೆ.

ಮಕ್ಕಳಿಗೆ ಶಾಲಾ ಬ್ಯಾಗ್ ವಿತರಣೆ



ಮಂಡ್ಯ ತಾಲೂಕಿನ ಶಿವಾರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಶಾಲಾ ಬ್ಯಾಗ್‌ಗಳನ್ನು ಮನ್‌ಮುಲ್ ಹಾಗೂ ಶ್ರೀಶಂಭು ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಆರ್.ರಾಮಚಂದ್ರ ವಿತರಿಸಿದರು. ಈ ವೇಳೆ ಶಿವಾರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ವಿಜೇಂದ್ರ, ಎಸ್‌ಡಿಎಂಸಿ ಅಧ್ಯಕ್ಷ ರಮೇಶ್, ಅನಿಲ್ ಸೇರಿದಂತೆ ಇತರರಿದ್ದರು.

ವಿದ್ಯುತ್ ಗುತ್ತಿಗೆದಾರರ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಒತ್ತಾಯ

ಪಾಂಡವಪುರ, ಸೆ.20- ರಾಜ್ಯ ಸರ್ಕಾರ ವಿದ್ಯುತ್ ಗುತ್ತಿಗೆದಾರರ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿ ಗುತ್ತಿಗೆದಾರರ ಸಮಸ್ಯೆ ಆಲಿಸಬೇಕು ಎಂದು ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್.ಆರ್.ರಮೇಶ್ ಒತ್ತಾಯಿಸಿದರು.

ಪಟ್ಟಣದ ವೆಂಕಟೇಶ್ವರ ಸಭಾಂಗಣದಲ್ಲಿ ನಡೆದ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ನೂತನ ರಾಜ್ಯಾಧ್ಯಕ್ಷ ಆರ್.ಆರ್.ರಮೇಶ್ ಅವರಿಗೆ ಅಭಿನಂದನೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರ ಸಮಸ್ಯೆಗಳು ಆಹ್ವಾಲುಗಳು ಸಾಕಷ್ಟಿವೆ. ಗುತ್ತಿಗೆದಾರರ ಸಮಸ್ಯೆ ನೀಗಿಸಬೇಕಾದರೆ ಸರ್ಕಾರ ವಿದ್ಯುತ್ ಗುತ್ತಿಗೆದಾರರ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಬೇಕು. ಆ ಮೂಲಕ ಸಮಸ್ಯೆಗಳ ಪರಿಹಾರಕ್ಕೆ ಸಹಕರಿಸಬೇಕು ಎಂದು ಆಗ್ರಹಿಸಿದರು.

ಡಿ.10 ಮತ್ತು 11ರಂದು ಬೆಂಗಳೂರಿನಲ್ಲಿ ಸಂಘದ ಶತಮಾನೋತ್ಸವ ಆಚರಣೆ ಮಾಡಲಾಗುತ್ತಿದೆ. ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದಾರೆ. ಈ ವೇಳೆ ಸಂಘದ ಸದಸ್ಯರ ಮಕ್ಕಳಿಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ. ಜೊತೆಗೆ ಹಿರಿಯ ಗುತ್ತಿಗೆದಾರರಿಗೂ ಅಭಿನಂದನೆ ಹಮ್ಮಿಕೊಳ್ಳಲಾಗಿದೆ ಎಂದರು.

ಗುತ್ತಿಗೆದಾರರು ಸಮಸ್ಯೆಗಳು ಇದ್ದರೆ ನೇರವಾಗಿ ನಮ್ಮನ್ನು ಸಂಪರ್ಕಿಸಿ ಇಲ್ಲವಾದರೆ ನೇರವಾಗಿ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಿಕೊಳ್ಳಬೇಕು. ಹಾಗೆಯೇ ಅಧಿಕಾರಿಗಳು ಸಹ ಗುತ್ತಿಗೆದಾರರ ಸಮಸ್ಯೆ ಸ್ಪಂದನೆ ನೀಡಬೇಕು ಎಂದರು.

ಸಭೆಯಲ್ಲಿ ವಿದ್ಯುತ್ ಗುತ್ತಿಗೆದಾರರ ಸಂಘದ ನೂತನ ರಾಜ್ಯಾಧ್ಯಕ್ಷ ಆರ್.ಆರ್. ರಮೇಶ್ ಹಾಗೂ ಹಿರಿಯ ಗುತ್ತಿಗೆದಾರರು, ಸೆಸ್ಕ್ ಅಧಿಕಾರಿಗಳನ್ನು ಅಭಿನಂದಿಸಲಾಯಿತು. ಸೆಸ್ಕ್ ಇಇ ರಘು, ಎಇಇ ಪುಟ್ಟಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಬಾಬು, ಕಾರ್ಯಾಧ್ಯಕ್ಷ ಶ್ಯಾಮ್‌ಸುಂದರ್, ತಾಲೂಕು ಅಧ್ಯಕ್ಷ ಎನ್.ಕೃಷ್ಣೇಗೌಡ, ಮಾಜಿ ಅಧ್ಯಕ್ಷ ಹೆಗ್ಗಡಹಳ್ಳಿ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಚಿದಂಬರ್, ನೂರಅಹಮದ್, ಮಲ್ಲಿಕಾರ್ಜುನ್, ಜಿಲ್ಲಾ ಉಪಾಧ್ಯಕ್ಷ ಪರಮೇಶ್, ಶಿವಲಿಂಗಯ್ಯ, ಪುಟ್ಟೇಗೌಡ, ಸೋಮಶೇಖರ್, ಕೆಂಪರಾಜು, ರಾಮಸ್ವಾಮಿ, ಮಂಜು, ಅಶೋಕ್, ಸಿದ್ದರಾಜು, ಶಿವಣ್ಣ, ಸ್ವಾಮಿ ಇದ್ದರು.

ಖಾಸಗಿ ಡೇರಿಗಳಿಗೆ ಹಾಲು ಪೂರೈಸದಂತೆ ಸಿಎಸ್‌ಪಿ ಮನವಿ



ಚಿನಕುರಳಿ, ಸೆ.20- ರೈತರು ಯಾವುದೇ ಕಾರಣಕ್ಕೂ ಖಾಸಗಿ ಡೇರಿಗಳಿಗೆ ಹಾಲು ಪೂರೈಕೆ ಮಾಡಬೇಡಿ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರೈತರು ಹಣದ ಆಸೆಗಾಗಿ ಖಾಸಗಿ ಡೇರಿಗಳಿಗೆ ಹಾಲು ಹಾಕಬೇಡಿ, ಖಾಸಗಿ ಡೇರಿಯವರು ಯಾವಾಗಬೇಕಾದರು ಡೇರಿ ಬಾಗಿಲು ಮುಚ್ಚಿಕೊಂಡು ಹೋಗುತ್ತಾರೆ. ಹಾಗಾಗಿ ರೈತರು ಕಟ್ಟಿ ಬೆಳೆಸಿದ ಡೇರಿಗಳಿಗೆ ಹಾಲು ಪೂರೈಕೆ ಮಾಡಿ ಎಂದರು.

ಚಿನಕುರಳಿ ಡೇರಿಯು ವಾರ್ಷಿಕ 2.50 ಕೋಟಿಗೂ ಅಧಿಕ ವೈಹಿವಾಟು ನಡೆಸಿದೆ. ಈ ವರ್ಷ ಸುಮಾರು 22ಲಕ್ಷ ಲಾಭ ಗಳಿಸಿದೆ. ಡೇರಿಯು ಉತ್ತಮವಾಗಿ ಕೆಲಸ ಮಾಡುತ್ತಿದೆ ಈಗಿನ ಆಡಳಿತ ಮಂಡಳಿಯ ಅಧ್ಯಕ್ಷರು, ನಿರ್ದೇಶಕರು ಮಾದರಿಯಾಗಿ ಕೆಲಸ ಮಾಡುತ್ತಿದ್ದು ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದರು.

ಡೇರಿಯ ಶೇರುದಾರು ಮರಣ ಹೊಂದಿದರೆ ಡೇರಿ ವತಿಯಿಂದ 3 ಸಾವಿರ ಆರ್ಥಿಕ ಸಹಾಯ ಮಾಡುತ್ತಿದ್ದರು. ಈ ವರ್ಷದಿಂದ ಮರಣ ನಿಧಿಯನ್ನು 5 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ಗ್ರಾಮದಲ್ಲಿ ಶೇರುದಾರರ ಕುಟುಂಬದಲ್ಲಿ ಶುಭ ಸಮಾರಂಭ ಮಾಡಿದರೆ ಅವರಿಗೆ 25 ಲೀಟರ್ ಹಾಲನ್ನು ಉಚಿತವಾಗಿ ನೀಡುತ್ತಿದ್ದರು. ಅದನ್ನು 40 ಲೀಟರ್‌ಗೆ ಏರಿಕೆ ಮಾಡಿದ್ದಾರೆ. ಅಲ್ಲದೆ ರಾಸುಗಳ ವಿಮೆ ಯೋಜನೆ ಸೇರಿದಂತೆ ರೈತರಿಗೆ ಅನುಕೂಲವಾಗಿವ ಸಾಕಷ್ಟು ಯೋಜನೆಗಳನ್ನು ಮಾಡುತಿದ್ದಾರೆ ಅದೇ ರೀತಿ ಮುಂದೆಯೂ ತಾಲೂಕಿಗೆ ಮಾದರಿಯಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ. ಅಶೋಕ್, ತಾಲೂಕು ಪಂಚಾಯಿತಿ ಸದಸ್ಯ ಸಿ.ಎಸ್.ಗೋಪಾಲಗೌಡ, ಡೇರಿ ಅಧ್ಯಕ್ಷ ಸಿ.ಎಸ್.ಲೋಕೇಶ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಮಂಜುಳಾ ಮಹದೇವು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗ್ಗಣ್ಣೇಗೌಡ, ಸಿದ್ದಲಿಂಗೇಗೌಡ, ಯ. ಸುಬ್ಬಣ್ಣ, ಜಿಲ್ಲಾ ಪತ್ರಕರ್ತರ ಸಂಘ ಮಾಜಿ ಕಾರ್ಯದರ್ಶಿ ಸಿ.ಎ.ಲೋಕೇಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ರಾಮಣ್ಣ, ಕಾಳೇಗೌಡ, ಕೋಡಾಲ ರಾಧಾಕೃಷ್ಣ, ಮಾರ್ಗ ವಿಸ್ತರಣಾಧಿಕಾರಿ ಜಗದೀಶ್, ಮಾಜಿ ಅಧ್ಯಕ್ಷ ಸಿ.ಎಂ.ರಮೇಶ್, ಆರ್.ವರದರಾಜು, ಸಿ.ಆರ್.ವನರಾಜು, ಸಿ.ಜಿ.ವಿಷಕಂಠೇಗೌಡ, ಮಾಜಿ ಉಪಾಧ್ಯಕ್ಷರಾದ ಪುಟ್ಟರಾಜು, ಗಾಯಿತ್ರಿ, ನಿರ್ದೇಶಕರಾದ ರಾಮಕೃಷ್ಣೇಗೌಡ, ನಾಗರಾಜು, ಸಿ.ಎಸ್.ರಮೇಶ್, ಬಿ.ಸವಿತಾ, ಗೀತಾ, ಕಾರ್ಯದರ್ಶಿ ಸಿ.ಬಿ. ಕಾಂತರಾಜು, ಗ್ರಾಪಂ ಸದಸ್ಯರಾದ ಕೃಷ್ಣೇಗೌಡ, ಪರಮೇಶ್, ಮಾಜಿ ಸದಸ್ಯ ಮೈಕ್ ಮಹದೇವು ಸೇರಿದಂತೆ ಇರರಿದ್ದರು.

ಹಾಲು ಉತ್ಪಾದಕರ ಸಂಘಕ್ಕೆ ಆಯ್ಕೆ



ಮಂಡ್ಯ, ಸೆ.20- ಶ್ರೀರಂಗಪಟ್ಟಣ ತಾಲೂಕಿನ ಹುಲ್ಕೆರೆ ಕೊಪ್ಪಲು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಚುಕ್ಕಾಣಿ ಹಿಡಿಯುವಲ್ಲಿ ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ಬೆಂಬಲಿಗರು ಯಶಸ್ವಿಯಾಗಿದ್ದಾರೆ.

ಅಧ್ಯಕ್ಷೆಯಾಗಿ ಶೃತಿ ಗಿರೀಶ್ ಹಾಗೂ ಉಪಾಧ್ಯಕ್ಷೆಯಾಗಿ ಸುನೀತಾ ವೆಂಕಟೇಶ್ ಆಯ್ಕೆಯಾದರು. ಅಧಿಕಾರ ಸ್ವೀಕಾರ ಬಳಿಕ ಸಚ್ಚಿದಾನಂದ ನಿವಾಸಕ್ಕೆ ಭೇಟಿ ನೀಡಿದ ನೂತನ ನಿರ್ದೇಶಕರನ್ನು ಒಳಗೊಂಡ ಅಧ್ಯಕ್ಷರ ನಿಯೋಗ ಇಂಡುವಾಳು ಸಚ್ಚಿದಾನಂದ ಅವರನ್ನು ಸನ್ಮಾನಿಸಿದರು. ಈ ವೇಳೆ ನೂತನ ಆಡಳಿತ ಮಂಡಳಿಯ ಸದಸ್ಯರನ್ನು, ಸಚ್ಚಿದಾನಂದ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಯೋಗಾನಂದ ಪಟೇಲ್, ಬೇವಿನಹಳ್ಳಿ ಮಹೇಶ್, ಹುಲ್ಕೆರೆ ಕೊಪ್ಪಲು ಹೆಚ್.ಶ್ರೀನಿವಾಸ್, ಹೆಚ್.ಎನ್. ರಾಮಕೃಷ್ಣ, ಪುಟ್ಟಸ್ವಾಮಿ, ತಿಮ್ಮೇಗೌಡ, ನಟರಾಜು, ಗಿರೀಶ್ ಮತ್ತಿತರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಕೊಡಗು ವರದಿಗಾರರು: ಪ್ರಸಾದ್ ಸಂಪಿಗೆಕಟ್ಟೆ, ಕನ್ನಡ ದೊಡ್ಡಯ್ಯ(ಪಡೆಬೀರ) ವೃತ್ತ, ಸೋಮವಾರಪೇಟೆ ರಸ್ತೆ ಜಂಕ್ಷನ್, ಮಡಿಕೇರಿ. ಮೊ. 9731469871 E-mail: madikeri@mysurumithra.com

ನಿರ್ವಹಣೆ ಇಲ್ಲದೆ ನಿರ್ಲಕ್ಷ್ಯಕ್ಕೆ ಒಳಗಾಗಿರುವ 'ಗದ್ದುಗೆ'

ಮಾಸಿಹೋದ ಸ್ಮಾರಕಗಳು, ಬೆಳೆದು ನಿಂತ ಗಿಡಗಂಟಿಗಳು, ಪಾಚಿ



ಮಡಿಕೇರಿ, ಸೆ.20– ಐತಿಹಾಸಿಕ ಹಿನ್ನೆಲೆಯ ಮಡಿಕೇರಿಯ ಹಾಲೇರಿ ರಾಜವಂಶದ ರಾಜರುಗಳ ಅತ್ಯಾಕರ್ಷಕವಾದ 'ಗದ್ದುಗೆ'ಗಳು ಸೂಕ್ತ ನಿರ್ವಹಣೆಯ ಕೊರತೆಯಿಂದ ಕಳೆಗುಂದಿವೆ.

ಗದ್ದುಗೆ ಸ್ಮಾರಕಗಳ ಬಣ್ಣ ಮಾಸಿ ಹೋಗಿದ್ದು, ಸ್ಮಾರಕಗಳ ಮೇಲೆ ಗಿಡಗಂಟಿಗಳು ಬೆಳೆದು ನಿಂತಿವೆ. ಗಿಡಗಳ ಬೇರುಗಳು ಸ್ಮಾರಕದ ಮೇಲೆ ಪರಿಣಾಮ ಬೀರುತ್ತಿದ್ದು, ಮಳೆ ಶೀತ ವಾತಾವರಣದಿಂದ ಸ್ಮಾರಕಗಳನ್ನು ಮೇಲೆ ಪಾಚಿ ಆವರಿಸಿದೆ. ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಆಚರಣೆಗೆ ದಿನಗಣನೆ ಆರಂಭವಾಗಿದ್ದು, ನಗರದ ಪ್ರಮುಖ ಸ್ಥಳಗಳನ್ನು ಬಣ್ಣ ಬಣ್ಣಗಳಿಂದ ಸಿಂಗರಿಸುವ ಕಾರ್ಯ ಭರದಿಂದ ನಡೆಸಲಾಗುತ್ತಿದೆ. ಆದರೆ ಕೊಡಗಿನ ಇತಿಹಾಸದ ಒಂದು ಭಾಗವಾಗಿರುವ ರಾಜರ ಗದ್ದುಗೆಗಳು ಪ್ರಾಚ್ಯವಸ್ತು ಇಲಾಖೆಯ ನಿರ್ಲಕ್ಷ್ಯಕ್ಕೆ ಪಾತ್ರವಾಗಿವೆ.

ಗದ್ದುಗೆ ಹಿನ್ನೆಲೆ: ಸುಮಾರು ಎರಡು ಶತಕಗಳ ಹಿಂದೆ ಅಂದರೆ 19ನೇ ಶತಮಾನದ ಆರಂಭದಲ್ಲಿ ವೀರರಾಜೇಂದ್ರ ಮತ್ತು ಆತನ ಪತ್ನಿಯ ಗದ್ದುಗೆಯನ್ನು ಆತನ ಸಹೋದರ ಲಿಂಗರಾಜೇಂದ್ರ ನಿರ್ಮಿಸಿದ್ದು, ಅದರ ಪಕ್ಕದಲ್ಲಿ ಲಿಂಗರಾಜೇಂದ್ರನ ಗದ್ದುಗೆ ಸುಮಾರು 1820ರಲ್ಲಿ ನಿರ್ಮಾಣವಾಗಿದೆ. ಇದರ ಪಕ್ಕದಲ್ಲೇ ರಾಜಗುರುಗಳಾಗಿದ್ದ ರುದ್ರಮುನಿ ಗುರುಗಳ ಸಮಾಧಿ ಇದ್ದು, ಇದನ್ನು 1834ರಲ್ಲಿ ಅಂದಿನ ಕೊಡಗಿನ ದಿವಾನರಾಗಿದ್ದ ಚೆಪ್ಪುಡಿರ ಪೊನ್ನಪ್ಪ ಅವರು ನಿರ್ಮಿಸಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ. ಈ ಎಲ್ಲಾ ರಚನೆಗಳು ಅತ್ಯಾಕರ್ಷಕವಾದ ಇಂಡೋ ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಾಣವಾಗಿರುವುದು ವಿಶೇಷವಾಗಿದೆ. ಈ ಸಮಾಧಿಗಳ ಸಮೀಪದಲ್ಲೆ ಟಿಪ್ಪುವಿನೊಂದಿಗೆ ಹೋರಾಡಿ ಮಡಿದ ರಾಜರ ಸೇನಾಧಿಕಾರಿಗಳಾಗಿದ್ದ ಬಿದ್ದಂಡ ಬೋಪು ಮತ್ತು ಅವರ ಮಗನಾದ ಬಿದ್ದಂಡ ಸೋಮಯ್ಯ ಅವರ ಸಮಾಧಿಗಳಿವೆ. ಇದರಲ್ಲಿ ಎರಡು ಬಸವನ ಕಲಾಕೃತಿಗಳು ಮತ್ತು ಅಂದಿನ ಕೆತ್ತನೆಯ ಬರಹಗಳನ್ನು ಸಹ ಕಾಣಬಹುದಾಗಿದೆ. ಈ ಸ್ಮಾರಕಗಳು ಕೂಡ ಕಾಡು ಪಾಲಾದ ಸ್ಥಿತಿಯಲ್ಲಿದೆ.

ಹಸಿರ ಉದ್ಯಾನ: ಕನಿಷ್ಠ ಕಾಳಜಿಯೂ ಇಲ್ಲದೆ ರಾಜರ ಗದ್ದುಗೆ ಮತ್ತು ಸುತ್ತಮುತ್ತಲ ಪ್ರದೇಶಗಳು ಹಾಳಾಗುತ್ತಿರುವುದನ್ನು ಗಮನಿಸಿ 2013ನೇ ಸಾಲಿನ ಮುಡಾ ಅಧ್ಯಕ್ಷ ಸಜಿಲ್ ಕೃಷ್ಣನ್ ಅವರ ಪ್ರಯತ್ನದಿಂದ

ಪ್ರಾಚ್ಯವಸ್ತು ಇಲಾಖೆಗೆ ಬೇಡವಾದ ಐತಿಹಾಸಿಕ ಕಟ್ಟಡ

ಗದ್ದುಗೆಗಳ ಆವರಣವನ್ನು ಭದ್ರಗೊಳಿಸಿ ಆಕರ್ಷಕವಾದ ಹೂದೋಟವನ್ನು ನಿರ್ಮಿಸಲಾಗಿದೆ. ಇಂದಿಗೂ ಈ ಉದ್ಯಾನವನ ಹಲವಾರು ಗಿಡಗಳಿಂದ, ಹಸಿರ ಹುಲ್ಲು ಹಾಸಿನಿಂದ ಸೊಗಸಾಗಿದೆಯಾದರೆ, ಸ್ಮಾರಕಗಳು ನಿರ್ವಹಣೆ ಇಲ್ಲದೆ ಮಂಕಾಗಿದೆ.

ಸ್ಮಾರಕಕ್ಕೆ ಇಲ್ಲ ಕಾವಲು: ಗದ್ದುಗೆಗಳ ವೀಕ್ಷಣೆಗೆ ಪ್ರತಿನಿತ್ಯ ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ. ಇವರಿಗೆ ಒಂದೆರಡು ಮಾಹಿತಿ ಫಲಕಗಳನ್ನು ಬಿಟ್ಟರೆ ಮತ್ತಾವುದೇ ವಿವರಗಳನ್ನು ನೀಡುವ ವ್ಯವಸ್ಥೆ ಇಲ್ಲ. ಪ್ರತಿನಿತ್ಯ ಇಲ್ಲಿನ ರಾಜರ ಗದ್ದುಗೆಗಳಿಗೆ ಬೆಳಗಿನ ಪೂಜೆ ನಡೆಯುತ್ತದೆ. ಇವೆಲ್ಲ ನಡೆಯುತ್ತಿದ್ದರೂ ರಾಜರ ಗದ್ದುಗೆಗಳನ್ನು ಸುರಕ್ಷಿತವಾಗಿ ಕಾಯುವ ಯಾವೊಬ್ಬ ಕಾವಲುಗಾರರ ಸುಳಿವು ಇಲ್ಲಿ ಕಂಡು ಬರುವುದಿಲ್ಲ. ಪತ್ರಿಕೆ ಇಂದು ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭ ವೀರರಾಜನ ಗದ್ದುಗೆಯ ಬಾಗಿಲು ತೆರೆದಿತ್ತು. ಕನಿಷ್ಠ ಚಪ್ಪಲಿ ತೆಗೆದು ಒಳ ಹೋಗಬೇಕು ಎನ್ನುವ ಕಾಳಜಿಯೂ ಇಲ್ಲದೆ ಪ್ರವಾಸಿಗಳು ಒಳತೆರಳಿ ಬರುತ್ತಿದ್ದುದು ಕಂಡುಬಂತು. ಮಾತ್ರವಲ್ಲದೇ ಹೊರ ಊರ ಜೋಡಿ ಒಂದು 'ಪ್ರಿ ವೆಡ್ಡಿಂಗ್ ಶೂಟಿಂಗ್' ನಡೆಸುತ್ತಿದ್ದುದು ಗದ್ದುಗೆ ಬಗ್ಗೆ ಇಲಾಖೆ ಅದೆಷ್ಟು ನಿರ್ಲಕ್ಷ್ಯ ವಹಿಸಿದೆ ಎಂಬುದಕ್ಕೆ ಸಾಕ್ಷಿ ಹೇಳುತ್ತಿತ್ತು. ಈ ಬಗ್ಗೆ ಜಿಲ್ಲಾಡಳಿತ, ಪ್ರಾಚ್ಯ ವಸ್ತು ಇಲಾಖೆ ಹೆಚ್ಚಿನ ಮುತುವರ್ಜಿ ವಹಿಸಬೇಕು ಮತ್ತು ಕೊಡಗಿನ ಇತಿಹಾಸದ ಭಾಗವಾಗಿರುವ ಗದ್ದುಗೆಗಳ ನಿರ್ವಹಣೆಯತ್ತ ಕಾಳಜಿ ವಹಿಸಬೇಕಿದೆ.





ಕಳಚಿದ ಇಲಾಖೆ ಕಾಳಜಿ

ಕೊಡಗಿನ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಈ ಪುರಾತನ ಸ್ಮಾರಕಗಳು ರಾಜ್ಯ ಪ್ರಾಚ್ಯ ವಸ್ತು ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ. ಹೀಗಿದ್ದೂ ಇನ್ನೂರು ವರ್ಷಗಳನ್ನು ಕಂಡಿರುವ ಈ ಸ್ಮಾರಕಗಳನ್ನು ಸ್ವಚ್ಛವಾಗಿರಿಸಿ, ಸುಣ್ಣ ಬಣ್ಣ ಬಳಿದು ಆಕರ್ಷಕವಾಗಿ ಕಾಣುವಂತೆ ನೋಡಿಕೊಳ್ಳುವ ಪ್ರಯತ್ನಗಳು ಇಲ್ಲಿ ಕಂಡು ಬರುತ್ತಿಲ್ಲ. ಸುಣ್ಣ ಬಣ್ಣವಿಲ್ಲದೆ, ಪಾಚಿ ಕಟ್ಟಿರುವ ಗೋಡೆಗಳು ಇಂದು ಆಕರ್ಷಕ ಸ್ಮಾರಕಗಳ ಕಳೆಯನ್ನು ನುಂಗಿ ಹಾಕಿದೆ. ರಾಜರ ಕಾಲದಲ್ಲೆ ನಿರ್ಮಾಣವಾಗಿರುವ ಇಂಡೋ ಸಾರ್ಸೆನಿಕ್ ಶೈಲಿಯ ಮುಜರಾಯಿ ಇಲಾಖೆಗೆ ಒಳಪಡುವ ನಗರದ ಶ್ರೀ ಓಂಕಾರೇಶ್ವರ ದೇವಸ್ಥಾನ ಅಚ್ಚುಕಟ್ಟಾಗಿ ನೋಡುಗರ ಗಮನ ಸೆಳೆಯುತ್ತಿದೆ. ಆದರೆ ಅದೇ ರೀತಿಯ ನಿರ್ವಹಣೆ ಗದ್ದುಗೆಯಲ್ಲಿ ಏಕೆ ಸಾಧ್ಯವಾಗುತ್ತಿಲ್ಲ ಎನ್ನುವ ಪ್ರಶ್ನೆ ಸ್ಮಾರಕಗಳಿಗೆ ಭೇಟಿ ನೀಡುವವರನ್ನು ಕಾಡುತ್ತಿದೆ.

ಸೆ.26, ಕರಗೋತ್ಸವದ ಮೂಲಕ ಮಡಿಕೇರಿ ಜನೋತ್ಸವಕ್ಕೆ ಚಾಲನೆ

ಪೂರ್ವಭಾವಿ ಸಭೆಯಲ್ಲಿ ಸಿದ್ಧತೆ ಬಗ್ಗೆ ಚರ್ಚೆ

ಮಡಿಕೇರಿ, ಸೆ20– ಐತಿಹಾಸಿಕ ಮಡಿಕೇರಿ ದಸರಾ ಜನೋತ್ಸವ ಸೆ26ರಂದು ಕರಗೋತ್ಸವದ ಮೂಲಕ ಆರಂಭಗೊಳ್ಳಲಿದ್ದು, ಸಂಪ್ರದಾಯದಂತೆ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀಕಂಚಿ ಕಾಮಾಕ್ಷಿಯಮ್ಮ ದೇವಾಲಯದಲ್ಲಿ ದೇವಾಲಯ ಸಮಿತಿಯ ಅಧ್ಯಕ್ಷ ಜಿ.ವಿ.ರವಿಕುಮಾರ್ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.



ಶ್ರೀಕುಂದುರು ಮೊಟ್ಟೆ ಚೌಟಿ ಮಾರಿಯಮ್ಮ ದೇವಾಲಯದ ಪ್ರಧಾನ ಅರ್ಚಕ ಎಂ.ಬಾಲಕೃಷ್ಣ ಶ್ರೀದಂಡಿನ ಮಾರಿಯಮ್ಮ ದೇವಾಲಯದ ಪಿ.ಎ.ಲೋಕನಾಥ್, ಜಿ.ಎ.ಉಮೇಶ್, ಶ್ರೀಕೋಟೆ ಮಾರಿಯಮ್ಮ ದೇವಾಲಯದ ಪಿ.ಬಿ.ಅನೀಶ್ ಕುಮಾರ್ ಹಾಗೂ ಶ್ರೀಕಂಚಿ ಕಾಮಾಕ್ಷಿಯಮ್ಮ ದೇವಾಲಯದ ಪಿ.ಎಂ.ನವೀನ್ ಕುಮಾರ್ ಮತ್ತಿತರ ಪ್ರಮುಖರು ಕರಗೋತ್ಸವ ಮತ್ತು ಕರಗಗಳ ನಗರ ಸಂಚಾರದ ಕುರಿತು ಚರ್ಚಿಸಿದರು.

ಸೆ.26ರಂದು ಮಧ್ಯಾಹ್ನ ನಾಲ್ಕೂ ಶಕ್ತಿ ದೇವತೆಗಳ ದೇವಾಲಯಗಳಿಂದ ಪಂಪಿನ ಕೆರೆಗೆ ತೆರಳುವುದು. ಸಂಪ್ರದಾಯದಂತೆ ಕರಗ ಕಟ್ಟಿ ವಿಶೇಷ ಪೂಜೆ ಸಲ್ಲಿಸಿ ಸಂಜೆ ನಗರ ಸಂಚಾರ ಆರಂಭಿಸುವುದು. ಮಳೆಯ ವಾತಾವರಣವಿರುವ ಕಾರಣ ಸಂಜೆ 5 ಗಂಟೆಗೆ ನಗರ ಸಂಚಾರ ಆರಂಭಿಸಲು ನಿರ್ಣಯಿಸಲಾಯಿತು. ಕರಗ ದೇವಾಲಯಗಳಿಗೆ ತಲಾ ಎರಡು ಲಕ್ಷ ರೂ. ಅನುದಾನ ನೀಡುತ್ತಿದ್ದು, ಈ ಮೊತ್ತವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿ ಬೇಡಿಕೆ ಮಂಡಿಸಲು ಸಭೆ ನಿರ್ಧಾರ ಕೈಗೊಂಡಿತು. ಈ ಸಂದರ್ಭ ಶ್ರೀಕಂಚಿ ಕಾಮಾಕ್ಷಿಯಮ್ಮ ದೇವಾಲಯ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಾಲ್ದಾರೆ ಬಳಿ ಹುಲಿ ಸೆರೆ

ಜಾನುವಾರುಗಳನ್ನು ಬಲಿತೆಗೆದುಕೊಂಡು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದ್ದ ಹುಲಿ

ಸಿದ್ದಾಪುರ, ಸೆ.20– ಕಳೆದ ಕೆಲವು ತಿಂಗಳುಗಳಿಂದ ಸಾರ್ವಜನಿಕರಿಗೆ ಉಪಟಳ ನೀಡಿ, ಜಾನುವಾರುಗಳನ್ನೂ ಬಲಿ ತೆಗೆದುಕೊಳ್ಳುವ ಮೂಲಕ ಭಯದ ವಾತಾವರಣ ಮೂಡಿಸಿ ಎರಡು ಬಾರಿ ಅರಣ್ಯ ಸಿಬ್ಬಂದಿಗೆ ಚಳ್ಳೇಹಣ್ಣು ತಿನ್ನಿಸಿ ಪರಾರಿಯಾಗಿದ್ದ ಹುಲಿಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಕೊನೆಗೂ ಯಶಸ್ವಿಯಾಗಿದೆ.

ಮಾಲ್ದಾರೆ ಸಮೀಪದ ಕಾಫಿ ತೋಟವೊಂದರಲ್ಲಿ ಪತ್ತೆಯಾದ ಹುಲಿ ಹೆಜ್ಜೆ ಗುರುತು ಜಾಡು ಹಿಡಿದು ತೆರಳಿದ ಅರಣ್ಯ ಇಲಾಖೆ ಸಿಬ್ಬಂದಿಗಳು ಅಧಿಕಾರಿಗಳ ಮಾರ್ಗದರ್ಶನದಲ್ಲಿ ಸುಮಾರು ಎರಡು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಅರವಳಿಕೆ ಮದ್ದು ನೀಡಿ, ಅದು ಪ್ರಜ್ಞೆ ತಪ್ಪಿದ ಮೇಲೆ ಸೆರೆ ಹಿಡಿಯಲಾಯಿತು.

ಸುಮಾರು 13 ವರ್ಷ ಪ್ರಾಯದ ಈ ಗಂಡು ಹುಲಿಗೆ ಪ್ರಾಣಿಗಳ ಬೇಟೆ ಸಂದರ್ಭ ಕಾಲಿಗೆ ಸಣ್ಣ ಗಾಯವಾಗಿರುವುದು ಕಂಡು



ಬಂದಿದೆ. ಗಾಯಗೊಂಡಿರುವ ಹುಲಿಯನ್ನು ಮೈಸೂರು ಮೃಗಾಲಯಕ್ಕೆ ಕಳುಹಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮಾಲ್ದಾರೆ ವ್ಯಾಪ್ತಿಯಲ್ಲಿ ಕಳೆದ ಕೆಲವು ದಿನಗಳಲ್ಲಿ ಆರು ಜಾನುವಾರುಗಳನ್ನು ಬಲಿ ತೆಗೆದುಕೊಂಡು ರಾಜಾರೋಷವಾಗಿ ಸಾರ್ವಜನಿಕರಿಗೆ ಕಾಣಿಸಿಕೊಳ್ಳುತ್ತಿತ್ತು. ಹುಲಿ ಸೆರೆಗೆ ದುಬಾರೆ ಸಾಕಾನೆ ಶಿಬಿರದ ಇಂದಿರಾ, ಅಂಜನ್, ಲಕ್ಷ್ಮಣ, ಈಶ್ವರ ಸಾಕಾನೆಗಳ ಮೂಲಕ ಸಿಬ್ಬಂದಿಗಳು ಹಗಲು ರಾತ್ರಿ ಕಾರ್ಯಾಚರಣೆ ನಡೆಸಿದ್ದರು. ಹುಲಿ ಎರಡು ಬಾರಿ ತಪ್ಪಿಸಿಕೊಂಡು ಅರಣ್ಯದತ್ತ ನುಸುಳಿತ್ತು.

ಇಂದು ಮಾಲ್ದಾರೆ ಸಮೀಪದ ಹೊಸಳ್ಳಿ ಗ್ರಾಮದ ತೋಟವೊಂದರಲ್ಲಿ ಕಾರ್ಮಿಕರಿಗೆ ಹುಲಿ ಕಾಣಿಸಿಗೊಂಡಿತು. ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆ ಕಾರ್ಯಾಚರಣೆ ನಡೆಸಿ ಶಾರ್ಪ್ ಶೂಟರ್ ರಂಜನ್ ಬಂದೂಕಿನ ಮೂಲಕ ಅರವಳಿಕೆ ನೀಡಿ ಕೊನೆಗೂ ಸೆರೆ ಹಿಡಿದರು.

ನಿತ್ರಾಣಗೊಂಡಿದ್ದ ಹುಲಿಗೆ ಡಾ ಚೆಟ್ಟಿಯಪ್ಪ, ರಮೇಶ್ ಆರೈಕೆ ಮಾಡಿದ್ದಾರೆ. ಕಾರ್ಯಾಚರಣೆ ವೇಳೆ ಸಂದರ್ಭದಲ್ಲಿ ಡಿಎಫ್ಒ ಶಿವರಾಮ್ ಬಾಬು, ಪೂವಯ್ಯ, ಎಸಿಎಫ್ ನೆಹರೂ, ಆರ್ ಎಫ್ ಒ ಅಶೋಕ್ ಸೇರಿದಂತೆ ಆನೆ ಮಾವುತರು, ಕಾವಾಡಿಗರು, ಅರಣ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

ಮೊಗೇರಾ ಜನಾಂಗದವರಿಗೆ ತಿಂಗಳೊಳಗೆ ನಿವೇಶನ ಕೊಡದಿದ್ದರೆ ಅಹೋರಾತ್ರಿ ಧರಣಿ

ಸೋಮವಾರಪೇಟೆ, ಸೆ.20– ಮೊಗೇರಾ ಜನಾಂಗದ ನಿವೇಶನ ರಹಿತರಿಗೆ ಒಂದು ತಿಂಗಳೊಳಗಾಗಿ ಸೂಕ್ತ ವ್ಯವಸ್ಥೆ ಕಲ್ಪಿಸದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಕೊಡಗು ಜಿಲ್ಲಾ ಮೊಗೇರ ಸೇವಾ ಸಮಾಜ ಎಚ್ಚರಿಕೆ ನೀಡಿದೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಸಮಾಜದ ಜಿಲ್ಲಾಧ್ಯಕ್ಷ ಗೌತಮ್ ಶಿವಪ್ಪ ಮಾತನಾಡಿ, ಮೊಗೇರ ಜನಾಂಗವು ಪರಿಶಿಷ್ಟ ಜಾತಿಗೆ ಸೇರಿದ್ದು, ಜಿಲ್ಲೆಯಲ್ಲಿ ಅಂದಾಜು 30 ರಿಂದ 40 ಸಾವಿರ ಜನಸಂಖ್ಯೆಯನ್ನು ಹೊಂದಿದೆ. ಇಂದಿಗೂ ಸಮಾಜದ ಶೇಖಡ 80 ರಷ್ಟು ಜನರು ಕಾಫಿ ತೋಟದ ಲೈನ್‌ಮನೆಯಲ್ಲಿ ಮತ್ತು ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಅನೇಕರು ಸುಮಾರು 50 ರಿಂದ 60 ವರ್ಷದಿಂದ ನಿವೇಶನ ವಂಚಿತರಾಗಿದ್ದಾರೆ. ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಪೈಸಾರಿ ಜಾಗವಿದ್ದು ಅದನ್ನು ಸರಿಯಾದ ಅರ್ಹ ಫಲಾನುಭವಿಗಳಿಗೆ ನಿವೇಶನವನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿದರು. ಸೋಮವಾರಪೇಟೆ ತಾಲೂಕಿಗೆ ಸಂಬಂಧಿಸಿದಂತೆ ಈಗಾಗಲೇ ತಹಶೀಲ್ದಾರ್‌ರವರಿಗೆ ಮನವಿ ಪತ್ರವನ್ನು ನೀಡಲಾಗಿದೆ ಎಂದರು.

ಗೋಷ್ಠಿಯಲ್ಲಿ ಸೋಮವಾರಪೇಟೆ ತಾಲೂಕು ಘಟಕದ ಅಧ್ಯಕ್ಷ ಕೆ.ಎ ದಿನೇಶ್. ಉಪಾಧ್ಯಕ್ಷ ಕೆ.ಬಿ. ನಂದ, ಪ್ರಧಾನ ಕಾರ್ಯದರ್ಶಿ ಬಿ. ಶಿವಪ್ಪ,

ಸೆ.26ರಿಂದ ಅ.9ರವರೆಗೆ ಶಾಲೆಗಳಿಗೆ ದಸರಾ ರಜೆ

ಮಡಿಕೇರಿ, ಸೆ.20– ಕೊಡಗು ಜಿಲ್ಲೆಯಲ್ಲಿ ದಸರಾ ಆಚರಣೆ ಹಿನ್ನೆಲೆ ಸೆ.26ರಿಂದ ಅಕ್ಟೋಬರ್ 9ರವರೆಗೆ ಶಾಲೆಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ನಾಗೇಶ್ ಸೂಚನೆಯಂತೆ 15 ದಿನಗಳ ಕಾಲ ಶಾಲೆಗಳಿಗೆ ರಜೆ ನೀಡಿ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಆದೇಶ ಹೊರಡಿಸಿದ್ದಾರೆ.

ಕಾಂಗ್ರೆಸ್‌ನತ್ತ ಮುಖ ಮಾಡಿದ ಸಂಕೇತ್ ಪೂವಯ್ಯ

ವಿರಾಜಪೇಟೆಯ ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲ ನೀಡಲು ನಿರ್ಧಾರ

ವಿರಾಜಪೇಟೆ, ಸೆ.20– ಜಾತ್ಯಾತೀತ ಜನತಾದಳದ ಮುಖಂಡರು, ವನ್ಯ ಜೀವಿ–ಮಾನವ ಸಂಘರ್ಷ ಹೋರಾಟಗಾರ ಮತ್ತು ಕೊಡಗು ಬಚಾವೋ ವೇದಿಕೆಯ ಅಧ್ಯಕ್ಷರೂ ಆದ ಮೇರಿಯಂಡ ಸಂಕೇತ್ ಪೂವಯ್ಯ ಅವರು ಕಾಂಗ್ರೆಸ್ ಪಕ್ಷದತ್ತ ಒಲವು ತೋರಿಸಿದ್ದಾರೆ.

ಜಾತ್ಯಾತೀತ ಜನತಾದಳ (ಜೆಡಿಎಸ್)ದ ಕಾರ್ಯಾಧ್ಯಕ್ಷರಾಗಿದ್ದ ಸಂಕೇತ್ ಪೂವಯ್ಯನವರು ಪ್ರಸ್ತುತ ರಾಜಕೀಯದಿಂದ ದೂರ ಉಳಿದಿದ್ದು, ವನ್ಯಜೀವಿ–ಮಾನವ ಸಂಘರ್ಷ ಮತ್ತು ಕೊಡಗು ಬಚಾವೋ ವೇದಿಕೆಗಳಲ್ಲಿ ಗುರುತಿಸಿಕೊಂಡು ಸಮಾಜಸೇವೆಯಲ್ಲಿ ತೊಡಗಿದ್ದಾರೆ. ಇದೀಗ ಅವರು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲಿದ್ದಾರೆ. ಈಗಾಗಲೇ ಸಂಕೇತ್‌ಪೂವಯ್ಯನವರು ವಿಧಾನ ಪರಿಷತ್ತು ಮತ್ತು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಜಿತರಾಗಿದ್ದರೂ ತಮ್ಮದೇ ಓಟುಗಳನ್ನು ಹೊಂದಿದ್ದು, ಅದನ್ನು ಕಾಂಗ್ರೆಸ್ ಪಕ್ಷಕ್ಕೆ ವರ್ಗಾಯಿಸಲು ನಿರ್ಧರಿಸಿದ್ದು, ಶೀಘ್ರದಲ್ಲೇ ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳುವರು ಎಂದು ಹೇಳಲಾಗುತ್ತಿದೆ.



ಈ ಸಂಬಂಧ ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಂಕೇತ್ ಪೂವಯ್ಯ, ಬಿಜೆಪಿ ಶಾಸಕರು ಜಿಲ್ಲೆಯ ಸಮಸ್ಯೆಗಳಿಗೆ ಸ್ಪಂದಿಸದೆ ನಿರ್ಲಕ್ಷ್ಯ ತಾಳಿದ್ದಾರೆ. ಇದರಿಂದ ಜನರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಅವರ ಬಗ್ಗೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದೆ. ಆದರೆ ಅವರಿಂದಲೂ ಜಿಲ್ಲೆಗೆ ಅನ್ಯಾಯವಾಗಿದೆ ಎಂದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ವಕೀಲ ಎ.ಎಸ್. ಪೊನ್ನಣ್ಣ ಕಣಕ್ಕಿಳಿಯಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿತ್ತು. ಅವರು ಕಣಕ್ಕಿಳಿದರೆ ತಾವು ಬಹಿರಂಗವಾಗಿಯೇ ಅವರನ್ನು ಬೆಂಬಲಿಸುವುದಾಗಿ ತಿಳಿಸಿದ ಅವರು, ಪೊನ್ನಣ್ಣ ಅವರಿಗೆ ಕೊಡಗು ಜಿಲ್ಲೆಯ ಬಗ್ಗೆ ಕಾಳಜಿ ಇರುವುದರಿಂದ ತಾವು ಈ ನಿರ್ಧಾರ ತೆಗೆದುಕೊಂಡಿರುವುದಾಗಿ ಹೇಳಿದರು. ಕಾಂಗ್ರೆಸ್ ಪಕ್ಷದ ಮುಖಂಡರುಗಳು ಈ ಸಂಬಂಧ ತಮ್ಮೊಂದಿಗೆ ಮಾತುಕತೆ ನಡೆಸಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷ ಸೇರುವ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಇದೇ ವೇಳೆ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ವಿರಾಜಪೇಟೆ ಪೊಲೀಸರು ಒಡಿಸ್ಸಾ ಕೂರಪೂತ್ ಜಿಲ್ಲೆ ಲಕ್ಷ್ಮೀಪುರ ಗ್ರಾಮದ ವಾಸಿ ಸೂರ್ಯಕಾಂತಿ ಮಹಂತಿ (ಒಳಚಿತ್ರ)ಯನ್ನು ಬಂಧಿಸಿ ಆತನಿಂದ 6.5 ಕೆಜಿ ಗಾಂಜಾ ಮತ್ತು ಗಾಂಜಾ ಸಾಗಿಸುತ್ತಿದ್ದ ಹ್ಯೂಂಡಾಯ್ ಕಾರನ್ನು ವಶಪಡಿಸಿಕೊಂಡಿದ್ದಾರೆ. ಸರ್ಕಲ್ ಇನ್ಸ್‌ಪೆಕ್ಟರ್ ಶಿವರುದ್ರ, ಪಿಎಸ್ಐ ಸಿ.ವಿ. ಶ್ರೀಧರ್, ಎಂ.ಸಿ. ಮುತ್ತಣ್ಣ, ಮಂಜುನಾಥ್, ಸಿಬ್ಬಂದಿಗಳಾದ ಗಿರೀಶ್, ಮುಸ್ತಫಾ, ಧರ್ಮ, ಸತೀಶ್, ಶೆಟ್ಟಪ್ಪ ಅವರುಗಳು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕೂಡಿಗೆಯಲ್ಲಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ

ಹಾಕಿ ಪಂದ್ಯದಲ್ಲಿ ಮೈಸೂರು ತಂಡ ಪ್ರಥಮ

ಕುಶಾಲನಗರ, ಸೆ.20– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಕೊಡಗು,ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಕೂಡಿಗೆ ಕ್ರೀಡಾ ಶಾಲಾ ಮೈದಾನದಲ್ಲಿ ಏರ್ಪಡಿಸಿದ್ದ ವಿಭಾಗ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಕ್ರೀಡಾ ಶಾಲಾ ಮೈದಾನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿದ ಕೊಡಗು ಹಾಕಿ ಅಸೋಸಿಯೇಷನ್ ಉಪಾಧ್ಯಕ್ಷ ಪಳಂಗಡ ಲವಕುಮಾರ್ ಮಾತನಾಡಿ, ಕ್ರೀಡೆಯಿಂದ ಉತ್ತಮ ಆರೋಗ್ಯ ಸುಧಾರಣೆ ಜೊತೆಗೆ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಲು ಸಹಕಾರಿಯಾಗುತ್ತದೆ. ಕ್ರೀಡಾಪಟುಗಳು ಕ್ರೀಡಾ ಮನೋಭಾವದಿಂದ ಆಟವಾಡುವ ಮೂಲಕ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಬೇಕು ಎಂದರು.

ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಸ್ವಾಮಿ ಮಾತನಾಡಿ, ಕ್ರೀಡೆ ಎಂಬುದು ಯುವ ಜನರಲ್ಲಿ ಸ್ನೇಹ, ಸಾಮರಸ್ಯ ಮೂಡಿಸುವ ಪ್ರಮುಖ ಸಾಧನವಾಗಿದೆ. ಕ್ರೀಡಾ ಕೂಟದಲ್ಲಿ ಭಾಗವಹಿಸುವಿಕೆ ಅತೀ ಮುಖ್ಯ ಎಂದರು. ಜಿಲ್ಲೆಗೆ ಈ ಬಾರಿ ದಸರಾ ವಿಭಾಗದ ಮಟ್ಟದ ಕ್ರೀಡಾಕೂಟ ಆಯೋಜನೆಗೆ ಅವಕಾಶ ನೀಡಲಾಗಿದೆ.

ಮೈಸೂರು ವಿಭಾಗ ಮಟ್ಟದ ನಾಲ್ಕು ಪುರುಷರ ಮತ್ತು ಮಹಿಳಾ ತಂಡಗಳು ಭಾಗವಹಿಸಿವೆ. ಕೂಡುಮಂಗಳೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ಇಂದಿರಾ ರಮೇಶ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಕ್ರೀಡಾ ವಸತಿ ಶಾಲೆ ಆಡಳಿತ ಅಧಿಕಾರಿ ಜಯರಾಮ್, ಶಾಲಾ ಮುಖ್ಯಶಿಕ್ಷಕ ದೇವಕುಮಾರ್, ಕೊಡಗು ಹಾಕಿ ಅಸೋಸಿಯೇಷನ್ ಕಾರ್ಯದರ್ಶಿ ಚಂಗಪ್ಪ, ಕೂಡಿಗೆ ಪದವಿ ಪೂರ್ವ ಕಾಲೇಜು ಉಪಾಧ್ಯಕ್ಷ ಕೆ ಕೆ ನಾಗರಾಜಶೆಟ್ಟಿ, ನಿವೃತ್ತ ವಾಲಿಬಾಲ್ ತರಬೇತುದಾರ ಸುರೇಶ್, ಸೇರಿದಂತೆ ಅಥ್ಲೆಟಿಕ್ ತರಬೇತಿದಾರ ಅಂತೋಣಿ ಡಿಸೋಜ, ಹಾಕಿ ತರಬೇತಿದಾರ ವೆಂಕಟೇಶ್, ದಿನಮಣಿ, ಮಂಜುನಾಥ, ಸುರೇಶ್, ಮಹಾಬಲ ಸೇರಿದಂತೆ ಹಾಕಿ ಮತ್ತು ಜಿಮ್ನಾಸ್ಟಿಕ್ಸ್‌ನ ತರಬೇತಿದಾರರು ಸೇರಿದಂತೆ ವಿವಿಧ ಜಿಲ್ಲೆಯ ಕ್ರೀಡಾಪಟುಗಳು ಭಾಗವಹಿಸಿದ್ದರು. ಕ್ರೀಡಾ ಶಾಲೆಯ ಒಳ ಕ್ರೀಡಾಂಗಣ ಜಿಮ್ನಾಸ್ಟಿಕ್ಸ್ ರಾಜ್ಯ ಮಟ್ಟದ ಆಯ್ಕೆ ಪ್ರಕ್ರಿಯೆ ನಡೆಯಿತು.



ಹಾಕಿ ಪಂದ್ಯಾವಳಿ: ವಿಭಾಗ ಮಟ್ಟದ ಮಹಿಳೆಯರ ಹಾಕಿ ಪಂದ್ಯದಲ್ಲಿ ಮೈಸೂರು ತಂಡವು ಪ್ರಥಮ, ಕೊಡಗು ತಂಡವು ದ್ವಿತೀಯ ಸ್ಥಾನ ಪಡೆಯಿತು. ಪುರುಷರ ವಿಭಾಗದಲ್ಲಿ ಮೈಸೂರು ತಂಡ ಪ್ರಥಮ, ಹಾಸನ ತಂಡ ದ್ವಿತೀಯ ಸ್ಥಾನ ಪಡೆಯಿತು. ವಿಜೇತ ತಂಡಗಳಿಗೆ ಪ್ರಶಸ್ತಿ ಪತ್ರ ಗಳನ್ನು ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿ. ಎಸ್. ಗುರುಸ್ವಾಮಿ ವಿತರಣೆ ಮಾಡಿದರು.

ಇಂದು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಸಭೆ

ಮಡಿಕೇರಿ, ಸೆ.20– ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿ.ಸೋಮಶೇಖರ ಅವರು ಸೆ.21 ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗಡಿ ಪ್ರಾಧಿಕಾರದ ಅನುದಾನದಿಂದ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳ ಮತ್ತು ಹಣ ಬಳಕೆ ಪ್ರಮಾಣ ಪತ್ರಗಳ ಪರಿಶೀಲನೆ ಹಾಗೂ ಗಡಿ ಭಾಗದಲ್ಲಿನ ಅಭಿವೃದ್ಧಿ ಯೋಜನೆಗಳ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ ಅವರು ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಸೆ.20– ಮಡಿಕೇರಿ 66/11 ಕೆವಿ ವಿದ್ಯುತ್ ಉಪ–ಕೇಂದ್ರದಿಂದ ಹೊರಹೋಗುವ ಭಾಗಮಂಡಲ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸೆ.21 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ತಾಳತ್ತಮನೆ, ಅಪ್ಪಂಗಳ, ಚೇರಂಬಾಣೆ, ಚೆಟ್ಟಿಮಾಣಿ, ಭಾಗಮಂಡಲ, ತಲಕಾವೇರಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಡಿಕೇರಿ, ಸೆ.20– ಪ್ರಸಕ್ತ(2022–23) ಸಾಲಿಗೆ ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ, ಜೈನ್, ಬೌದ್ಧ, ಪಾರ್ಸಿ ಮತ್ತು ಸಿಖ್ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ಅನಾಥಾಲಯ, ವೃದ್ಧಾಶ್ರಮ, ಎಚ್‌ಐವಿ ಏಡ್ಸ್ ಸೋಂಕಿತ ರೋಗಿಗಳು ಮತ್ತು ಮಾನಸಿಕ ಮತ್ತು ದೈಹಿಕ ವಿಕಲಚೇತನರ ಆಶ್ರಯ ಧಾಮಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅರ್ಹ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ದಾಖಲಾತಿಗಳೊಂದಿಗೆ 3 ಪ್ರತಿಗಳನ್ನು ಜಿಲ್ಲಾ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಮಡಿಕೇರಿ ಪೊಲೀಸ್ ಠಾಣೆ ಹತ್ತಿರ ಮಡಿಕೇರಿ–571201 ದೂ.ಸಂಖ್ಯೆ–0820–225528 ನ್ನು ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮಮತಾ ಅವರು ತಿಳಿಸಿದ್ದಾರೆ.


ಕುಟ್ಟ, ಕಾನೂರು ಶಾಲೆಗಳಿಗೆ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಭೇಟಿ

ಮಡಿಕೇರಿ, ಸೆ.20– ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ ಅವರು ಕುಟ್ಟ ಮತ್ತು ಕಾನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಪ್ರಥಮ ಬಾರಿಗೆ ಮಂಗಳವಾರ ಭೇಟಿ ನೀಡಿ ವೀಕ್ಷಿಸಿದರು.

ಕುಟ್ಟ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದ ಅಧ್ಯಕ್ಷರು ಯಾವ ತರಗತಿಯಲ್ಲಿ ಓದುತ್ತಿದ್ದಿರಾ, ಪೋಷಕರ ವೃತ್ತಿ ಮತ್ತಿತರ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು.

ಪ್ರತಿಯೊಬ್ಬರೂ ಚೆನ್ನಾಗಿ ಓದಬೇಕು. ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆದು ಚೆನ್ನಾಗಿ ಅಧ್ಯಯನ ಮಾಡಬೇಕು. ವಿದ್ಯಾರ್ಥಿಗಳಲ್ಲಿ ಸಮಯ ಪಾಲನೆ ಅತೀ ಅವಶ್ಯಕ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಭವಿಷ್ಯದಲ್ಲಿ ಯಾವ ಹುದ್ದೆ ಆಯ್ಕೆ ಮಾಡಿಕೊಳ್ಳಬೇಕು ಎಂದು ಬಯಸಿದ್ದೀರಾ ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳು ಶಿಕ್ಷಕರು, ವೈದ್ಯರು, ಗಗನಸಖಿ, ಪಶುವೈದ್ಯ, ಎಂಜಿನಿಯರ್, ಸೇರಿದಂತೆ ವಿವಿಧ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಲವಲವಿಕೆಯಿಂದ ಉತ್ತರಿಸಿದರು. ಶಾಲೆಯಲ್ಲಿ ಪರಿಸರ, ಪ್ರಯೋಗಾಲಯ, ಕ್ರೀಡಾ ಕೊಠಡಿ ವೀಕ್ಷಿಸಿ ಅಧ್ಯಕ್ಷರು ಮೆಚ್ಚುಗೆ ವ್ಯಕ್ತಪಡಿಸಿದರು.



ಗಡಿಭಾಗದ ಕುಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉತ್ತಮವಾಗಿದ್ದು, ಮತ್ತಷ್ಟು ಸಂಪನ್ಮೂಲ ಒದಗಿಸಲು ಅಗತ್ಯ ನೆರವು ನೀಡಲಾಗುವುದು ಎಂದು ಡಾ.ಸಿ.ಸೋಮಶೇಖರ ಅವರು ತಿಳಿಸಿದರು.

ಕಾನೂರು ಮತ್ತು ಕುಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸ್ಮಾರ್ಟ್ ತರಗತಿಗೆ ಅಗತ್ಯವಿರುವ ಅನುದಾನ ಒದಗಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಗಡಿ ಪ್ರದೇಶದ ಶಾಲೆ ಅಭಿವೃದ್ಧಿಗೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ಎಲ್ಲಾ ರೀತಿಯ ಆರ್ಥಿಕ ನೆರವು ನೀಡಲಾಗುವುದು ಎಂದರು.

ಹಾಗೆಯೇ ಕುಟ್ಟ ಸರ್ಕಾರಿ ಪ್ರೌಢಶಾಲೆಗೆ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮನವಿಯಂತೆ ಅಗತ್ಯ ನೆರವು ನೀಡಲಾಗುವುದು ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹೇಳಿದರು. ಗಡಿ ಪ್ರದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಎಲ್ಲರೂ ಕೈಜೋಡಿಸುವಂತೆ ಅಧ್ಯಕ್ಷರು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬೀಳಗಿ ಅವರು ಕುಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಪೌಢಶಾಲೆ ಸ್ಥಿತಿಗತಿ ಬಗ್ಗೆ ಸವಿವರವಾಗಿ ಮಾಹಿತಿ ನೀಡಿದರು. ಈಗಾಗಲೇ ಆಗಿರುವ ಕೆಲಸಗಳು, ಇನ್ನಷ್ಟು ಶಾಲೆ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿ ದಂತೆ ಅಧ್ಯಕ್ಷರ ಗಮನಕ್ಕೆ ತಂದರು. ಕರ್ನಾಟಕ ಮತ್ತು ಕೇರಳ ರಾಜ್ಯದ ಗಡಿಭಾಗದ ತೋಳ್ಪಟ್ಟಿ ಗಡಿಪ್ರದೇಶಕ್ಕೆ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಸಿ.ಸೋಮಶೇಖರ ಅವರು ಭೇಟಿ ನೀಡಿ ವೀಕ್ಷಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ವೇದಮೂರ್ತಿ, ಕುಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶಶಿಧರ, ಎಸ್‌ಡಿಎಂಸಿ ಅಧ್ಯಕ್ಷರಾದ ಸುಬ್ರಮಣಿ, ಕನ್ನಡ ಸಾಹಿತ್ಯ ಪರಿಷತ್ತು ಕುಶಾಲನಗರ ತಾಲೂಕು ಘಟಕದ ಅಧ್ಯಕ್ಷರಾದ ಕೆ.ಎಸ್.ಮೂರ್ತಿ, ನಿವೃತ್ತ ಪ್ರಾಂಶುಪಾಲರಾದ ಜೆ.ಸೋಮಣ್ಣ, ಉಪತಹಶೀಲ್ದಾರ್ ಜನಾರ್ಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಚಿನ್ನಸ್ವಾಮಿ, ಮಣಜೂರು ಮಂಜುನಾಥ್, ಕಂದಾಯ, ಪೊಲೀಸ್ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಸಂತೇಮರಹಳ್ಳಿಯಲ್ಲಿ ವಿಭಾಗ ಮಟ್ಟದ

ಆರ್ಚರಿ, ಫೆನ್ಸಿಂಗ್ ದಸರಾ ಕ್ರೀಡಾಕೂಟ



ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಚಾಲನೆ



ಸಂತೇಮರಹಳ್ಳಿಯಲ್ಲಿ ಮೈಸೂರು ವಿಭಾಗಮಟ್ಟದ ಎರಡು ದಿನಗಳ ಆರ್ಚರಿ ಮತ್ತು ಫೆನ್ಸಿಂಗ್ ದಸರಾ ಕ್ರೀಡಾಕೂಟಕ್ಕೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಚಾಲನೆ ನೀಡಿದರು.

ಚಾಮರಾಜನಗರ, ಸೆ.20–ತಾಲೂಕಿನ ಸಂತೇಮರಹಳ್ಳಿ ಕ್ರೀಡಾಶಾಲೆಯ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಆರಂಭವಾದ ಮೈಸೂರು ವಿಭಾಗ ಮಟ್ಟದ ಎರಡು ದಿನಗಳ ಆರ್ಚರಿ ಮತ್ತು ಫೆನ್ಸಿಂಗ್ ದಸರಾ ಕ್ರೀಡಾಕೂಟಕ್ಕೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕ್ರೀಡಾಕೂಟದಲ್ಲಿ ಭಾಗವಹಿಸಲು ವಿವಿಧ ಜಿಲ್ಲೆಗಳಿಂದ ಆಗಮಿಸಿರುವ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡುವುದರೊಂದಿಗೆ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಜೇತರಾಗಿ ಜಿಲ್ಲೆಗೆ ಕೀರ್ತಿ ತರಬೇಕು ಎಂದ ಸಲಹೆ ನೀಡಿದರು.

ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಮಾತನಾಡಿ, ಪ್ರತಿಯೊಬ್ಬರಿಗೂ ಕ್ರೀಡೆ ಅತ್ಯವಶ್ಯಕವಾಗಿದ್ದು, ಬಿಲ್ವಿದ್ಯೆ ಹಾಗೂ ಕತ್ತಿವರಸೆ ವ್ಯಕ್ತಿಯ ಮಾನಸಿಕ, ದೈಹಿಕ ಆರೋಗ್ಯ ಬೆಳವಣಿಗೆಗೆ ಸಹಕಾರಿ. ಬಿಲ್ವಿದ್ಯೆಯಲ್ಲಿ ಪ್ರಾವೀಣ್ಯತೆ ಹೊಂದಲು ಏಕಲವ್ಯನಂತೆ ಕಠಿಣ ಪರಿಶ್ರಮ ಪಡಬೇಕು ಎಂದರು.

ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಪುರಾಣ ಕಾಲದಲ್ಲಿ ಕತ್ತಿವರಸೆ ಪ್ರಾಮುಖ್ಯತೆ ಪಡೆದಿತ್ತು. ಸರ್ಕಾರ ಇದನ್ನು ಉತ್ತೇಜಿಸುವ ಸಲುವಾಗಿ ಬಿಲ್ವಿದ್ಯೆ, ಕತ್ತಿವರಸೆ ಕ್ರೀಡೆಗಳಿಗೆ ಆದ್ಯತೆ ನೀಡಿದೆ. ಕ್ರೀಡೆಯಲ್ಲಿ ಸೋಲು, ಗೆಲುವಿಗಿಂತ ಸ್ಪರ್ಧೆ ಮುಖ್ಯ. ಈ ಕ್ರೀಡೆಯಿಂದ ಏಕಾಗ್ರತೆ ಹೆಚ್ಚಲಿದೆ ಎಂದರು.

> ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡಾ ಶಾಲೆಯು ರಾಜ್ಯದ ಏಕೈಕ ಕ್ರೀಡಾಶಾಲೆಯಾಗಿ ಚಾಮರಾಜನಗರ ಜಿಲ್ಲೆಯಲ್ಲಿರುವುದು ಹೆಮ್ಮೆಯ ಸಂಗತಿ. ಮೊದಲ ಬಾರಿಗೆ ಮೈಸೂರು ವಿಭಾಗಮಟ್ಟದ ದಸರಾ ಕ್ರೀಡಾಕೂಟದಲ್ಲಿ ಆರ್ಚರಿ ಮತ್ತು ಫೆನ್ಸಿಂಗ್ ಕ್ರೀಡೆ ಅಳವಡಿಸಿರುವುದು ಉತ್ತಮ ಬೆಳವಣಿಗೆ.
>
> –ಚಾರುಲತಾ ಸೋಮಲ್, ಜಿಲ್ಲಾಧಿಕಾರಿ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂತೇಮರಹಳ್ಳಿ ಗ್ರಾಪಂ ಅಧ್ಯಕ್ಷ ಶಂಕರಪ್ಪ ಮಾತನಾಡಿ, ವಿದ್ಯಾರ್ಥಿಗಳಿಗೆ ಕತ್ತಿವರಸೆ ಹಾಗೂ ಬಿಲ್ವಿದ್ಯೆ ಕ್ರೀಡೆಗಳು ಆರಂಭದಲ್ಲಿ ಕಷ್ಟವೆನಿಸಬಹುದು. ಆದರೂ ಪರಿಶ್ರಮ, ಏಕಾಗ್ರತೆಯಿಂದ ಕಲಿಯಬೇಕು. ವಿದ್ಯಾರ್ಥಿಗಳು ಶಿಕ್ಷಣಕ್ಕೆ ನೀಡುವ ಮಹತ್ವವನ್ನು ಕ್ರೀಡೆಗೂ ನೀಡಬೇಕು ಎಂದು ಕಿವಿಮಾತು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಆರ್.ಅನಿತಾ, ಏಕಲವ್ಯ ಪ್ರಶಸ್ತಿ ಪುರಸ್ಕೃತ ಲಕ್ಷ್ಮೀಕಾಂತ್, ಅಂತಾರಾಷ್ಟ್ರೀಯ ಕ್ರೀಡಾಪಟು ಕುಬೇರ್, ಫುಟ್‌ಬಾಲ್ ತರಬೇತುದಾರ ಗೋಪಾಲ್ ಕಾರ್ಯಕ್ರಮದಲ್ಲಿದ್ದರು. ಇದೇ ವೇಳೆ ಜಿಲ್ಲಾಧಿಕಾರಿ ಹಾಗೂ ಸಿಇಓ ಅವರಿಗೆ ಕತ್ತಿವರಸೆಯ ಕ್ರೀಡಾಸಾಧನ ಕೊಡುಗೆಯಾಗಿ ನೀಡಲಾಯಿತು. ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಬಿಲ್ವಿದ್ದೆ ಕತ್ತಿವರಸೆಯ ಪ್ರಾತ್ಯಕ್ಷಿಕೆ ವೀಕ್ಷಿಸಿದರು.

ಕುಂದು-ಕೊರತೆಗಳ ಸಭೆಯಲ್ಲಿ ವೇತನಕ್ಕಾಗಿ ಪೌರಕಾರ್ಮಿಕರ ಅಳಲು



ಚಾಮರಾಜನಗರ, ಸೆ.20–ಗ್ರಾಮಗಳಲ್ಲಿ ಪೌರಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿದ್ದು, ಯಾವುದೇ ಸೇವಾ ಭದ್ರತೆ ಇಲ್ಲದೆ ಗ್ರಾಮಗಳ ಸ್ವಚ್ಛಗೊಳಿಸುವ ನಮಗೆ ಹಲವು ತಿಂಗಳಿಂದ ವೇತನ ನೀಡಿಲ್ಲ. ಹೀಗಾದರೆ ನಾವು ಜೀವನ ಸಾಗಿಸುವುದಾದರೂ ಹೇಗೆ? ಎಂದು ತಾಲೂಕಿನ ಪೌರಕಾರ್ಮಿಕರು ಅಳಲು ತೋಡಿಕೊಂಡರು.

ನಗರದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಪೌರಕಾರ್ಮಿಕರ ಕುಂದು-ಕೊರತೆಗಳ ಸಭೆಯಲ್ಲಿ ಪೌರಕಾರ್ಮಿಕರು ಸಮಸ್ಯೆ ಸುರಿಮಳೆಗೈದರು.

ಕಳೆದ 17 ತಿಂಗಳಿಂದ ವೇತನ ನೀಡಿಲ್ಲ ಎಂದು ತಾಲೂಕಿನ ಆಲೂರು ಪೌರ ಕಾರ್ಮಿಕ ಪಟನಿಸ್ವಾಮಿ, ನನಗೆ 12 ತಿಂಗಳಿಂದ ವೇತನ ನೀಡಿಲ್ಲ ಎಂದು ಕೂಡ್ಲೂರು ಪೌರಕಾರ್ಮಿಕ ಮಣಿ, 15 ತಿಂಗಳಿಂದ ಸಂಬಳ ನೀಡಿಲ್ಲ ಎಂದು ಮಂಗಲ ಪೌರಕಾರ್ಮಿಕ ಮಹದೇವು ಸೇರಿದಂತೆ ಇನ್ನೂ ಅನೇಕ ಪೌರ ಕಾರ್ಮಿಕರು ಅಸಮಾಧಾನ ವ್ಯಕ್ತಪಡಿಸಿದರು. ಕೂಡಲೇ ಸಂಬಳ ನೀಡಬೇಕು ಸಭೆಯಲ್ಲಿ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಡಿ.ಆರ್.ರಾಜು ಮಾತನಾಡಿ, ದುಡಿಯುವ ಪೌರ ಕಾರ್ಮಿಕರಿಗೆ ಹಲವು ತಿಂಗಳಿಂದ ವೇತನ ಬಾಕಿ ಉಳಿಸಿಕೊಂಡರೇ ಜೀವನ ಸಾಗಿಸುವುದು ಹೇಗೆ. ಪೌರಕಾರ್ಮಿಕರ ವೇತನ ಬಾಕಿ ಉಳಿಸಿಕೊಳ್ಳುವುದು ಅಪರಾಧ. ಪೌರಕಾರ್ಮಿಕರಿಗೆ ಸಕಾಲಕ್ಕೆ ವೇತನ ಸೇರಿದಂತೆ ಇನ್ನಿತರೆ ಸೌವಲತ್ತು ಕೊಡಿಸಬೇಕು ಎಂದರು.

ಸಭೆ ಅಧ್ಯಕ್ಷತೆ ವಹಿಸಿದ್ದ ಕಾರ್ಯ ನಿರ್ವಾಹಕಾಧಿಕಾರಿ ಪೂರ್ಣಿಮಾ ಮಾತನಾಡಿ, ಗ್ರಾಮಗಳ ಸ್ವಚ್ಛಗೊಳಿಸುವ ಪೌರ ಕಾರ್ಮಿಕರಿಗೆ ಸರ್ಕಾರದಿಂದ ದೊರೆಯುವ ವೇತನ, ಸಮವಸ್ತ್ರ, ವಿಮೆ, ಐಡಿ ಕಾರ್ಡ್, ಸೇವಾ ಭದ್ರತೆ, ಆಗಾಗ ಆರೋಗ್ಯ ತಪಾಸಣೆ ಸೇರಿದಂತೆ ಎಲ್ಲಾ ಸವಲತ್ತು 15 ದಿನಗಳೊಳಗೆ ಅವರಿಗೆ ತಲುಪಿಸಿ, ವರದಿ ನೀಡಬೇಕು ಎಂದು ಅಧಿಕಾರಿ ಗಳಿಗೆ ತಾಕೀತು ಮಾಡಿದರು.

ಜಿಲ್ಲಾಧ್ಯಕ್ಷ ಹೊನ್ನೂರು ಆರ್ಮುಗಂ ಮಾತನಾಡಿದರು. ಸಭೆಯಲ್ಲಿ ನರೇಗಾ ಸಹಾಯಕ ನಿರ್ದೇಶಕ ಪ್ರಕಾಶ್ ಕುಮಾರ್, ತಾಲೂಕು ಯೋಜನಾಧಿಕಾರಿ ನಂದೀಶ್, ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೈ.ಕೆ.ಮೋಳೆ ಪಳನಿ, ತಾಲೂಕು ಅಧ್ಯಕ್ಷ ಮೇಗಲಹುಂಡಿ ಮಹ ದೇವಯ್ಯ, ನಗರ ಅಧ್ಯಕ್ಷ ಆರ್.ನಾಗರಾಜು, ಪ್ರಧಾನ ಕಾರ್ಯದರ್ಶಿ ರಾಮಚಂದ್ರ, ಕಾರ್ಯದರ್ಶಿ ಸಿ.ಕೆ. ಶಿವರಾಜೇಂದ್ರ, ಸತೀಶ್, ಮಾದಾಪುರ ರಂಗಸ್ವಾಮಿ, ತಾಲೂಕಿನ ಪೌರಕಾರ್ಮಿಕರಿದ್ದರು.

ಕೆಸ್ತೂರಿನಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ




ಯಳಂದೂರು, ಸೆ.20–ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಹೊರತರಲು ಪ್ರತಿಭಾ ಕಾರಂಜಿ ಕಾರ್ಯಕ್ರಮ ಉತ್ತಮ ವೇದಿಕೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಕಾಂತರಾಜು ಅಭಿಪ್ರಾಯಪಟ್ಟರು.

ತಾಲೂಕಿನ ಕೆಸ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ-2ರಲ್ಲಿ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಿಗೆ ಜ್ಞಾನದ ಜೊತೆಗೆ ಕಲೆಯು ಕೂಡ ಪ್ರಮುಖವಾದದ್ದು. ಪ್ರತಿ ವಿದ್ಯಾರ್ಥಿಗಳಲ್ಲೂ ವಿವಿಧ ಕಲೆ ಅಗಡಿರುತ್ತದೆ. ಅದನ್ನು ಶಿಕ್ಷಕರು ಹೊರತರಬೇಕು. ಇಲ್ಲವೆಂದರೆ ಕಲೆ ನಶಿಸಿ ಹೋಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ಅಕ್ಷರ ದಾಸೋಹದ ಅಧಿಕಾರಿ ಗುರುಲಿಂಗಯ್ಯ, ಗ್ರಾಪಂ ಪಿಡಿಓ ಲಲಿತಾ, ಎಸ್‌ಡಿಎಂಸಿ ಅಧ್ಯಕ್ಷ ಮೂರ್ತಿ, ಮುಖ್ಯಶಿಕ್ಷಕರಾದ ಸಿದ್ದರಾಜು, ನಟರಾಜು, ಬಿಆರ್‌ಸಿ ಕೇಂದ್ರದ ಅಧಿಕಾರಿ ನಾಗೇಂದ್ರ, ದೈಹಿಕ ಪರಿವೀಕ್ಷಕ ಲಿಂಗರಾಜು, ನೌಕರ ಸಂಘದ ಅಧ್ಯಕ್ಷ ವೈ.ಎಂ.ಮಂಜುನಾಥ್, ಶಿಕ್ಷಕರ ಸಂಘದ ಅಧ್ಯಕ್ಷ ಸೋಮಣ್ಣ, ಬಿಆರ್‌ಸಿ ಕೇಂದ್ರದ ಸತೀಶ್, ಮಹದೇವ್, ಶಾಲಿನಿ, ನಂಜುಂಡಸ್ವಾಮಿ ಹಾಗೂ ವಿವಿಧ ಶಾಲೆಯ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳಿದ್ದರು.

ಜಿಲ್ಲಾ ಆರೋಗ್ಯ ರಕ್ಷಾ ಸಮಿತಿಗೆ ಸುಂದರ್‌ರಾಜ್ ರಾಜೀನಾಮೆ

ಚಾಮರಾಜನಗರ, ಸೆ.20– ಜಿಲ್ಲಾ ಆರೋಗ್ಯ ರಕ್ಷಾ ಸಮಿತಿ ನಾಮ ನಿರ್ದೇಶನ ಸ್ಥಾನಕ್ಕೆ ಸುಂದರ್‌ರಾಜ್ ರಾಜೀನಾಮೆ ನೀಡಿದ್ದಾರೆ.



ನಗರದ ಜಿಲ್ಲಾಡಳಿತ ಭವನದಲ್ಲಿ ಟಪಾಲು ಮೂಲಕ ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಆರೋಗ್ಯ ರಕ್ಷ ಸಮಿತಿ ನಾಮ ನಿರ್ದೇಶನ ಸ್ಥಾನಕ್ಕೆ ಸುಂದರ್ ರಾಜ್ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದರು. ಜಿಲ್ಲಾ ಆರೋಗ್ಯ ಅಧಿಕಾರಿಗಳು ಸದಸ್ಯರನ್ನು ಕಡೆಗಣಿಸಿದ್ದಾರೆ. ಸರ್ಕಾರದಿಂದ ನಾಮನಿರ್ದೇಶನ ಮೇ 20 ರಂದು ಘೋಷಣೆಯಾಗಿದ್ದು, ಒಂದು ವರ್ಷ ಮೂರು, ನಾಲ್ಕು ತಿಂಗಳಾದರೂ ಯಾವುದೇ ಸಭೆಗೆ ನಮ್ಮನ್ನು ಕರೆಯದೇ ಅವಮಾನಿಸಿದ್ದಾರೆ. ಅವರ ಕಚೇರಿಗೆ ಹೋಗಿ ಅವರನ್ನು ಸಂಪರ್ಕಿಸಿದರೆ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಯಾವುದೇ ಸಭೆ, ಸಮಾರಂಭಗಳಿಗೆ ಕರೆಯುತ್ತಿಲ್ಲ. ಮಾಹಿತಿಯನ್ನೂ ಕೂಡ ಕೊಡುತ್ತಿಲ್ಲ. ಇದರಿಂದ ಸಾರ್ವಜನಿಕರ ಕೆಲಸ ತೊಂದರೆಯಾಗುತ್ತಿದೆ ಹಾಗೂ ನಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಇದನ್ನು ಪ್ರಶ್ನಿಸಲು ನಮಗೆ ಆಗುತ್ತಿಲ್ಲ. ಇದರಿಂದ ಬೇಸತ್ತು ನಾನು ಆರೋಗ್ಯ ರಕ್ಷಾ ಸಮಿತಿಗೆ ರಾಜೀನಾಮೆ ನೀಡಿರುವುದಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ನಗರದ ನಿರಾಶ್ರಿತ ವಸತಿರಹಿತರ ಆಶ್ರಯ ತಂಗುದಾಣಕ್ಕೆ ಡಿಸಿ ಭೇಟಿ



ಚಾಮರಾಜನಗರ ವಸತಿ ರಹಿತ ಆಶ್ರಯ ತಂಗುದಾಣಕ್ಕೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ನಗರಸಭೆ ಅಧಿಕಾರಿಗಳ ಜೊತೆ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆ ಪರಿಶೀಲಿಸಿದರು.

ಚಾಮರಾಜನಗರ ಸೆ.20–ನಗರಸಭೆ ಡೇ-ನಲ್ಮ್ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ನಗರದ ವಸತಿರಹಿತ ನಿರಾಶ್ರಿತರ ತಂಗುದಾಣಕ್ಕೆ ಚಾಮರಾಜನಗರ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೋಮವಾರ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆ ಪರಿಶೀಲಿಸಿದರು.

ನಗರಸಭೆ ಅಧಿಕಾರಿಗಳ ಜೊತೆ ಭೇಟಿ ನೀಡಿದ ಜಿಲ್ಲಾಧಿಕಾರಿ, ಆಶ್ರಯ ತಂಗುದಾಣದಲ್ಲಿರುವ ನಿರಾಶ್ರಿತರ ಆಹಾರ ಒದಗಿಸಲು ದಿನದ ವೆಚ್ಚ, ತಿಂಗಳ ವೆಚ್ಚ, ಎಷ್ಟು ಮಂದಿ ಇದರ ಫಲಾನುಭವಿಗಳಿದ್ದಾರೆ ಎಂಬ ಮಾಹಿತಿ ಪಡೆದರು. ಅಡುಗೆ ಮನೆಗೂ ಭೇಟಿ ನೀಡಿ, ಸ್ವಚ್ಛತೆ, ವೃದ್ಧರು ಮಲಗುವ ಕೋಣೆ, ಅವರ ಹಾಜರಾತಿ, ಕುಡಿಯುವ ನೀರು ಸಮರ್ಪಕವಾಗಿ ಸಿಗುತ್ತಿದೆಯೆ?, ಕಾಲಕಾಲಕ್ಕೆ ವೃದ್ಧರ ಆರೋಗ್ಯ ತಪಾಸಣೆ ನಡೆಯುತ್ತಿದೆಯೇ ಎಂದು ಸಮಗ್ರ ಮಾಹಿತಿ ಪಡೆದರು.

ಇದೇ ವೇಳೆ ನಗರಸಭೆ ಪ್ರಭಾರ ಆಯುಕ್ತ ನಟರಾಜು, ಯೋಜನಾಧಿಕಾರಿ ವೆಂಕಟನಾಯಕ್, ಡೇ-ನಲ್ಮ್ ಯೋಜನೆ ಜಿಲ್ಲಾ ವ್ಯವಸ್ಥಾಪಕ ಅಮ್ಜತ್ ಪಾಷಾ, ಪುಟ್ಟಸ್ವಾಮಿ, ಅಕ್ಬರ್ ಪಾಷಾ, ಸಮುದಾಯ ಸಂಘಟನಾಧಿಕಾರಿ ಯಳಂದೂರು ಪರಶಿವಮೂರ್ತಿ, ದಾಮೋದರ್ ಸಿಂಗ್, ನವೀನ್ ಸೇರಿದಂತೆ ಇತರರಿದ್ದರು.

ಪ್ರತಿಫಲಾಪೇಕ್ಷೆ ಇಲ್ಲದೆ ಕೊಳ್ಳೇಗಾಲಕ್ಕೆ ಸಾಕಷ್ಟು ಕೊಡುಗೆ ನೀಡಿದ್ದ ಹೆಗ್ಗಳಿಕೆ ಮುಡಿಗುಂಡ ಗುರುಕಾರ್ ಕುಟುಂಬದ್ದು

ಕೊಳ್ಳೇಗಾಲ, ಸೆ.20–ಕೊಳ್ಳೇಗಾಲ ನಗರಕ್ಕೆ ಸರ್ಕಾರಿ ಕಾಲೇಜು, ಆಸ್ಪತ್ರೆ, ಆಟದ ಮೈದಾನ ನಿರ್ಮಾಣಕ್ಕಾಗಿ ನೂರಾರು ಎಕರೆ ಜಾಗವನ್ನು ಪ್ರತಿಫಲಾಪೇಕ್ಷೆ ಇಲ್ಲದೆ ದಾನ ನೀಡಿದ ಹೆಗ್ಗಳಿಕೆ ಮುಡಿಗುಂಡದ ಗುರುಕಾರ್ ಸುಬ್ಬಪ್ಪ ವೀರಪ್ಪ ಕುಟುಂಬದ್ದು ಎಂದು ಚಿಂತಕ ಇಂದ್ವಾಡಿ ಶಿವಣ್ಣ ಸ್ಮರಿಸಿದರು.



ಕೊಳ್ಳೇಗಾಲದ ಎಜಿಎಸ್‌ವಿ ಕಾಲೇಜಿನಲ್ಲಿ ಆಯೋಜಿಸಿದ್ದ ದತ್ತಿ ಕಾರ್ಯಕ್ರಮವನ್ನು ಚಿಂತಕ ಇಂದ್ವಾಡಿ ಶಿವಣ್ಣ ಉದ್ಘಾಟಿಸಿದರು.

ಪಟ್ಟಣದ ಎಂಜಿಎಸ್‌ವಿ ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಮುಡಿಗುಂಡದ ಗುರುಕಾರ್ ಸುಬ್ಬಪ್ಪ ವೀರಪ್ಪ ಹೆಸರಿನಲ್ಲಿ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಾನಿಗಳಾದ ಗುರುಕಾರ್ ವೀರಪ್ಪ ಸುಬ್ಬಪ್ಪ ಮಾದಪ್ಪ ಅವರ ಕಾರ್ಯ ನಿಜಕ್ಕೂ ಪ್ರಶಂಸನೀಯ. ಅವರು ಕೊಳ್ಳೇಗಾಲದಲ್ಲಿ ಸರ್ಕಾರಿ ಆಸ್ಪತ್ರೆ ಎಂಜಿಎಸ್‌ವಿ ಜೂನಿಯರ್ ಕಾಲೇಜು, ವಸಂತಕುಮಾರಿ ಕಾಲೇಜು, ಪೀಸ್ ಪಾರ್ಕ್‌ಗಳಿಗಾಗಿ ನೂರಾರು ಎಕರೆ ಜಾಗವನ್ನು ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೀಡಿದ್ದಾರೆ. ಅವರನ್ನು ಸ್ಮರಿಸುವ ಇಂದಿನ ಕಾರ್ಯಕ್ರಮ ಇತರ ಉಳ್ಳವರು, ದಾನಿಗಳಿಗೂ ಪ್ರೇರಣೆಯಾಗಲಿ ಎಂದರು.

ಕಾರ್ಯಕ್ರಮದಲ್ಲಿ ಸಂಗೀತ ಶಿಕ್ಷಕ ಮಹಾಂತಯ್ಯ ವಾಚಿಸಿದ ಶರಣರ ವಚನ ಸ್ವರಗಾನ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೊಂಗರಹಳ್ಳಿ ನಾಗರಾಜು, ಕಾರ್ಯದರ್ಶಿ ನಾಗರಾಜು, ಪ್ರಾಂಶುಪಾಲ ಪ್ರಮೋದ್, ಅಖಿಲ ಭಾರತ ಲಿಂಗಾಯತ ವೀರಶೈವ ಮಹಾಸಭಾ ಅಧ್ಯಕ್ಷ ಮಹದೇವ ಪ್ರಸಾದ್, ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಶಿವಕುಮಾರ್ ಉಪನ್ಯಾಸಕ ಮಾಣಿಕ್ಯ, ಮಹದೇವ ಸೇರಿದಂತೆ ಇನ್ನಿತರರು ಇದೇ ವೇಳೆ ಉಪಸ್ಥಿತರಿದ್ದರು.

ಭಾರತ್ ಜೋಡೊ ಯಾತ್ರೆ ಯಶಸ್ವಿಗೆ ಸಹಕರಿಸಿ

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮನವಿ



ಚಾಮರಾಜನಗರ , ಸೆ.20–ಭಾರತ್ ಜೋಡೊ ಯಾತ್ರೆ ಯಶಸ್ವಿಗಾಗಿ ಜಿಲ್ಲೆಯ 4 ತಾಲೂಕು ಕೇಂದ್ರಗಳಿಂದ 40 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ಮೂಲಕ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಬೇಕು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮನವಿ ಮಾಡಿದರು.

ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆ ಹಿನ್ನೆಲೆಯಲ್ಲಿ ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ನಡೆದ ಕಾರ್ಯಕರ್ತರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಭಾರತ್ ಜೋಡೋ ಯಾತ್ರೆ ಯಶಸ್ವಿಯಾಗುವ ನಿಟ್ಟಿನಲ್ಲಿ ಜಿಲ್ಲೆಯ ಗ್ರಾಪಂ ಹಾಗೂ ಬ್ಲಾಕ್ ಮಟ್ಟದಲ್ಲಿ ಸಭೆಗಳನ್ನು ಆಯೋಜಿಸಿ ಯಾತ್ರೆ ಬಗ್ಗೆ ಮಾಹಿತಿ ನೀಡಲಾಗುವುದು. ಜಿಲ್ಲೆಯ ನಾಲ್ಕು ತಾಲೂಕು ಕೇಂದ್ರಗಳಿಂದ 40 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನಾಗರಿಕರು, ಪಕ್ಷದ ಕಾರ್ಯಕರ್ತರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿಲ್ಲಾ ವೀಕ್ಷಕ ಅಕ್ಬರ್ ಅಲೀಮ್ ಮಾತನಾಡಿ, ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣಕ್ಕೆ ಸೆ.30ರಂದು ಎಐಸಿಸಿ ಮುಖಂಡ ರಾಹುಲ್ ಗಾಂಧಿ ನೇತೃತ್ವದ ತಂಡ ಆಗಮಿಸಲಿದ್ದು, ರಾಜ್ಯದ ಪಾದಯಾತ್ರೆಗೆ ಚಾಲನೆ ಸಿಗಲಿದೆ. ಭಾರತ್ ಜೋಡೋ ಯಾತ್ರೆ ಯಶಸ್ಸಿಗೆ ಜಿಲ್ಲೆ ಜನತೆ ಕೈಜೋಡಿಸಬೇಕು ಎಂದರು.

ಕೆಪಿಸಿಸಿ ಕಾರ್ಯದರ್ಶಿ ಮಂಜುಳಾ ಮಾನಸ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಓಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ. ಮಹದೇವಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಸದಾಶಿವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಆರ್.ಮಹದೇವ, ಚಿಕ್ಕಮಹಾದೇವ, ಮಾಧ್ಯಮ ಕಾರ್ಯದರ್ಶಿ ವಕೀಲ ಅರುಣ್‌ಕುಮಾರ್ ನಗರಸಭಾ ಸದಸ್ಯರಾದ ಕೆಪಿಸಿಸಿ ಸದಸ್ಯ ಸೈಯದ ರಫಿ, ಚಿನ್ನಮ್ಮ, ಭಾಗ್ಯಮ್ಮ, ನೀಲಮ್ಮ, ಜಿಪಂ ಮಾಜಿ ಸದಸ್ಯ ರಮೇಶ್ ಎಪಿಎಂಸಿ ಸದಸ್ಯ ಸೋಮೇಶ್, ರಾಮಸಮುದ್ರ ನಾಗರಾಜು, ಕಾಗಲವಾಡಿ ಶಿವಸ್ವಾಮಿ, ನಾಗಯ್ಯ, ಬಿಸಲವಾಡಿ ಉಮೇಶ್, ಕಮಲೇಶ್, ಹೆಬ್ಬಸೂರು ಸೋಮಣ್ಣ, ಹೆಚ್.ಎಂ.ಮಹದೇವಶೆಟ್ಟಿ ಸೇರಿದಂತೆ ಪಕ್ಷ ಮುಖಂಡರು, ಕಾರ್ಯಕರ್ತರಿದ್ದರು

ಪ್ರವಾಸಿಗ ಅನಿಲ್‌ಕುಮಾರ್ ಸಾವಿಗೆ ಹೃದಯಾಘಾತ ಕಾರಣ

ಚಾಮರಾಜನಗರ, ಸೆ.20–ಚಿತ್ರದುರ್ಗ ಜಿಲ್ಲೆಯ ಅನಿಲ್ ಕುಮಾರ್ ಅವರ ಸಾವಿಗೆ ಹೃದಯಾಘಾತ ಕಾರಣವೇ ಹೊರತು ತುರ್ತು ವಾಹನದ ಆಕ್ಸಿಜನ್ ಕೊರತೆ ಅಲ್ಲ ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಸೆ.19ರಂದು ಗೋಪಾಲ ಸ್ವಾಮಿಬೆಟ್ಟಕ್ಕೆ ಪ್ರವಾಸಕ್ಕೆ ಕುಟುಂಬ ಸಮೇತರಾಗಿ ಪ್ರವಾಸಕ್ಕೆ ಬಂದಿದ್ದ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕು ಬಸವನಪುರ ಗ್ರಾಮದ ಅನಿಲ್ ಕುಮಾರ್ ಅವರನ್ನು ಉಸಿರಾಟದ ತೊಂದರೆ, ಅತಿಯಾದ ಬೆವರುವಿಕೆ, ಕೈ ಕಾಲುಗಳು ತಣ್ಣಾಗದ ಸ್ಥಿತಿಯಲ್ಲಿ ತುರ್ತು ಚಿಕಿತ್ಸೆಗಾಗಿ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಕೂಡಲೇ ಅವರನ್ನು ತಪಾಸಣೆ ಮಾಡಿ ದಾಖಲಿಸಿಕೊಳ್ಳಲಾಗಿತ್ತು. ಇಸಿಜಿಯಲ್ಲಿ ಹೃದಯಾಘಾತವಾಗಿರುವುದು ದೃಢಪಟ್ಟಿದೆ. ನಂತರ ತುರ್ತು ಔಷಧ, ಆಕ್ಸಿಜನ್ ನೀಡಲಾಗಿದೆ. ತಕ್ಷಣವೇ ಅವರೊಂದಿಗೆ ಬಂದಿದ್ದವರಿಗೆ ರೋಗಿಯ ಗಂಭೀರತೆ ವಿವರಿಸಿ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ರೋಗಿಯ ಸಂಬಂಧಿಕರ ಒಪ್ಪಿಗೆ ಪಡೆದು ಆಸ್ಪತ್ರೆ ಆಂಬುಲೆನ್ಸ್‌ನಲ್ಲಿ ಆಕ್ಸಿಜನ್ ಹಾಗೂ ಸಿಬ್ಬಂದಿಯೊಂದಿಗೆ ಕಳುಹಿಸಲಾಯಿತು. ವಾಹನ ಹೊರಟ ಕೆಲ ಹೊತ್ತಿನಲ್ಲಿಯೇ ಸರಿಸುಮಾರು 4 ಗಂಟೆಯ ವೇಳೆಗೆ ತುರ್ತು ವಾಹನದಲ್ಲಿ ಸಿಬ್ಬಂದಿ ರೋಗಿಯ ನಾಡಿ ಮಿಡಿತ ಪರೀಕ್ಷಿಸಿ, ಸಹಜ ಉಸಿರಾಟವಿಲ್ಲದ್ದರಿಂದ ವಾಪಸ್ ಕರೆದುಕೊಂಡು ಬಂದಿದ್ದಾರೆ. ತಕ್ಷಣ ಆಸ್ಪತ್ರೆಯಲ್ಲಿ ರೋಗಿಯನ್ನು ತುರ್ತು ನಿಗಾ ಘಟಕದಲ್ಲಿರಿಸಿ ಪ್ರಾಣ ಉಳಿಸಲು ವೈದ್ಯರು ಸರ್ವ ಪ್ರಯತ್ನ ನಡೆಸಿದ್ದರೂ ಪ್ರಯೋಜನವಾಗಿಲ್ಲ. ಸಂಜೆ 4.30 ಗಂಟೆಗೆ ಅನಿಲ್ ಅಸುನೀಗಿದ್ದು, ರೋಗಿಯ ಸಾವಿಗೆ ಕಾರಣ ಹೃದಯಾಘಾತವೆಂದು ತಿಳಿಸಿ ಅವರ ಸಂಬಂಧಿಕರಿಗೆ ಮೃತದೇಹ ಹಸ್ತಾಂತರಿಸಲಾಗಿದೆ.

ತುರ್ತು ವಾಹನದಲ್ಲಿ ಆಕ್ಸಿಜನ್ ಸಮೇತವಾಗಿ ಚಿಕಿತ್ಸೆ ನೀಡಲಾಗಿದೆ. ರೋಗಿಯ ಸಾವಿಗೆ ಕಾರಣ ಹೃದಯಾಘಾತವೇ ಹೊರತು ತುರ್ತು ವಾಹನದ ಆಕ್ಸಿಜನ್ ಕೊರತೆಯಿಂದಲ್ಲ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಚಾಮರಾಜನಗರ, ಸೆ.20– ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2022-23ನೇ ಸಾಲಿಗೆ ಜಿಲ್ಲೆಯ ಅಂಗವಿಕಲರಿಗೆ ಯಂತ್ರಚಾಲಿತ ತ್ರಿಚಕ್ರ ವಾಹನ, ವಿವಾಹ ಪ್ರೋತ್ಸಾಹಧನ, ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್, ಟಾಕಿಂಗ್ ಲ್ಯಾಪ್‌ಟಾಪ್, ಶ್ರವಣದೋಷವುಳ್ಳವರಿಗೆ ಹೊಲಿಗೆ ಯಂತ್ರ ಹಾಗೂ ಶುಲ್ಕ ಮರುಪಾವತಿ ಸೌಲಭ್ಯಗಳನ್ನು ನೀಡುವ ಸಲುವಾಗಿ ನಿಗದಿತ ದಾಖಲಾತಿ ಮತ್ತು ಷರತ್ತಿಗೊಳಪಟ್ಟು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಿದೆ ಇಲಾಖೆಯಿಂದ ಅರ್ಜಿ ಪಡೆದು ಅ.31ರೊಳಗೆ ಸಲ್ಲಿಸಬೇಕು. ಮಾಹಿತಿಗೆ ದೂ. 08226-223688 ಸಂಪರ್ಕಿಸಿ.

ಆರ್.ಬಸವಣ್ಣನಾಯಕ ನಿಧನ

ಚಾಮರಾಜನಗರ, ಸೆ.20–ನಗರದ ರಾಮಸಮುದ್ರ



ನಾಯಕರ ಬೀದಿ ನಿವಾಸಿ, ಅಬಕಾರಿ ಇಲಾಖೆ ನಿವೃತ್ತ ಅಧಿಕಾರಿ ಆರ್. ಬಸವಣ್ಣನಾಯಕ (80) ನಿಧನರಾದರು. ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 10 ಗಂಟೆಗೆ ರಾಮಸಮುದ್ರದ ನಾಯಕ ಸಮಾಜದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂಗನವಾಡಿ ಅಡುಗೆ ಸಹಾಯಕಿ ನಾಪತ್ತೆ

ಕೊಳ್ಳೇಗಾಲ, ಸೆ.20– ಮಧುವನಹಳ್ಳಿಯ ಮಸಣ್ಣಮ್ಮ ಅವರ



ಪುತ್ರಿ, ಮಧುವನಹಳ್ಳಿಯ ಅಂಗನವಾಡಿ ಅಡುಗೆ ಸಹಾಯಕಿ ರೋಜಾ ನಾಪತ್ತೆಯಾಗಿದ್ದಾರೆ.

ಸೆ.16ರಂದು ಅಂಗನವಾಡಿಯಲ್ಲಿ ಅಡುಗೆ ಕೆಲಸ ಮುಗಿಸಿ ಬಂದು, ಸಂಬಳ ಆಗಿಲ್ಲದ್ದರ ಬಗ್ಗೆ ತಾಲೂಕು ಕಚೇರಿಗೆ ಹೋಗಿ ವಿಚಾರಿಸಿಕೊಂಡು ಬರುತ್ತೇನೆ ಎಂದು ಹೋದ ರೋಜಾ ವಾಪಸ್ಸಾಗಿಲ್ಲ ಎಂದು ತಾಯಿ ಮಸಣ್ಣಮ್ಮ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದ್ದಾರೆ. ಸುಳಿವು ಸಿಕ್ಕವರು ಠಾಣೆ ಸಂಪರ್ಕಿಸುವಂತೆ ಪೊಲೀಸರು ಕೋರಿದ್ದಾರೆ.

ಯಡವನಹಳ್ಳಿಯಲ್ಲಿ ಅಸಮರ್ಪಕ ನೀರು ಸರಬರಾಜು; ಜನರ ಪರದಾಟ

ಬೇಗೂರು, ಸೆ.20– ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿಯಲ್ಲಿ ಸಮರ್ಪಕ ಕುಡಿಯುವ ನೀರಿನ ಪೂರೈಕೆ ಇಲ್ಲದೆ ಗ್ರಾಮದ ಜಮೀನುಗಳ ಪಂಪ್‌ಸೆಟ್ ಹಾಗೂ ಕೈ ಪಂಪ್‌ಗಳಲ್ಲಿ ನೀರು ತರುವುದೇ ಮಹಿಳೆಯರು-ಮಕ್ಕಳ ನಿತ್ಯ ಕಾಯಕವಾಗಿದೆ.

ಪ್ರಸ್ತುತ ಯಡವನಹಳ್ಳಿ ಗ್ರಾಮದಲ್ಲಿ ಸುಮಾರು 200 ಕುಟುಂಬಗಳಿದ್ದು, ಮಕ್ಕಳು, ವೃದ್ಧರ ಸಂಖ್ಯೆ ಹೆಚ್ಚಿದೆ. ಕಪಿಲಾ ನದಿ ಮೂಲದಿಂದ ಗ್ರಾಮಕ್ಕೆ ಸರಬರಾಜಾಗುತ್ತಿದ್ದ ಬಹುಗ್ರಾಮ ಕುಡಿಯುವ ನೀರಿನ ಮಾರ್ಗದಲ್ಲಿ ಪದೇ ಪದೇ ತಾಂತ್ರಿಕ ದೋಷ ಕಾಣಿಸಿಕೊಳ್ಳುತ್ತಿದ್ದು, ನೀರಿಗೆ ಪರದಾಟ ಸಾಮಾನ್ಯವಾಗಿದೆ. ಗ್ರಾಮಕ್ಕೆ ಒಂದೇ ಬೋರ್‌ನಿಂದ ನೀರು ಸರಬರಾಜಾಗುತ್ತಿದ್ದು, ಅದು ಸಹ ಇತ್ತೀಚೆಗೆ ಬಿದ್ದ ಮಳೆಗೆ ನೀರಿನಲ್ಲಿ ಮುಳುಗಿದೆ. ಇದರಿಂದ ನೀರು ಸರಬರಾಜಿಗೆ ಬೇರೆ ದಾರಿ ಇಲ್ಲದಂತಾಗಿದೆ.

ಪ್ರಯೋಜನಕ್ಕೆ ಬಾರದ ತೊಂಬೆ, ಬೋರ್‌ವೆಲ್: ಗ್ರಾಮದ ನೀರಿನ ಪೂರೈಕೆಗಾಗಿ ಎರಡು ಬೋರ್‌ವೆಲ್‌ಗಳಿದ್ದು, ಒಂದು ಓವರ್‌ಹೆಡ್ ಟ್ಯಾಂಕ್, ಐದು ತೊಂಬೆಗಳಿವೆ. ಒಂದು ಬೋರ್‌ವೆಲ್ ಕೆರೆ ಆವರಣದಲ್ಲಿದ್ದು, ಇತ್ತೀಚೆಗೆ ಸುರಿದ ಮಳೆಗೆ ನೀರಿನಲ್ಲಿ ಮುಳುಗಿದೆ. ಮತ್ತೊಂದು ಬೋರ್‌ವೆಲ್ ಮೂರು ವರ್ಷಗಳ ಹಿಂದೆ ಕೊರೆಸಿದ್ದರೂ ಇದುವರೆಗೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ.



ಇರುವ ಯಾವ ತೊಂಬೆಗೂ ನೀರಿನ ಪೈಪ್‌ಲೈನ್ ಅಳವಡಿಸದೆ ಪ್ರಯೋಜನಕ್ಕೆ ಬಾರದಾಗಿವೆ. ಇದರಿಂದ ಕಬಿನಿ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಮಾರ್ಗದಲ್ಲಿ ಸಮಸ್ಯೆ ಹಾಗೂ ಮೋಟಾರ್‌ಗಳಲ್ಲಿ ತಾಂತ್ರಿಕ ದೋಷ ಉಂಟಾದರೆ ನೀರಿಗೆ ಹಾಹಾಕಾರ ಉಂಟಾಗುತ್ತದೆ.

ವಿದ್ಯುತ್ ಸಂಪರ್ಕ ಕಲ್ಪಿಸಿ: ಗ್ರಾಮದ ಹೊರವಲಯದಲ್ಲಿ ಕುಡಿಯುವ ನೀರಿಗಾಗಿ ಜಿಪಂ ನಿಂದ ಬೋರ್‌ವೆಲ್ ಕೊರೆಸಿ 3 ವರ್ಷಗಳೇ ಕಳೆದಿವೆ. ಸಮೀಪದಲ್ಲೇ ಈ ಬೋರ್‌ವೆಲ್‌ಗಾಗಿ ಟಿಸಿ ಅಳವಡಿಸಲಾಗಿದೆ. ಆದರೆ ವಿದ್ಯುತ್ ಸಂಪರ್ಕ ಕಲ್ಪಿಸದೆ ಉಪಯೋಗಕ್ಕೆ ಬಾರದಂತಾಗಿದೆ.

> ಕಪಿಲಾ ನದಿ ಮೂಲದಿಂದ ಗ್ರಾಮಕ್ಕೆ ಸರಬರಾಜಾಗುತ್ತಿದ್ದ ಬಹುಗ್ರಾಮ ಕುಡಿಯುವ ನೀರಿನ ಮಾರ್ಗದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಾಗಲೆಲ್ಲಾ ಯಡವನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಪೂರೈಕೆ ಇಲ್ಲದೆ ಜನರು ಸಮಸ್ಯೆ ಎದುರಿಸಬೇಕಾಗುತ್ತದೆ. ಶಾಶ್ವತ ಪರಿಹಾರಕ್ಕೆ ಗ್ರಾಮ ಪಂಚಾಯಿತಿ ಮುಂದಾಗುತ್ತಿಲ್ಲ.
>
> -ಹರೀಶ್, ಯಡವನಹಳ್ಳಿ ಗ್ರಾಮಸ್ಥ.

> ಕೆಲ ದಿನಗಳಿಂದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಘಟಕದಲ್ಲಿ ಕಾಣಿಸಿಕೊಂಡಿದ್ದ ತಾಂತ್ರಿಕ ದೋಷ ಸದ್ಯ ನಿವಾರಣೆಯಾಗಿದ್ದು, ನೀರು ಸರಬರಾಜು ಮಾಡಲಾಗುತ್ತಿದೆ. ಇತ್ತೀಚೆಗೆ ಸುರಿದ ಮಳೆಯಿಂದ ಗ್ರಾಮದ ಹೊರಹೊಲಯದ ಬೋರ್‌ವೆಲ್ ಮುಳುಗಿದ್ದು, ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸಿ ನೀರು ಸರಬರಾಜು ಮಾಡಲಾಗುವುದು.
>
> –ಶಾಂತರಾಜು, ಯಡವನಹಳ್ಳಿ ಪಿಡಿಓ.

ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸುವ ಗ್ರಾಪಂ ಆಡಳಿತ ಬಹುಗ್ರಾಮ ಕುಡಿಯುವ ಯೋಜನೆಯನ್ನೇ ಆಶ್ರಯಿಸದೆ ಸಮರ್ಪಕ ನೀರಿನ ಸರಬರಾಜು ಮಾಡಲು ಕ್ರಮ ವಹಿಸಬೇಕೆಂಬುದು ಗ್ರಾಮಸ್ಥರ ಆಗ್ರಹ.

ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಜಿಪಂ ಸಿಇಓ ಭೇಟಿ



ಚಾಮರಾಜನಗರ, ಸೆ.20– ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಗರದ ವೃತ್ತಿಪರ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ ಭೇಟಿ ನೀಡಿ ಮೂಲ ಸೌಕರ್ಯ ಪರಿಶೀಲಿಸಿದರು.

ಈ ಹಿಂದೆ ವೃತ್ತಿಪರ ಬಾಲಕಿಯರ ವಿದ್ಯಾರ್ಥಿನಿಲಯ ಪರಿಶೀಲನೆ ಸಂದರ್ಭದಲ್ಲಿ ಕೊಠಡಿಗಳ ಸಮಸ್ಯೆ ಇರುವುದರಿಂದ ವಿದ್ಯಾರ್ಥಿನಿಯರನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸುವಂತೆ ನಿರ್ದೇಶಿಸಿದ್ದರು. ಅದರಂತೆ ಸರ್ಕಾರಿ ಪಾಲಿಟೆಕ್ನಿಕ್ ಹತ್ತಿರ ನಿರ್ಮಿಸಿರುವ ನೂತನ ಕಟ್ಟಡಕ್ಕೆ ವಿದ್ಯಾರ್ಥಿನಿಲಯವನ್ನು ಸ್ಥಳಾಂತರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸಿಇಓ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹೊಸ ಕಟ್ಟಡದಲ್ಲಿನ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಒದಗಿಸಲಾಗಿರುವ ಹಾಸಿಗೆ, ಹೊದಿಕೆ, ಮಂಚ, ಕೊಠಡಿಗಳು, ಅಡುಗೆ ಕೋಣೆ, ಕುಡಿಯುವ ನೀರು, ಸ್ನಾನಗೃಹ ಮತ್ತು ಶೌಚಾಲಯಗಳನ್ನು ವೀಕ್ಷಿಸಿದ ಕೆ.ಎಂ.ಗಾಯತ್ರಿ ಅವರು, ವಿದ್ಯಾರ್ಥಿ ನಿಲಯದಲ್ಲಿ ಮಂಚಗಳ ಕೊರತೆಯಿದ್ದಲ್ಲಿ ತುರ್ತಾಗಿ ಒದಗಿಸಲು ಕ್ರಮ ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಬಳಿಕ ಹೊಸ ಕಟ್ಟಡದಲ್ಲಿ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ತೆರೆಯಲಾಗಿರುವ ಅಧ್ಯಯನ ಕೇಂದ್ರ ಪರಿಶೀಲಿಸಿ, ವಿದ್ಯಾರ್ಥಿನಿಯರಿಗೆ ಅಗತ್ಯ ಪುಸ್ತಕಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಪಟ್ಟ ಅಧ್ಯಯನ ಪುಸ್ತಕಗಳನ್ನು ಖರೀದಿಸುವಂತೆ ತಿಳಿಸಿದರು. ಅಲ್ಲದೆ ವೃತ್ತಿಪರ ವಿಷಯಗಳು ಹಾಗೂ ಕಲಿಕೆಯ ಕುರಿತು ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿದರು.

ಇದೇ ವೇಳೆ ವಿದ್ಯಾರ್ಥಿನಿಲಯವು ಪಟ್ಟಣದ ಹೊರಭಾಗದಲ್ಲಿರುವುದರಿಂದ ವಿದ್ಯಾರ್ಥಿನಿಲಯಕ್ಕೆ ರಕ್ಷಣೆ ಒದಗಿಸುವ ಸಂಬಂಧ ರಕ್ಷಣಾ ಸಿಬ್ಬಂದಿ ನಿಯೋಜಿಸುವ ಕುರಿತು ಕೆ.ಎಂ.ಗಾಯತ್ರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳ ಜೊತೆ ದೂರವಾಣಿ ಮೂಲಕ ಚರ್ಚಿಸಿದರು. ಈ ಸಂದರ್ಭ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ, ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಚಿಕ್ಕಬಸವಯ್ಯ ಇದ್ದರು.

ಒಂದನೇ ಪುಟದಿಂದ

ಖಾಸಗಿ ದರ್ಬಾರ್‌ಗೆ ಸಿಂಹಾಸನ ಸಿದ್ಧ

ಹಾಲ್‌ಗೆ ಪ್ರಮೋದಾದೇವಿ ಒಡೆಯರ್ ಆಗಮಿಸಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಪೂರ್ಣಾಹುತಿ ನೆರವೇರಿದ ಬಳಿಕ ಧಾರ್ಮಿಕ ಕಾರ್ಯಗಳು ಕೊನೆಗೊಂಡವು.

ಪಟ್ಟದ ಆನೆ, ಹಸು ಆಗಮನ: ಸಿಂಹಾಸನದ ಜೋಡಣೆಯ ಬಳಿಕ ಬೆಳಗ್ಗೆ 10.44ರಿಂದ 10.58ರ ನಡುವೆ ಪಟ್ಟದ ಆನೆ, ಕುದುರೆ, ಹಸುಗಳನ್ನು ಕಲ್ಯಾಣಮಂಟಪದ ಅಂಗಳಕ್ಕೆ ಕರೆತಂದು ಪೂಜೆ ಸಲ್ಲಿಸಲಾಯಿತು. ಸಿಂಹಾಸನ ಹಾಗೂ ಭದ್ರಾಸನದ ಜೋಡಣೆಯ ಹಿನ್ನೆಲೆಯಲ್ಲಿ ಜೋಡಣಾ ಕಾರ್ಯದಲ್ಲಿ ತೊಡಗಿದ್ದ ಎಲ್ಲಾ ಸಿಬ್ಬಂದಿಯ ಮೊಬೈಲ್ ಅನ್ನು ಲಾಕರ್‌ನಲ್ಲಿಡಲಾಗಿತ್ತು. ಅರಮನೆಯ ದರ್ಬಾರ್ ಹಾಲ್, ಕನ್ನಡಿತೊಟ್ಟಿ ಹಾಗೂ ಸ್ಟ್ರಾಂಗ್ ರೂಮ್ ಸೇರಿದಂತೆ ಇನ್ನಿತರೆಡೆಗಳಲ್ಲಿ ಅರಮನೆಯ ಸಿಬ್ಬಂದಿಯ ಓಡಾಟವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿತ್ತು. ಅಲ್ಲದೆ ಅರಮನೆಯ ಒಳಾಂಗಣದಲ್ಲಿರುವ ಎಲ್ಲಾ ಸಿಸಿ ಕ್ಯಾಮರಾಗಳಿಗೆ ಪರದೆ ಮುಚ್ಚಲಾಗಿತ್ತು. ಬಿಡಿಭಾಗಗಳನ್ನು ತರುವ ಸಿಬ್ಬಂದಿ ಮೇಲೆ ಹದ್ದಿನಕಣ್ಣಿಡಲಾಗಿತ್ತು. ಒಬ್ಬೊಬ್ಬರಿಗೂ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು ಬೆಂಗಾವಲಿಗೆ ನಿಯೋಜಿಸಲಾಗಿತ್ತು.

ಪ್ರವೇಶ ನಿರ್ಬಂಧ: ಸಿಂಹಾಸನ ಜೋಡಣೆಯ ಹಿನ್ನೆಲೆಯಲ್ಲಿ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿತ್ತು. ಅರಮನೆಯ ಎಲ್ಲಾ ದ್ವಾರಗಳಲ್ಲಿಯೂ ಪ್ರವೇಶ ನಿರ್ಬಂಧಿಸಿರುವ ಬಗ್ಗೆ ಫಲಕ ಹಾಕಲಾಗಿತ್ತು. ಅಲ್ಲದೆ ಪತ್ರಕರ್ತರಿಗೂ ಅರಮನೆಯ ಆವರಣ ಪ್ರವೇಶ ನಿಷಿದ್ಧ. ಸಿಂಹಾಸನ ಜೋಡಣೆಯ ವೇಳೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಅವರ ಕಾರ್ಯದರ್ಶಿ ಲಕ್ಷ್ಮೀನಾರಾಯಣ್, ಮಹೇಂದ್ರ, ಅರಮನೆಯ ಆಡಳಿತ ಮಂಡಳಿಯ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಅರಮನೆಯ ಭದ್ರತಾ ಪಡೆಯ ಎಸಿಪಿ ಚಂದ್ರಶೇಖರ್ ಸೇರಿದಂತೆ ಕೆಲವರು ಮಾತ್ರ ಉಪಸ್ಥಿತರಿದ್ದರು. ದಸರಾ ಉದ್ಘಾಟನೆ ದಿನವಾದ ಸೆ.26ರಂದು ಬೆಳಗ್ಗೆ 6.15ರಿಂದ 6.30ರೊಳಗೆ ಸಿಂಹಾಸನಕ್ಕೆ ಸಿಂಹವನ್ನು ಜೋಡಿಸಲಾಗುತ್ತದೆ. ಆ ನಂತರವಷ್ಟೇ ಖಾಸಗಿ ದರ್ಬಾರ್‌ಗೆ ಸಿಂಹಾಸನ ಸಿದ್ಧಗೊಳ್ಳಲಿದೆ.

50 ಸಾವಿರಕ್ಕೆ ಮಾರಿದ ತಂದೆ!

ಜಿಲ್ಲಾ ಅಧ್ಯಕ್ಷೆ ದೀಪಾ ಬುದ್ಧೆ ಅವರು, ಪಿಎಚ್‌ಡಿ ಅಧ್ಯಯನಕ್ಕಾಗಿ ಸಮೀಕ್ಷೆ ಮಾಡುವಾಗ ತಂದೆಯೇ ಮಗುವನ್ನು ಮಾರಾಟ ಮಾಡಿರುವ ಪ್ರಕರಣ ಬಯಲಾಗಿದೆ. ನಾಗವೇಣಿ ಅವರು ತನ್ನ ಮಗುವನ್ನು ವಾಪಸ್ ಕೊಡಿಸಿಕೊಡುವಂತೆ ನನ್ನ ಬಳಿ ವಿನಂತಿಸಿದರು. ಇದನ್ನು ಬಸವ ಅವರೊಟ್ಟಿಗೆ ಮಾತನಾಡಿ, ಸೋಮವಾರದೊಳಗೆ ಮಗುವನ್ನು ವಾಪಸ್ ಪಡೆಯುವಂತೆ ತಿಳಿಸಿದ್ದೆ. ಅವರು ನನ್ನ ಮಾತಿಗೆ ಮನ್ನಣೆ ನೀಡಲಿಲ್ಲ. ಹೀಗಾಗಿ ಮಗು ಮಾರಾಟ ವಿಚಾರವನ್ನು ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ ಎಂದು ದೀಪಾ ಬುದ್ಧೆ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಂಗಳವಾರ ಬಸವ ಅವರ ಮನೆಗೆ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದಿದ್ದಲ್ಲದೆ, ದಂಪತಿಯನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಮುಂದೆ ಹಾಜರು ಪಡಿಸಿದ್ದಾರೆ. ಬಸವನ ವಿರುದ್ಧ ಪಟ್ಟಣ ಠಾಣೆಯಲ್ಲಿ ದೂರನ್ನು ಸಹ ದಾಖಲಿಸಲಾಗಿದೆ. ಮಗುವನ್ನು ಖರೀದಿಸಿರುವ ಬೆಂಗಳೂರಿನ ವ್ಯಕ್ತಿಯ ಹುಡುಕಾಟದಲ್ಲಿ ಅಧಿಕಾರಿಗಳು ತೊಡಗಿದ್ದಾರೆ.

ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ: ಸಿಐಡಿ ತನಿಖೆ

ಇದಕ್ಕೂ ಮುನ್ನ ಮಾತನಾಡಿದ ಪಿ. ರಾಜೀವ್, ಸಿಇಟಿ ಪರೀಕ್ಷೆ ಬರೆಯದೆ ಶಿಕ್ಷಕರಾಗಿ ಹೇಗೆ ನೇಮಕವಾದರು ಎಂಬುದರ ಬಗ್ಗೆ ತನಿಖೆಯಾಗಬೇಕು. ಇದಕ್ಕೆ ದನಿಗೂಡಿಸಿದ ಶಾಸಕ ಎ. ಎಸ್. ನಡಹಳ್ಳಿ, ಇದನ್ನು ಬಗೆದರೆ ದೊಡ್ಡ ವಿಚಾರವಿದೆ. ಇದು ದೊಡ್ಡ ಹಗರಣ. ತಪ್ಪಿತಸ್ಥರು ಯಾರು ಎಂಬುದು ಬಯಲಾಗಬೇಕು ಎಂದು ಆಗ್ರಹಿಸಿದರು. ಸಚಿವರ ಉತ್ತರದ ನಂತರವೂ ಆಗ್ರಹ ಮುಂದುವರೆದಾಗ ಕಾನೂನು ಸಚಿವ ಮಾಧುಸ್ವಾಮಿ ಮಧ್ಯಪ್ರವೇಶಿಸಿ, ದಾಖಲೆ ಇದ್ದರೆ ಕೊಡಲಿ ಅದನ್ನು ಸೇರಿಸಿ ತನಿಖೆ ಮಾಡುವುದಾಗಿ ಹೇಳಿದರು.

ಕೆಆರ್‌ಎಸ್ ವ್ಯಾಪ್ತಿ ತೆರಿಗೆ ವಿನಾಯ್ತಿ

ಅಧಿಕಾರವನ್ನು ಚಲಾಯಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಕರ್ನಾಟಕ ಹೊರತುಪಡಿಸಿ ಇತರೆ ರಾಜ್ಯಗಳಲ್ಲಿ ನೋಂದಾಯಿಸಲ್ಪಟ್ಟ ಮತ್ತು ಆ ರಾಜ್ಯದಲ್ಲಿ ತೆರಿಗೆ ಪಾವತಿಸಿರುವ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ವಿ.ಎಸ್.ಪುಷ್ಪ ಸೆ.20ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ. ಇತರೆ ರಾಜ್ಯದ ವಾಹನಗಳು ಮೋಟಾರು ವಾಹನ ಕಾಯ್ದೆ 1980ರ ಸೆಕ್ಷನ್ 88ರ ಸಬ್ ಸೆಕ್ಷನ್(8) (ಕೇಂದ್ರ ಕಾಯ್ದೆ 59/88) ಅನುಸಾರ ವಿಶೇಷ ರಹದಾರಿ ಪಡೆದು ದಿ:29-09-2022ರಿಂದ ದಿ:06.10.2022ರವರೆಗೆ (2 ದಿನಗಳು ಸೇರಿದಂತೆ) ನಡೆಯಲಿರುವ ದಸರಾ ಮಹೋತ್ಸವಕ್ಕೆ ಅಂತರ ರಾಜ್ಯದಿಂದ ಮೈಸೂರು ನಗರ ಹಾಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜ ಜಲಾಶಯ ವೀಕ್ಷಣೆ ಆಗಮಿಸುವ ಪ್ರವಾಸಿ ವಾಹನಗಳಿಗೆ ಮಾತ್ರ ಅನ್ವಯಿಸುವಂತೆ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಅಕ್ಕಿ, ರಾಗಿ, ಜೋಳ...!

ರಾಜೇಗೌಡ ತಂದುಕೊಟ್ಟ ಧಾನ್ಯದ ಗಂಟನ್ನು ಸಿದ್ದರಾಮಯ್ಯ ಸ್ಪೀಕರ್‌ಗೆ ತಲುಪಿಸಿದರು. ಇದನ್ನು ಕಂಡ ಮುಖ್ಯಮಂತ್ರಿ ಬೊಮ್ಮಾಯಿ, ಸಿದ್ದರಾಮಯ್ಯ ಇವೆಂಟ್ ಮ್ಯಾನೇಜ್‌ಮೆಂಟ್ ಚೆನ್ನಾಗಿದೆ ಎಂದು ಟಾಂಗ್ ಕೊಟ್ಟರು. ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನೀವೂ ಉತ್ತಮ ಇವೆಂಟ್ ಮ್ಯಾನೇಜರ್. ನಾನೇ ನಿಮ್ಮ ಟಾರ್ಗೆಟ್ ಅಂತ ಗೊತ್ತಿದೆ. ನೀವು ದೊಡ್ಡಬಳ್ಳಾಪುರದಲ್ಲಿ ಏನು ಮಾಡಿದ್ದೀರಿ ಎಂದು ಗೊತ್ತಿದೆ. ನೀವು ಟಾರ್ಗೆಟ್ ಮಾಡಿದಷ್ಟೂ ನನಗೆ ಲಾಭ. ನೀವು ಏನು ಮಾಡಿದರೂ ನನ್ನ ಏನು ಮಾಡಲೂ ಸಾಧ್ಯವಿಲ್ಲ. ಜನ ತೀರ್ಮಾನ ಮಾಡುತ್ತಾರೆ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಂತೆ, ಬನ್ನಿ ಈಗಲೇ ಚುನಾವಣೆಗೆ ಹೋಗೋಣ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಸವಾಲೆಸೆದರು.

ನಾನು 1983ರಲ್ಲಿ ಸಭೆಗೆ ಬಂದವನು. ಹೆಗಡೆ, ಬೊಮ್ಮಾಯಿ, ದೇವೇಗೌಡ, ಧರಂಸಿಂಗ್ ಈ ಎಲ್ಲಾ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಅವರೆಲ್ಲರ ಜೊತೆ ಕೆಲಸ ಮಾಡಿದ್ದೇನೆ. ನಾನೂ ಸಿಎಂ ಆಗಿ ಕೆಲಸ ಮಾಡಿದ್ದೇನೆ. ಬೊಮ್ಮಾಯಿ, ನೀವು ಇನ್ನೂ ರಾಜಕೀಯ ಮಾಡಬೇಕಾದವರು. ವಿಪಕ್ಷಗಳು ಮಾತಾಡಬೇಕಾದರೆ ಸುಮ್ಮನೇ ಕೇಳಿಸಿಕೊಳ್ಳಬೇಕು ಎಂದು ಪಾಠ ಮಾಡಿದರು. ಈ ವೇಳೆ ಮುಖ್ಯಮಂತ್ರಿ ಬೊಮ್ಮಾಯಿ, ಇದು ನನ್ನ ಕೊನೇ ಚುನಾವಣೆ ಎಂದು ಹೇಳಿದ್ದು ನೀವೇ ಅಲ್ಲವೇ ಎಂದು ಸಿದ್ದರಾಮಯ್ಯ ಅವರನ್ನು ಕೆದಕಿದರು. ಇದಕ್ಕೆ ಪ್ರತ್ಯುತ್ತರ ನೀಡಿದ ಬಹಳ ಜನ ಎಲ್ಲಿರಬೇಕೋ ಅಲ್ಲೇ ಇದ್ದಾರೆ. ಕೆಲವರು ಎಲ್ಲೆಲ್ಲೋ ಹೋಗಿದ್ದಾರೆ ಪಾಪ, ಎಂದರು. ಈ ವೇಳೆ ಬೊಮ್ಮಾಯಿ ನೀವು ಬಹಳ ಜನರನ್ನು ಕಳಿಸಿದ್ದೀರಿ ಎಂದು ಹೇಳುತ್ತಿದ್ದಂತೆ ಪ್ರತಿಯಾಗಿ ಸಿದ್ದರಾಮಯ್ಯ ಹೆಗಡೆ, ಎಸ್.ಆರ್.ಬೊಮ್ಮಾಯಿ ಅವರನ್ನು ನಾನು ಕಳಿಸಿದ್ನಾ? ಬಿಜೆಪಿಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆ ಇಲ್ಲ. 1983ರಿಂದ ಇಲ್ಲಿದ್ದೇನೆ. ನೀವೆಲ್ಲಾ ಎದ್ದು ಮಾತಾಡೋದು ನೋಡಿದರೆ ನನಗೆ ಮಾತನಾಡೋಕೆ ಬರೋದಿಲ್ಲವೇನೋ ಎಂದು ಅನ್ನಿಸುತ್ತದೆ ಎಂದು ಹರಿಹಾಯ್ದರು. ಕೊನೆಗೆ ಸಿಎಂ ಬೊಮ್ಮಾಯಿ, ಸಿದ್ದರಾಮಯ್ಯ ಅವಧಿಯ ಹಗರಣದ ಬಗ್ಗೆ ಪ್ರಸ್ತಾಪಿಸಿ ನಿಮ್ಮ ಕಾಲದಲ್ಲೂ ಪಿಎಸ್‌ಐ ಹಗರಣದ ತನಿಖೆಗೆ ಕೊಟ್ಟಿಲ್ವಾ? ಪ್ರಕರಣ ಮುಚ್ಚಿ ಹಾಕಿದ್ದು ನೀವು ಎಂದು ಜರಿದರು. ಇದಕ್ಕೆ ಪ್ರತಿದಾಳಿ ನಡೆಸಿದ ಸಿದ್ದರಾಮಯ್ಯ, ಒಂದು ವೇಳೆ ನಾವೂ ಅಕ್ರಮ ಮಾಡಿದ್ದರೆ ಕೂಡಲೇ ತನಿಖೆ ಮಾಡಿಸಿ ಎಂದು ಆಗ್ರಹಿಸಿದರು.

ಇದಕ್ಕೂ ಮುನ್ನ ಇಂದು ಬೆಳಗ್ಗೆ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿರುವ ಪಿಎಸ್‌ಐ ಹಗರಣದಿಂದ ಉದ್ಯೋಗ ವಂಚಿತರ ಭೇಟಿ ಮಾಡಿದ ಸಿದ್ದರಾಮಯ್ಯ, ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದ ಬಹಳಷ್ಟು ಜನ ಉದ್ಯೋಗಾಕಾಂಕ್ಷಿ ಯುವ ಜನರು ಪ್ರತಿಭಟನೆ ಮಾಡುತ್ತಿದ್ದಾರೆ. ಇಂದು ಅವರನ್ನು ಭೇಟಿ ಮಾಡಿ ಬಂದಿದ್ದೇನೆ. ಅವರಲ್ಲಿ ಕೆಲವರು ಪೊಲೀಸ್, ಇಂಜಿನಿಯರ್, ಎಸ್‌ಡಿಎ ಹೀಗೆ ವಿವಿಧ ಹುದ್ದೆಗಳಿಗೆ ಪರೀಕ್ಷೆ ಬರೆದಿದ್ದಾರೆ, ಇನ್ನು ಕೆಲವರು ಪರೀಕ್ಷೆಗೆ ತಯಾರಿ ನಡೆಸಿದ್ದಾರೆ. ಸರ್ಕಾರದಲ್ಲಿ ಎರಡೂವರೆ ಲಕ್ಷ ಹುದ್ದೆಗಳಿಗೆ ಮಂಜೂರಾತಿ ದೊರೆತು ಭರ್ತಿಯಾಗದೆ ಖಾಲಿ ಉಳಿದಿವೆ, ಅವುಗಳನ್ನು ಭರ್ತಿ ಮಾಡಿ ಎಂದು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದರು.

ನಮಗೆ ಲಂಚ ಕೊಟ್ಟು ಉದ್ಯೋಗ ಪಡೆಯುವ ಶಕ್ತಿ ಇಲ್ಲ, ನಮ್ಮ ಮನೆಯಿಂದ ತಂದೆ ತಾಯಂದಿರು ಬೆಳೆದಿರುವ ಅಕ್ಕಿ, ಗೋಧಿ, ಕಾಳು ಮುಂತಾದ ಧಾನ್ಯಗಳನ್ನು ಕೊಟ್ಟಿದ್ದಾರೆ. ಇದನ್ನು ತೆಗೆದುಕೊಂಡು ಉದ್ಯೋಗ ಕೊಡಿ ಎಂದು ಅವರು ಆಕ್ರೋಶ ಹೊರಹಾಕಿದ್ದಾರೆ. ಪೊಲೀಸ್ ಇಲಾಖೆಯ ಹುದ್ದೆಗಳ ನೇಮಕಾತಿಯಲ್ಲಿ ನಮ್ಮ ರಾಜ್ಯದಲ್ಲಿ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 25 ವರ್ಷ, ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 27 ವರ್ಷ ಗರಿಷ್ಠ ಮಿತಿ ನಿಗದಿ ಮಾಡಲಾಗಿದೆ. ಇದು ಬೇರೆ ರಾಜ್ಯಗಳಲ್ಲಿ ಹೆಚ್ಚಿದೆ. ನಮ್ಮ ರಾಜ್ಯದಲ್ಲೂ ಈ ವಯಸಿನ ಮಿತಿಯನ್ನು ಏರಿಕೆ ಮಾಡಬೇಕು ಎಂದು ಪ್ರತಿಭಟನೆ ನಡೆಸುತ್ತಿರುವ ಉದ್ಯೋಗಾಕಾಂಕ್ಷಿಗಳು ಸರ್ಕಾರದ ಮೇಲೆ ಒತ್ತಡ ಹಾಕಿ ಎಂದು ನನಗೆ ಮನವಿ ಮಾಡಿದ್ದಾರೆ. ಪಿಎಸ್‌ಐ ಹಗರಣದ ಬಗ್ಗೆ ಸದನದಲ್ಲಿ ಮಾತನಾಡುವಾಗ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಎಂದು ಅವರಿಗೆ ಭರವಸೆ ನೀಡಿದ್ದೇನೆ ಎಂದರು. ಭ್ರಷ್ಟಾಚಾರ ಇಂದು ವ್ಯಾಪಕವಾಗಿ ನಡೆಯುತ್ತಿದೆ. ಈ ವಿಚಾರವನ್ನು ನಾವು ಪ್ರಸ್ತಾಪಿಸಿದರೆ ನಿಮ್ಮ ಕಾಲದಲ್ಲೂ ಭ್ರಷ್ಟಾಚಾರ ಇರಲಿಲ್ವಾ ಎಂದು ಬೇಜವಾಬ್ದಾರಿತನದ ಉತ್ತರ ನೀಡುತ್ತಾರೆ. ನಮ್ಮ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದರೆ ಆಗ ವಿರೋಧ ಪಕ್ಷದಲ್ಲಿದ್ದ ನೀವು ಏನು ಮಾಡುತ್ತಿದ್ದಿರಿ. ಉದ್ಯೋಗಾಕಾಂಕ್ಷಿಗಳು ತಮ್ಮ ಬಳಿ ಸರ್ಕಾರಕ್ಕೆ ಲಂಚ ನೀಡಲು ಹಣವಿಲ್ಲ, ಹಾಗಾಗಿ ತಮ್ಮ ಪೋಷಕರು ಬೆಳೆದಿರುವ ಅಕ್ಕಿ, ರಾಗಿ, ಜೋಳ ಮುಂತಾದ ಬೆಳೆಗಳನ್ನು ಒಂದು ಚೀಲದಲ್ಲಿ ಗಂಟು ಕಟ್ಟಿ ಸಭಾಪತಿಗಳ ಮೂಲಕ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ತಲುಪಿಸುವಂತೆ ಕೋರಿ ನನ್ನ ಕೈಗೆ ಕೊಟ್ಟಿದ್ದಾರೆ ಎಂದರು. ನಮ್ಮ ಸರ್ಕಾರದ ಕಾಲದಲ್ಲಿ ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿರುವ ಬಗ್ಗೆ ಸರ್ಕಾರದ ಬಳಿ ಸೂಕ್ತ ದಾಖಲೆ ಇದ್ದರೆ ತನಿಖೆ ಮಾಡಿಸಲಿ. 2006 ರಿಂದ ಈ ವರೆಗೆ ನಡೆದಿರುವ ಪಿಎಸ್‌ಐ, ಶಿಕ್ಷಕರ ನೇಮಕಾತಿ ಸೇರಿದಂತೆ ಎಲ್ಲಾ ನೇಮಕಾತಿಗಳನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿ. ಯಾವೆಲ್ಲಾ ಅಕ್ರಮ, ಭ್ರಷ್ಟಾಚಾರ ನಡೆದಿದೆ ಎಲ್ಲವನ್ನೂ ತನಿಖೆ ಮಾಡಿಸಲಿ ಎಂದು ಆಗ್ರಹಿಸಿದರು.

ಆಸಿಡ್ ದಾಳಿಗೀಡಾದ ಮಹಿಳೆಯರಿಗೆ 10,000 ರೂ. ಪಿಂಚಣಿ

ಇಂತಹ ನೊಂದ ಮಹಿಳೆಯರಿಗೆ ಉಚಿತ ನಿವೇಶನ ನೀಡಿ: ಜಿಲ್ಲಾಧಿಕಾರಿಗಳಿಗೆ ಕಂದಾಯ ಸಚಿವ ಆರ್.ಅಶೋಕ್ ನಿರ್ದೇಶನ

ಮೈಸೂರು, ಸೆ.20(ಆರ್‌ಕೆಬಿ)- ಆಸಿಡ್ ದಾಳಿಯಿಂದ ದೌರ್ಜನ್ಯಕ್ಕೊಳಗಾದ ಹೆಣ್ಣು ಮಕ್ಕಳಿಗೆ ಸರ್ಕಾರ ಪ್ರತೀ ತಿಂಗಳು ಪಿಂಚಣಿ ರೀತಿ 10 ಸಾವಿರ ರೂ. ನೀಡುತ್ತಿದ್ದೇವೆ. ದೌರ್ಜನ್ಯಕ್ಕೊಳಗಾದ ಅಂಥವರಿಗೆ ಉಚಿತ ನಿವೇಶನ ನೀಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುವುದಾಗಿ ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು.

ಮೈಸೂರಿನ ವಿದ್ಯಾರಣ್ಯಪುರಂನ ಶ್ರೀ ರಾಮಲಿಂಗೇಶ್ವರ ಉದ್ಯಾನದಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಹಮ್ಮಿಕೊಂಡಿರುವ 9 ದಿನಗಳ 'ಮೋದಿ ಯುಗ ಉತ್ಸವ'ದ 4ನೇ ದಿನದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಯಾರೋ ಮಾಡಿದ ಆಸಿಡ್ ದಾಳಿಯಿಂದ ಮುಖವೆಲ್ಲಾ ಸುಟ್ಟು, ಇರುವವರೆಗೂ ಕೊರಗುವ ಯುವತಿಯರು, ಮಹಿಳೆಯರಿಗೆ ಇಂಥ ಸೌಲಭ್ಯವನ್ನು ನಮ್ಮ ಸರ್ಕಾರ ಮಾನವೀಯತೆ ದೃಷ್ಟಿಯಿಂದ ನೀಡುತ್ತಿದೆ ಎಂದರು.

ಮೈಸೂರು ತಾಲೂಕಿನಲ್ಲಿ 1,18,736 ಮಂದಿ ಪಿಂಚಣಿ ದಾರರಿದ್ದಾರೆ. ಈ ಸೌಲಭ್ಯದಿಂದ ಬಿಟ್ಟು ಹೋಗಿರುವವರನ್ನು ಪತ್ತೆ ಹಚ್ಚಿ ಮನೆ ಬಾಗಿಲಿಗೆ ಪಿಂಚಣಿ ಸೌಲಭ್ಯ ತಲುಪಿಸುವ ಕೆಲಸವನ್ನು ನಮ್ಮ ಅಧಿಕಾರಿಗಳು ಮಾಡುತ್ತಿದ್ದಾರೆ. ಸರ್ಕಾರ ಇದುವರೆಗೆ 60 ಲಕ್ಷ ಜನರಿಗೆ ಯಾವುದೇ ಖರ್ಚಿಲ್ಲದೆ ಎಲ್ಲಾ ದಾಖಲೆಗಳನ್ನು ಅವರ ಮನೆಯ ಬಾಗಿಲಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಬಿಟ್ಟು ಹೋಗಿರುವವರು ಹಲೋ ಕಂದಾಯ ಸಚಿವರೇ...! ದೂರವಾಣಿ ಮೂಲಕ ಸಂಪರ್ಕಿಸಿ, ಪ್ರಯೋಜನ ಪಡೆದುಕೊಳ್ಳುವಂತೆ ಮನವಿ ಮಾಡಿದರು.

72 ಗಂಟೆಯೊಳಗೆ ಮನೆ ಬಾಗಿಲಿಗೆ ಪಿಂಚಣಿ ಮಂಜೂರಾತಿ ಪತ್ರ: ಹಿಂದೆ ಗಂಟೆಗಟ್ಟಲೆ, ದಿನಗಟ್ಟಲೆ ಕಾದು ನಿಂತು ಅರ್ಜಿ ಕೊಟ್ಟರೂ, ಜಿಲ್ಲಾಧಿಕಾರಿ, ತಾಲೂಕು ಕಚೇರಿಗಳಲ್ಲಿ ಕೆಲಸ ಆಗುತ್ತಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಅರ್ಜಿದಾರರು ಕಾಯುವ ಪ್ರಶ್ನೆಯೇ ಇಲ್ಲ. ನಾವು ಬದಲಾವಣೆ ತಂದಿದ್ದೇವೆ. ಅರ್ಜಿ ಹಾಕಿದ 72 ಗಂಟೆಯೊಳಗೆ ಫಲಾನುಭವಿಯ ಮನೆ ಬಾಗಿಲಿಗೆ ಪಿಂಚಣಿ ಮಂಜೂರಾತಿ ಪತ್ರ ತಲುಪಿಸಲಾಗುತ್ತಿದೆ. ಜನರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಿದ್ದೇವೆ. ನಮ್ಮ ಅಧಿಕಾರಿಗಳೇ ಮನೆ ಬಾಗಿಲಿಗೆ ಹೋಗಿ ಅರ್ಜಿ ಪಡೆದು, ಅಲ್ಲಿಯೇ ದಾಖಲಾತಿ ತೆಗೆದುಕೊಂಡು, ಭರ್ತಿ ಮಾಡಿ, 72 ಗಂಟೆಯೊಳಗೆ ಪಿಂಚಣಿ ಮಂಜೂರಾಗಿ ಆದೇಶ ಪತ್ರ ನೀಡುವಂತಹ ಜನಪರ ಕೆಲಸ ಮಾಡುತ್ತಿದ್ದೇವೆ.

ಡಿಸಿ, ತಹಶೀಲ್ದಾರ್ ಗ್ರಾಮ ವಾಸ್ತವ್ಯ: ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್ ಅವರು ಗ್ರಾಮಗಳಿಗೆ ತೆರಳಿ ವಾಸ್ತವ್ಯ ಮಾಡಿ, 24 ಗಂಟೆಯೊಳಗೆ ಕೆಲಸ ಮಾಡಿಕೊಡುತ್ತಿದ್ದೇವೆ. ಇತ್ತೀಚೆಗೆ ಕಲಬುರ್ಗಿ ಜಿಲ್ಲೆಯಲ್ಲಿ 28,900 ಜನರಿಗೆ ಒಂದೇ ಜಾಗದಲ್ಲಿ ವೇದಿಕೆ ಬಳಿ, ಜನರಿಗೆ ವಿವಿಧ ಸೌಲಭ್ಯಗಳನ್ನು ತಲುಪಿಸುವ ಕೆಲಸ ಮಾಡಿದ್ದೇವೆ. ಇಂತಹ ಕೆಲಸ ಎಲ್ಲಾ ಜಿಲ್ಲೆಗಳಲ್ಲೂ ಮಾಡುತ್ತಿದ್ದೇವೆ

ಹಾಗಾಗಿ ಎಲ್ಲಾ ಜಿಲ್ಲಾಧಿಕಾರಿಗಳು ಒಂದು ದಿನ ಗ್ರಾಮ ವಾಸ್ತವ್ಯ ಮಾಡಿ, ಅಲ್ಲಿ ಶಾಲೆ, ಹಾಸ್ಟೆಲ್‌ಗಳಲ್ಲಿಯೇ ಮಲಗಿ, ಇಡೀ ಪೂರ್ತಿ ದಿನ ಅಲ್ಲಿದ್ದು, ಫಲಾನುಭವಿಗಳಿಗೆ ಅಗತ್ಯ ಸೌಲಭ್ಯಗಳನ್ನು ತಲುಪಿಸಿಬರಬೇಕು. ಅಂತಹ ಜನಪರ ಕೆಲಸಗಳನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂದು ಹೇಳಿದರು.

ಮನೆ ಮತ್ತು ಕೈಗಾರಿಕೆಗಳ ಕಟ್ಟಡ ಕಟ್ಟುವವರಿಗೆ ಹಿಂದೆ 3-4 ತಿಂಗಳ ಅಲೆದಾಡುತ್ತಿದ್ದರು. ಈಗ ಹಾಗಲ್ಲ. 7 ದಿನದೊಳಗೆ ಅವರು ಮನೆ ಕಟ್ಟಲು ಜಮೀನನ್ನು ಬದಲಾವಣೆ ಮಾಡಿ, ಮನೆ ಅಥವಾ ಕೈಗಾರಿಕೆ ಕಟ್ಟಡ ಕಟ್ಟಲು ಯತ್ನಿಸುತ್ತಿದ್ದೇವೆ. ಇವೆಲ್ಲವೂಗಳ ಬಗ್ಗೆ ವಿಪಕ್ಷಗಳು ಮಾತನಾಡುವುದೇ ಇಲ್ಲ. ಎರಡು ವಿಧಾನಸಭಾ ಅಧಿವೇಶನದಲ್ಲಿ ಇಂತಹ ಒಂದೇ ಒಂದು ಪ್ರಶ್ನೆ, ಆರೋಪ ನಮ್ಮ ಮೇಲೆ ಬಂದಿಲ್ಲ. ಅದರ ಹಿಂದಿನ ಅಧಿವೇಶನಗಳಲ್ಲಿ ದಿನನಿತ್ಯ ಪಿಂಚಣಿ ಬಗ್ಗೆಯೇ ವಿಪಕ್ಷಗಳು ಟೀಕೆ ಮಾಡುತ್ತಿದ್ದರು ಎಂದರು.

ಇದೇ ಸಂದರ್ಭದಲ್ಲಿ ಸಾಮಾಜಿಕ ಭದ್ರತಾ ಯೋಜನೆಯಡಿ ಒಟ್ಟು 232 ಮಂದಿಗೆ ವಿವಿಧ ಪಿಂಚಣಿಗಳ ಆದೇಶ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮೈಸೂರು ತಹಶೀಲ್ದಾರ್ ಆರ್.ಗಿರೀಶ್, ಕೃಷ್ಣರಾಜ ಕ್ಷೇತ್ರ ಬಿಜೆಪಿ ಅಧ್ಯಕ್ಷ ಎಂ.ವಡಿವೇಲು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ವಿದ್ಯಾರಣ್ಯಪುರಂ ಶ್ರೀ ರಾಮಲಿಂಗೇಶ್ವರ ಉದ್ಯಾನದಲ್ಲಿ 'ಮೋದಿ ಯುಗ್ ಉತ್ಸವ' ಕಾರ್ಯಕ್ರಮದ 4ನೇ ದಿನದ ಕಾರ್ಯಕ್ರಮಕ್ಕೆ ಕಂದಾಯ ಸಚಿವ ಆರ್.ಅಶೋಕ್ ಚಾಲನೆ ನೀಡಿದರು. ಚಿತ್ರದಲ್ಲಿ ಶಾಸಕ ಎಸ್.ಎ.ರಾಮದಾಸ್, ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಶಾಸಕ ಎಂ.ಕೃಷ್ಣಪ್ಪ, ಬಿಜೆಪಿ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು ಇನ್ನಿತರರನ್ನು ಕಾಣಬಹುದು.

> ಮೋದಿ ಯುಗ್ ಉತ್ಸವ ಸಂದರ್ಭದಲ್ಲಿ ಪ್ರತಿ ದಿನ 2,500 ಫಲಾನುಭವಿಗಳಂತೆ 9 ದಿನದಲ್ಲಿ 50 ಸಾವಿರ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ತಲುಪಿಸಲಾಗುತ್ತಿದೆ.
> - ಎಸ್.ಎ.ರಾಮದಾಸ್, ಶಾಸಕ

> ಒಕ್ಕಲಿಗರ ಅಭಿವೃದ್ಧಿ ನಿಗಮವು ಸ್ವಯಂ ಉದ್ಯೋಗಕ್ಕೆ ಅವಕಾಶ ಕಲ್ಪಿಸಿದೆ. ಹಾಸ್ಟೆಲ್‌ಗಳಿಗೆ 50 ಕೋಟಿ ಹಣ ತೆಗೆದಿಟ್ಟಿದ್ದೇವೆ. ಎಲ್ಲಾ ಸೌಲಭ್ಯ ಬಳಸಿಕೊಳ್ಳಿ, ಯಾರೂ ಮೀಟರ್ ಬಡ್ಡಿಗೆ ತಗುಲಿ ಹಾಕಿಕೊಳ್ಳದೆ ಸಾಲ ಮರುಪಾವತಿ ಮಾಡಿ ಅಭಿವೃದ್ಧಿ ಹೊಂದಿ.
> - ಶಾಸಕ ಎಂ.ಕೃಷ್ಣಪ್ಪ, ಅಧ್ಯಕ್ಷ, ಒಕ್ಕಲಿಗರ ಅಭಿವೃದ್ಧಿ ನಿಗಮ

ಬಿಜೆಪಿ ಬಂದ್ರೆ ಮಳೆಗಾಲ... ಕಾಂಗ್ರೆಸ್ ಬಂದ್ರೆ ಬರಗಾಲ

ರಾಜ್ಯದಲ್ಲಿ ನಮ್ಮ ಸರ್ಕಾರ ಬಂದಾಗಿನಿಂದ ರಾಜ್ಯದಲ್ಲಿ ಮಳೆಯೋ ಮಳೆ. ಮಳೆಯಿಂದ ಜಲಾಶಯಗಳು ಭರ್ತಿಯಾಗಿವೆ. ಕೆರೆ ಕಟ್ಟೆಗಳು ತುಂಬಿ ಕೋಡಿ ಬಿದ್ದಿವೆ. ಬಿಜೆಪಿ ಸರ್ಕಾರ ಬಂದಾಗಲೆಲ್ಲಾ ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದೆ. ಹಾಗಾಗಿ 'ಬಿಜೆಪಿ ಬಂದರೆ ಮಳೆಗಾಲ, ಕಾಂಗ್ರೆಸ್ ಬಂದರೆ ಬರಗಾಲ' ಎಂಬುದಾಗಿ ರಾಜ್ಯದ ಜನರೇ ಹೇಳುತ್ತಿದ್ದಾರೆ. ಭಗವಂತನಿಗೆ ನಮ್ಮ ಮೇಲೆ ಕರುಣೆ, ಆಶೀರ್ವಾದ ಎಲ್ಲವೂ ಇದೆ ಎಂದು ಕಂದಾಯ ಸಚಿವರು ಹೇಳಿದರು.

ಮಳೆಯಿಂದ ಸಾವಿಗೀಡಾದವರಿಗೆ, ಮನೆ ಕಳೆದುಕೊಂಡವರಿಗೆ ಹಾಗೂ ಮನೆಗಳಿಗೆ ನೀರು ನುಗ್ಗಿ ತೊಂದರೆ ಉಂಟಾದವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ನಮ್ಮ ಸರ್ಕಾರ ಸಕಾಲದಲ್ಲಿ ಪರಿಹಾರ ನೀಡಿ, ನೊಂದವರಿಗೆ ಸ್ಪಂದಿಸುವ ಕೆಲಸ ಮಾಡಿದೆ ಎಂದರು.

ಕಳಪೆ ಕಾಮಗಾರಿಯಿಂದ ವ್ಯರ್ಥವಾಗುತ್ತಿರುವ ಸಾರ್ವಜನಿಕರ ಹಣ; ಆರೋಪ

ಗುಂಡಿ ಬಿದ್ದ ರಸ್ತೆಗಳ ದುರಸ್ತಿಗೆ ಆಗ್ರಹಿಸಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲಿ ಪ್ರತಿಭಟನೆ



ಮೈಸೂರು, ಸೆ.20(ಆರ್‌ಕೆಬಿ)- ಸಾಂಸ್ಕೃತಿಕ ನಗರಿ ಮೈಸೂರಿನ ಬಹುತೇಕ ರಸ್ತೆಗಳು ಗುಂಡಿ ಬಿದ್ದು ಜನರು ಸರ್ಕಾರಕ್ಕೆ ಹಿಡಿಶಾಪ ಹಾಕುತ್ತಿದ್ದರೂ, ಬಿಜೆಪಿ ಸರ್ಕಾರದ ಸಚಿವರು, ಶಾಸಕರು ಕೇವಲ ಮೋದಿ ಜಪ ಮಾಡುತ್ತಾ ಕಾಲ ಕಳೆಯುತ್ತಿದ್ದಾರೆ ಎಂದು ಆರೋಪಿಸಿ, ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಮಂಗಳವಾರ ಮೈಸೂರಿನ ಸಿದ್ದಾರ್ಥನಗರ ವಿನಯ ಮಾರ್ಗ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು.

ಗುಂಡಿ ಬಿದ್ದು ಸಾರ್ವಜನಿಕರು ಓಡಾಡಲಾಗದೆ ತೊಂದರೆ ಅನುಭವಿಸುತ್ತಿದ್ದು, ಈಗಾಗಲೇ ಇದರ ಬಗ್ಗೆ ಹಲವು ಬಾರಿ ಪ್ರತಿಭಟನೆಗಳನ್ನು ನಡೆಸಿದ್ದರೂ, ಬಿಜೆಪಿ ಸಚಿವರು, ಶಾಸಕರು ಕೇವಲ ಮೋದಿ ಜಪ ಮಾಡುತ್ತಾ ಜನರನ್ನು ಸಂಪೂರ್ಣ ಮರೆತಿದ್ದಾರೆ ಎಂದು ದೂರಿದರು. ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಿನಯ ಮಾರ್ಗದಲ್ಲಿ ಗುಂಡಿ ಬಿದ್ದ ರಸ್ತೆ ದುರಸ್ತಿಗೆ ಆಗ್ರಹಿಸಿ ಮೂರು ತಿಂಗಳ ಹಿಂದಷ್ಟೇ ಪ್ರತಿಭಟನೆ ನಡೆಸಲಾಗಿತ್ತು ಆದರೆ ತರಾತುರಿಯಲ್ಲಿ ರಸ್ತೆ ದುರಸ್ತಿ ಮಾಡಿದರು. ಇನ್ನೂ ಮೂರು ತಿಂಗಳು ಕಳೆದಿಲ್ಲ. ಆಗಲೇ ರಸ್ತೆ ಮತ್ತೆ ಕಿತ್ತು ಗುಂಡಿಮಯವಾಗಿದೆ. ನಾಲ್ಕು ಕೋಟಿ ರೂ. ಖರ್ಚು ಮಾಡಿ ನಿರ್ಮಿಸಿದ ರಸ್ತೆ ಹಾಳಾಗಿದೆ ಎಂದರೆ ಸರ್ಕಾರದ ಕಾಮಗಾರಿಗಳ ಬಗ್ಗೆ ಜನರಿಗೆ ನಂಬಿಕೆಯೇ ಇಲ್ಲದಂತಾಗಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಈ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ನಾಲ್ಕು ವರ್ಷದಿಂದ ಸುಮ್ಮನಿದ್ದು, ಈಗ ಚುನಾವಣೆ ಸಮೀಪಿಸುತ್ತಿದ್ದಂತೆ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಕಳಪೆ ಕಾಮಗಾರಿ ನಡೆಸುತ್ತಿದ್ದು, ಮತಗಳಿಕೆ ಉದ್ದೇಶದ ಇಂತಹ ಕಳಪೆ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಶೇ.40 ಕಮಿಷನ್‌ನ ಈ ರಸ್ತೆ ಕಾಮಗಾರಿಯಿಂದ ಜನರ ಹಣ ನಷ್ಟವಾಗುತ್ತಿದೆಯೇ ಹೊರತು ಜನರಿಗೆ ನೆಮ್ಮದಿ ಇಲ್ಲದಂತಾಗಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಉಸ್ತುವಾರಿ ಭಾಸ್ಕರ್ ಎಲ್.ಗೌಡ, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ಮಾಜಿ ಉಪಮೇಯರ್ ಶ್ರೀಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಪ್ರದೀಪ್‌ಕುಮಾರ್, ಪ್ರತಿಷ್ಠಾ ಪ್ರಸಾದ್, ನವೀನ್, ಅಪ್ಪುಗೌಡ, ಭವ್ಯ, ಗುಣ ಶೇಖರ್, ಲೀಲಾ ಪಂಪಾಪತಿ, ನಂದನ್, ರಾಜೇಶ್ವರಿ, ರವಿ, ಸೋಮು, ಯೋಗೇಶ್ ಉಪ್ಪಾರ್, ಮಣಿಕಂಠ, ಕಮಲ, ಗೋಪಿನಾಥ್, ಮಹದೇವಶೆಟ್ಟಿ, ಲೋಕೇಶ್ ಮಾದಾಪುರ ಇನ್ನಿತರರು ಭಾಗವಹಿಸಿದ್ದರು.

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ 107ನೇ ಜಯಂತಿ ಆಚರಣೆ

ಮೈಸೂರು, ಸೆ.20- ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿಯನ್ನು ಆಚರಿಸಲಾಯಿತು.



ಸಂಗೀತ ಶಿಕ್ಷಕರಾದ ಶ್ರೀಮತಿ ಸುಮಂಗಲ ಜಂಗಮ ಶೆಟ್ಟಿ ಮತ್ತು ವಿದ್ಯಾರ್ಥಿ ವೃಂದದವರು ಪ್ರಾರ್ಥನೆ ಸಲ್ಲಿಸಿದರು. ಸಹ ಶಿಕ್ಷಕರಾದ ಶಿವಸ್ವಾಮಿ ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯ ಎನ್.ಪಿ ಸತೀಶ್‌ರವರು ಪ್ರಾಸ್ತಾವಿಕ ನುಡಿಯಲ್ಲಿ 'ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವದ ಆಶಯ, ಪೂಜ್ಯರ ಸೇವಾ ತತ್ಪರತೆ, ಕಾಯಕ ಮತ್ತು ದಾಸೋಹಕ್ಕೆ ನೀಡುತ್ತಿದ್ದ ಮಹತ್ವವನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಪಿ ಮಣಿ, 'ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ದೇಶದ ಕಷ್ಟ ಮತ್ತು ಅನಿಷ್ಟಗಳನ್ನು ತೊಡೆದು ಹಾಕಲು ಶಿಕ್ಷಣವೇ ಆಯುಧ ಎಂದು ಭಾವಿಸಿ ಶಿಕ್ಷಣ ಸಂಸ್ಥೆಗಳಿಗೆ ಭದ್ರ ಬುನಾದಿ ಹಾಕಿದರು. ಪೂಜ್ಯರು ತಾವು ಹಸಿವಿನಿಂದಿದ್ದರೂ, ಬೇರೆಯವರಿಗೆ ಅನ್ನದಾಸೋಹ, ಅಕ್ಷರದಾಸೋಹ ನೀಡಿದರು. ಬಡ ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಿಕೊಟ್ಟು ಆಶ್ರಯದಾತರಾದರು. ಶ್ರೀಗಳ ಜನನ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಎರಡೂ ಒಂದೇ ವರ್ಷದಲ್ಲಿ ಘಟಿಸಿದ್ದು, ವಿಶ್ವವಿದ್ಯಾನಿಲಯವನ್ನು ಮೀರಿ ಬೆಳೆದು ನಿಂತವರು ನಮ್ಮ ರಾಜೇಂದ್ರ ಶ್ರೀಗಳು' ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಮೇಟಗಳ್ಳಿ ಸಬ್ ಇನ್ಸ್‌ಪೆಕ್ಟರ್ ಕು. ಆರ್.ಜೋತ್ಸ್ನಾ ರಾಜ್, 'ಶಿಕ್ಷಣದೊಡನೆ ನೈತಿಕ ಶಿಕ್ಷಣ, ಸಂಸ್ಕಾರ, ಸಂಸ್ಕೃತಿಗಳನ್ನು ಮಕ್ಕಳು ರೂಢಿಸಿಕೊಳ್ಳಬೇಕು. ಕಾನೂನನ್ನು ಪಾಲಿಸಬೇಕು ಮತ್ತು ಅದರ ಅರಿವಿರಬೇಕು ಆಗ ಮಾತ್ರ ಅಪರಾಧಗಳನ್ನು ತಪ್ಪಿಸಲು ಸಾಧ್ಯ' ಎಂದರು.

2021-22ನೇ ಸಾಲಿನ ಎಸ್‌ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಬಹುಮಾನವನ್ನು ವಿತರಿಸಲಾಯಿತು. ಪೂಜ್ಯರ ಜಯಂತಿ ನಿಮಿತ್ತ ಪೋಷಕರಿಗೆ ಮತ್ತು ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು ಮತ್ತು ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸೆ. 24ರಂದು ಗುಣಶೀಲ ಫರ್ಟಿಲಿಟಿ ಸೆಂಟರ್‌ನಿಂದ ಉಚಿತ ತಪಾಸಣೆ ಶಿಬಿರ

ಬೆಂಗಳೂರು, ಸೆ. 20- ಬೆಂಗಳೂರಿನ ಬಸವನಗುಡಿಯ ಗುಣಶೀಲ ಫರ್ಟಿಲಿಟಿ ಸೆಂಟರ್ ವತಿಯಿಂದ ಸೆ. 24 (ಶನಿವಾರ) ರಂದು ಸಂತಾನಹೀನತೆ (ಬಂಜೆತನ) ಸಮಸ್ಯೆ ಹೊಂದಿರುವ ದಂಪತಿಗೆ, ಪದೇಪದೆ ಗರ್ಭಪಾತ ತೊಂದರೆ, ಐ.ವಿ.ಎಫ್ ವೈಫಲ್ಯ ಎದುರಿಸುತ್ತಿರುವ ಮಹಿಳೆಯರಿಗೆ ಉಚಿತ ಸ್ಕ್ಯಾನಿಂಗ್ ಮತ್ತು ತಪಾಸಣೆ ಶಿಬಿರವನ್ನು ಏರ್ಪಡಿಸಿದೆ, ತಪಾಸಣೆ ಶಿಬಿರ ಬೆಳಗ್ಗೆ 8-30 ರಿಂದ ಮಧ್ಯಾಹ್ನ 2.30 ರವರೆಗೆ ನಡೆಯಲಿದೆ, ಸಂತಾನಫಲ ತಜ್ಞೆ ಡಾ. ದೇವಿಕಾ ಗುಣಶೀಲ ನೇತೃತ್ವದ ವೈದ್ಯರ ತಂಡ ಉಚಿತ ತಪಾಸಣೆ ನಡೆಸಲಿದೆ.

"ಮಹಿಳೆಯರ ಗರ್ಭಾಶಯ ಕಾಯಿಲೆಗಳು, ಫೈಬ್ರಾಯಿಡ್, ಪಿ.ಸಿ.ಓ.ಎಸ್., ಎಂಡೋಮೆಟ್ರಿಯೋಸಿಸ್, ಪುರುಷರಲ್ಲಿನ ದೋಷ ಮುಂತಾದ ಕಾರಣಗಳಿಂದಲೂ ಸಂತಾನಹೀನತೆ ಉಂಟಾಗಲಿದ್ದು, ಇದರ ತಪಾಸಣೆ ಮತ್ತು ಸಲಹೆಗಳನ್ನು ಶಿಬಿರದಲ್ಲಿ ನೀಡಲಾಗುತ್ತದೆ. ಮಕ್ಕಳಿಲ್ಲದ ದಂಪತಿಗಳು ಉಚಿತ ತಪಾಸಣಾ ಶಿಬಿರದ ಪ್ರಯೋಜನ ಪಡೆಯಬಹುದು ಎಂದು ಡಾ. ದೇವಿಕಾ ಗುಣಶೀಲ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ತಪಾಸಣೆ ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವ ದಂಪತಿ ತಮ್ಮ ಹೆಸರನ್ನು- ಗುಣಶೀಲ ಫರ್ಟಿಲಿಟಿ ಸೆಂಟರ್, ನಂ.1, ದಿವಾನ್ ಮಾಧವ ರಾವ್ ರಸ್ತೆ ಎಮ್.ಎನ್.ಕೃಷ್ಣರಾವ್ ಪಾರ್ಕ್ ಎದುರು, ಬಸವನಗುಡಿ ಬೆಂಗಳೂರು, ದೂರವಾಣಿ: 080-46462600/ 26673588 ಟೋಲ್‌ಫ್ರೀ ನಂಬರ್: 18004250524 ಇಲ್ಲಿ ನೋಂದಾಯಿಸಬಹುದು.

ಸೆ.24ರಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಸಮಾವೇಶ

ಮೈಸೂರು,ಸೆ.20(ಪಿಎಂ)- ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠಾವಳೆ) ವತಿಯಿಂದ ಸೆ.24ರಂದು ಜಿಲ್ಲಾ ಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಪಾರ್ಟಿಯ ರಾಜ್ಯಾಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಸೆ.24ಕ್ಕೆ ಪೂನಾ ಒಪ್ಪಂದ ಗತಿಸಿ 90 ವರ್ಷಗಳು ಪೂರೈಸುತ್ತಿವೆ. ಅಂದು ದಮನಿತ ಜನಾಂಗಗಳು ಎಂದು ಕರೆಯಲ್ಪಡುತ್ತಿದ್ದ ಇಂದಿನ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ರಾಜ್ಯಾಧಿಕಾರದ ಹಕ್ಕಿನ ವಂಚನೆಗೆ ಇದೇ ಪೂನಾ ಒಪ್ಪಂದ ಕಾರಣವಾಯಿತು ಎಂದರು.



ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ರಾಜಕೀಯ ಹಕ್ಕುಗಳನ್ನು ಹತ್ತಿಕ್ಕಿದ ಕರಾಳ ಅಧ್ಯಾಯ ಈ ಪೂನಾ ಒಪ್ಪಂದ. ಸ್ವತಂತ್ರ ಭಾರತದಲ್ಲಿ ರಾಜಕೀಯ ಮೀಸಲಾತಿ ಸೂತ್ರವು ಅನುಷ್ಠಾನಗೊಂಡು ಇಷ್ಟು ದಶಕಗಳೇ ಕಳೆದರೂ ದಲಿತ ಸಮುದಾಯವು ರಾಜಕೀಯ ಗುಲಾಮಗಿರಿಯಿಂದ ಈವರೆಗೆ ಹೊರಬರಲಾಗಲಿಲ್ಲ. ಇಂತಹ ರಾಜಕೀಯ ಅಧೋಗತಿಗೆ ಮೂಲ ಕಾರಣ, ಪ್ರಸ್ತುತದ ಸವಾಲು ಹಾಗೂ ಮುಂದಿನ ರಾಜಕೀಯ ಹೋರಾಟಗಳ ಬಗ್ಗೆ ಚರ್ಚಿಸಲು ಈ ಜಿಲ್ಲಾ ಮಟ್ಟದ ಸಮಾವೇಶ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಮೈಸೂರಿನ ಎಲ್‌ಐಸಿ ವೃತ್ತದ ಸಮೀಪದ ಕ್ಯಾಥೋಲಿಕ್ ಸೆಂಟರ್‌ನಲ್ಲಿ ಅಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಸಮಾವೇಶ ನಡೆಯಲಿದ್ದು, ಮಧ್ಯಾಹ್ನ 12ಕ್ಕೆ ಕೇಂದ್ರ ಸಚಿವರೂ ಆದ ಪಾರ್ಟಿಯ ರಾಷ್ಟ್ರೀಯ ಅಧ್ಯಕ್ಷ ರಾಂದಾಸ್ ಅಠಾವಳೆ ಸಮಾವೇಶ ಉದ್ಘಾಟಿಸಲಿದ್ದಾರೆ. ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಮೈಸೂರು ವಿಭಾಗದ ಪಕ್ಷದ ಮುಖಂಡರು, ರಾಜ್ಯ ಸಮಿತಿ ಸದಸ್ಯರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದರು. ಪಕ್ಷದ ಜಿಲ್ಲಾಧ್ಯಕ್ಷ ಶಿವಮಾದು, ಪಕ್ಷದ ಮುಖಂಡರಾದ ಆರ್.ಪಿ.ಐ.ಸತೀಶ್, ಡಾ.ಗೋವಿಂದಯ್ಯ, ವಿನೋದ್, ದಲಿತ ಸೇನೆಯ ಬನಶಂಕರಿ ನಾಗು ಮತ್ತಿತರರು ಗೋಷ್ಠಿಯಲ್ಲಿದ್ದರು.


ನಾಳೆಯಿಂದ 24ರವರೆಗೆ ಬ್ಯಾಡ್ಮಿಂಟನ್ ಪಂದ್ಯಾವಳಿ

ವಿಶೇಷಚೇತನರ ಸಹಾಯಾರ್ಥ ರೋಟರಿ ಕ್ಲಬ್ ಆಫ್ ಮೈಸೂರು ಸೌತ್-ಈಸ್ಟ್‌ನಿಂದ ಆಯೋಜನೆ

ಮೈಸೂರು,ಸೆ.20(ಪಿಎಂ)- ರೋಟರಿ ಕ್ಲಬ್ ಆಫ್ ಮೈಸೂರು ಸೌತ್-ಈಸ್ಟ್ ವತಿಯಿಂದ ವಿಶೇಷಚೇತನರ ಸಹಾಯಾರ್ಥ ಸೆ.22ರಿಂದ 24ರವರೆಗೆ ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕ್ಲಬ್‌ನ ಅಧ್ಯಕ್ಷ ಎಂ.ಮೋಹನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಸಿ ಬಡಾವಣೆಯ ಫ್ರೇಂಡ್ಸ್ ಸ್ಪೋರ್ಟ್ ಜೋನ್‌ನಲ್ಲಿ ಪಂದ್ಯಾವಳಿ ನಡೆಯಲಿದೆ. ರೊಟೇರಿಯನ್ಸ್ ಹಾಗೂ ರೊಟೇರಿಯನ್ಸ್ ಹೊರತಾದವರು ಪಂದ್ಯಾವಳಿಯಲ್ಲಿ ಪಾಲ್ಗೊಳ್ಳಬಹುದು. ಈ ಎರಡರಲ್ಲೂ ವಿವಿಧ ವಯೋಮಾನದಡಿ ಪ್ರತ್ಯೇಕ 10 ವಿಭಾಗಗಳಲ್ಲಿ ಪಂದ್ಯಾವಳಿ ನಡೆಯಲಿದೆ ಎಂದರು.

ಪಂದ್ಯಾವಳಿಯಲ್ಲಿ ದೇಶಾದ್ಯಂತ ಇರುವ ರೋಟರಿ ಸದಸ್ಯರು ಭಾಗವಹಿಸಲು ಅವಕಾಶವಿದೆ. ರೊಟೇರಿಯನ್ ಹೊರತಾದವರ ವಿಭಾಗದಲ್ಲಿ ರಾಜ್ಯದವರು ಮಾತ್ರ ಪಾಲ್ಗೊಳ್ಳಲು ಅವಕಾಶವಿದೆ. ಆಸಕ್ತರು ಸೆ.20ರೊಳಗೆ ಸಾವಿರ ರೂ. ಪ್ರವೇಶ ಶುಲ್ಕದೊಂದಿಗೆ ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದರು.



ಪಂದ್ಯಾವಳಿ ಮೂಲಕ ಸಂಗ್ರಹಿಸಿದ ನಿಧಿಯನ್ನು ಕ್ಲಬ್‌ನ ಸಮುದಾಯ ಸೇವಾ ಯೋಜನೆಯಡಿ ವಿಶೇಷಚೇತರ ಶ್ರೇಯೋಭಿವೃದ್ಧಿಗೆ ಬಳಸಿಕೊಳ್ಳಲಾಗುವುದು. ಫ್ರೇಂಡ್ಸ್ ಸ್ಪೋರ್ಟ್ ಜೋನ್‌ನಲ್ಲಿ ಸೆ.22ರಂದು ಬೆಳಗ್ಗೆ 8.30ಕ್ಕೆ ರೋಟರಿಯ ಆರ್‌ಐ ಡಿಸ್ಟ್ರಿಕ್ 3181ರ ಜಿಲ್ಲಾ ಗೌರ್ನರ್ ಪ್ರಕಾಶ್ ಕಾರಂತ್ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ ಎಂದರು.

ಮೈಸೂರಿನ ನಜರ್‌ಬಾದಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ಸೆ.24ರಂದು 6ಕ್ಕೆ ಬಹುಮಾನ ವಿತರಣಾ ಸಮಾರಂಭ ನಡೆಯಲಿದೆ. ಈ ವೇಳೆ ಆರ್‌ಐ ಡಿಸ್ಟ್ರಿಕ್ 3181ರ ಚುನಾಯಿತ ಜಿಲ್ಲಾ ಗೌರ್ನರ್ ಹೆಚ್.ಆರ್.ಕೇಶವ್ ಬಹುಮಾನ ವಿತರಣೆ ಮಾಡಲಿದ್ದಾರೆ. ಪಂದ್ಯಾವಳಿಯ ಹೆಚ್ಚಿನ ಮಾಹಿತಿಗೆ ಮೊ.ಸಂ. 99802 70076 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಆರ್‌ಐ ಡಿಸ್ಟ್ರಿಕ್ 3181ರ ವಲಯ 8ರ ಸಹಾಯಕ ಗೌರ್ನರ್ ಎಸ್.ವಾಸುದೇವನ್, ವಲಯ ಸೇನಾನಿ ಆರ್.ರವೀಂದ್ರ, ಪಂದ್ಯಾವಳಿ ಕಾರ್ಯದರ್ಶಿ ವೈ.ವಿ.ಮುರಳೀಧರ್ ಗೋಷ್ಠಿಯಲ್ಲಿದ್ದರು.

ನಾಳೆಯಿಂದ ಚಲನಚಿತ್ರ ನಿರ್ಮಾಣ ಕಾರ್ಯಾಗಾರ

ಮೈಸೂರು, ಸೆ.20- ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದಸರಾ ಚಲನಚಿತ್ರೋತ್ಸವ ಉಪಸಮಿತಿಯ ವತಿಯಿಂದ ಚಿತ್ರ ನಿರ್ಮಾಣ ಪೂರ್ವ ತಯಾರಿ ಕುರಿತಂತೆ ಚಲನಚಿತ್ರ ನಿರ್ಮಾಣ ಕಾರ್ಯಾಗಾರವನ್ನು ಸೆಪ್ಟೆಂಬರ್ 22, 23 ಹಾಗೂ 24ರಂದು 3 ದಿನಗಳ ಮಾನಸ ಗಂಗೋತ್ರಿಯ ಆವರಣದಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.


ಕಾರ್ಯಾಗಾರವನ್ನು ಸೆಪ್ಟೆಂಬರ್ 22ರಂದು ಬೆಳಗ್ಗೆ 10 ಗಂಟೆಗೆ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಚಲನಚಿತ್ರ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಲಿದ್ದು, ಸಂಪನ್ಮೂಲ ವ್ಯಕ್ತಿಗಳಾಗಿ ನಿರ್ದೇಶಕರಾದ ಚಂಪಾಶೆಟ್ಟಿ, ಕೋಡ್ಲು ರಾಮಕೃಷ್ಣ, ಪವನ್ ಕುಮಾರ್, ಪನ್ನಗಾಭರಣ, ಅರವಿಂದ ಕೌಶಿಕ್, ಶಂಕರ್ ಎನ್.ಸಂಡೂರು, ಮಂಸೋರೆ ಕಾರ್ಯಾಗಾರವನ್ನು ನಡೆಸಿಕೊಡಲಿದ್ದಾರೆ.

ಕಾರ್ಯಾಗಾರದಲ್ಲಿ ಭಾಗವಹಿಸುವವರು https://bit.ly/3dxD22 ಲಿಂಕ್ ಮೂಲಕ ಕಾಣಬರುವ ಗೂಗಲ್ ಅರ್ಜಿ ನಮೂನೆಯಲ್ಲಿ ಎಲ್ಲಾ ವಿವರಗಳನ್ನು ಭರ್ತಿ ಮಾಡಿ, ಕಾರ್ಯಾಗಾರದ ಶುಲ್ಕ 300 ರೂ. ಪಾವತಿಸಿ, ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಮೊದಲು ನೋಂದಣಿ ಮಾಡುವ 200 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿದ್ದು, ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು.

ಚಲನಚಿತ್ರ ನಿರ್ಮಾಣ ಕಾರ್ಯಾಗಾರ ಪ್ರವೇಶಕ್ಕಾಗಿ ನೋಂದಣಿ ಈಗಾಗಲೇ ಪ್ರಾರಂಭವಾಗಿದ್ದು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಆಫ್‌ಲೈನ್ ಮೂಲಕ ಮಾಡಲಾಗುತ್ತಿದೆ. ಆಫ್‌ಲೈನ್ ನೋಂದಣಿಗೆ ಯಾವುದಾದರೂ ಅಧಿಕೃತ ಗುರುತಿನ ಚೀಟಿಯ ಜೆರಾಕ್ಸ್ ಪ್ರತಿಯನ್ನು ನೀಡಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯುವ ಚೇತನರ ಮೂಲಕ ಕನ್ನಡ ಕಂಪು ಚೆಲ್ಲಿದ 'ಯುವ ಸಂಭ್ರಮ'


ಮಹಾರಾಜ ಕಾಲೇಜು ವಿದ್ಯಾರ್ಥಿಗಳ ನೃತ್ಯ ಪ್ರದರ್ಶನ


ರೈತರ ಸವಾಲಿನ ಬದುಕು; ಸಂಕಷ್ಟದ ಸರಮಾಲೆ ಅನಾವರಣ


ಸಿಎಫ್‌ಟಿಆರ್‌ಐ ಶಾಲಾ ಮಕ್ಕಳ ಬಾಹುಬಲಿ ಸಾಹಸ ನೃತ್ಯ ಪ್ರದರ್ಶನ

ಮೈಸೂರು, ಸೆ.20(ಎಂಕೆ)– ಸುಂದರ ಮುಸ್ಸಂಜೆಯ ಸಿಂಗಾರಗೊಂಡ ವೇದಿಕೆಯಲ್ಲಿ ಮೊಳಗಿದ ಕನ್ನಡ ಡಿಂಡಿಮ... ಕನ್ನಡ ಕೇವಲ ಭಾಷೆಯಲ್ಲ ಅದೊಂದು ಭಾವ.

ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ನಡೆಯುತ್ತಿರುವ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದಲ್ಲಿ ಕನ್ನಡ ಕೇವಲ ಭಾಷೆಯಲ್ಲ ಅದೊಂದು ಭಾವ ಎಂದು ಸಾರಲಾಯಿತು. ಕೆಂಪು–ಹಳದಿ ಬಣ್ಣದ ಬಾವುಟಗಳೊಂದಿಗೆ ಅಮೋಘ ನೃತ್ಯ ಪ್ರದರ್ಶನ ನೀಡಿದ ಕಾಲೇಜು ವಿದ್ಯಾರ್ಥಿಗಳು ಕನ್ನಡದ ಹಿರಿಮೆ–ಗರಿಮೆಯನ್ನು ತಿಳಿಸಿಕೊಟ್ಟರು.

ಪಿರಿಯಾಪಟ್ಟಣದ ಸರ್ಕಾರಿ ಡಿಪಿಬಿಎಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ವೇದಿಕೆಯ ಮೇಲೆ ಕನ್ನಡ ಕಂಪು ಹರಿಸಿದರೆ, ಮೈಸೂರಿನ ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಕಾಲೇಜು ತಂಡ ವಿದ್ಯಾರ್ಥಿಗಳು ನವಿಲು ಬಣ್ಣದ ಉಡುಪುಗಳನ್ನು ಧರಿಸಿ, ಕಂಗೊಳಿಸುತ್ತಲೇ ಕನ್ನಡ ಭಾಷೆ ಮಾತ್ರವಲ್ಲ ಅದೊಂದು ಭಾವ. 'ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ ಕನ್ನಡ ನುಡಿ' ಎನ್ನುತ್ತಾ ಕನ್ನಡದ ಮಹತ್ವ ಸಾರಿದರು.

ಮೈಸೂರಿನ ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಕನ್ನಡ ಭಾಷೆಯ ಉಳಿವಿಗೆ ಶ್ರಮಿಸಿದ ವಿಜಯನಗರ ಸಾಮ್ರಾಜ್ಯ, ಹೊಯ್ಸಳ ಸಾಮ್ರಾಜ್ಯ ಹಾಗೂ ದುರ್ಗದ ಮದಕರಿ ನಾಯಕ ಹಾಗೂ ವೀರ ವನಿತೆ ಓಬವ್ವನ ಕಥೆಯನ್ನು ನೃತ್ಯಾಭಿನಯದ ಮೂಲಕ ವೈಭವಯುತವಾಗಿ ಪ್ರದರ್ಶನ ನೀಡಿದುದಲ್ಲದೆ ಕನ್ನಡ ನಾಡಿನ ಇತಿಹಾಸವನ್ನು ಪ್ರಸ್ತುತಪಡಿಸಿದರು. ಹಾಗೆಯೇ ಬೆಟ್ಟದಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಕನ್ನಡ ಝೇಂಕಾರ ಮೊಳಗಿಸಿದರು.

'ಕರುನಾಡೇ ಕೈ ಚಾಚಿದೆ ನೋಡೆ', 'ಜೀವ ಕನ್ನಡ, ದೇಹ ಕನ್ನಡ', 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎಂಬಿತ್ಯಾದಿ ಕನ್ನಡ ನಾಡು–ನುಡಿ ಹಾಡುಗಳಿಗೆ ಕುಣಿದು ಕುಪ್ಪಳಿಸಿ 'ಯುವ ಸಂಭ್ರಮ' ವೇದಿಕೆಯನ್ನು ಕನ್ನಡಮಯವಾಗಿಸಿದರು. ಈ ವೇಳೆ ಕನ್ನಡ, ಕನ್ನಡ ಕಸ್ತೂರಿ ಕನ್ನಡ ಎಂದ ಘೋಷಣೆ ಯುವ ಸಮೂಹದ ನಡುವೆ ಮೊಳಗಿತ್ತು.

ಕೊಡವ ಸಂಗೀತಕ್ಕೆ ಹೆಜ್ಜೆಹಾಕಿದ ನಟಿ ಹರ್ಷಿಕಾ ಪೂಣಚ್ಚ, ನಟ ಎಸ್.ನಾಗೇಂದ್ರ ಪ್ರಸಾದ್...

ಕೊಡಗಿನ ಸಾಂಪ್ರದಾಯಿಕ ಸೀರೆಯುಟ್ಟು 'ಯುವ ಸಂಭ್ರಮ'ದಲ್ಲಿ ಮಿಂಚು ಹರಿಸಿದ ನಟಿ ಹರ್ಷಿಕಾ ಪೂಣಚ್ಚ ಕೊಡವ ಸಂಗೀತಕ್ಕೆ ಹೆಜ್ಜೆ ಹಾಕಿ ಎಲ್ಲರ ಗಮನ ಸೆಳೆದರು. ಇವರಿಗೆ ನಟ, ನಿರ್ದೇಶಕ ಎಸ್.ನಾಗೇಂದ್ರ ಪ್ರಸಾದ್ ಸಾಥ್ ನೀಡಿದರು. ಬಳಿಕ ಮಾತನಾಡಿ, ವಿಶ್ವದ ಯಾವ ಮೂಲೆಗೆ ಹೋದರೂ ಮೈಸೂರಿನಂತೆ ಎಲ್ಲಿಯೂ ಇಲ್ಲ. 'ಯುವ ಸಂಭ್ರಮ'ಕ್ಕೆ ಬರಬೇಕು ಎನ್ನುವ ಆಸೆ ಇಂದು ಈಡೇರಿದೆ ಎಂದು ಸಂತಸ ವ್ಯಕ್ತಪಡಿಸಿದರು.

ನಟ ಎಸ್.ನಾಗೇಂದ್ರಪ್ರಸಾದ್ ಮಾತನಾಡಿ, ಇದೇ ಮೊದಲ ಬಾರಿಗೆ ಮೈಸೂರಿಗೆ ಬಂದಿದ್ದೇನೆ ಲಕ್ಕಿಮ್ಯಾನ್ ಚಿತ್ರದ ನಿರ್ದೇಶನಕ್ಕೆ ಪ್ರೋತ್ಸಾಹಿಸಿದ ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ನಿಮ್ಮೆಲ್ಲರ ನಗುವಿನಲ್ಲಿ, ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ ಎಂದು ಸ್ಮರಿಸಿದರು.

ಕುಲಭೂಷಣ್ ಅದ್ಭುತ ನೃತ್ಯ: 'ರಾಜರಾಣಿ ರೋರರ್ ರಾಕೆಟ್' ಸಿನಿಮಾ ಮೊದಲ ಬಾರಿಗೆ ನಾಯಕ ನಟನಾಗಿ ಕಾಣಿಸಿಕೊಂಡಿರುವ ನೃತ್ಯ ಕಲಾವಿದ, ನಿರ್ದೇಶಕ ಕುಲ ಭೂಷಣ್ 'ಯುವ ರತ್ನ' ಸಿನಿಮಾದ ಹಾಡಿಗೆ ಅದ್ಭುತ ನೃತ್ಯ ಮಾಡುವ ಮೂಲಕ ಎಲ್ಲರನ್ನು ರಂಜಿಸಿದರು. ನಂತರ ಅವರದ್ದೇ 'ರಾಜರಾಣಿ ರೋರರ್ ರಾಕೆಟ್' ಚಿತ್ರದ ಹಾಡಿಗೆ ಸ್ಟೆಪ್ ಹಾಕಿ ಗಮನ ಸೆಳೆದರು.

ಅನ್ನದಾತರ ಸ್ಮರಣೆ: ಮದ್ದೂರು ಸರ್ಕಾರಿ ಮಹಿಳಾ ಕಾಲೇಜು ವಿದ್ಯಾರ್ಥಿನಿಯರು ದೇಶಕ್ಕೆ ಅನ್ನ ನೀಡುವ ಅನ್ನದಾತರನ್ನು ಸ್ಮರಿಸಿದರು. ರೈತ ದೇಶದ ಬೆನ್ನೆಲುಬು. ಅತೀವೃಷ್ಟಿಯಿಂದ ಸಾಲ ತೀರಿಸಲಾಗದೆ ಕಂಗಾಲಾಗಿ, ಕಡೆಗೆ ಆತ್ಮಹತ್ಯೆಗೆ ಮುಂದಾಗುವ ರೈತರಿಗೆ ಆಸರೆಯಾಗಬೇಕಾಗಿದೆ ಎಂಬುದನ್ನು ಅರ್ಥವತ್ತಾಗಿ ತಿಳಿಸಿದರಲ್ಲದೆ ರೈತರು ಎದುರಿಸುವ ಸಂಕಷ್ಟಗಳನ್ನು ತೆರೆದಿಟ್ಟರು. ಇದರ ನಡುವೆ ಊಟಿ ರಸ್ತೆಯ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ಹಾಗೂ ಹಾರ್ಡ್ವಿಕ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಸೈನಿಕರ ತ್ಯಾಗ–ಬಲಿದಾನವನ್ನು ಸ್ಮರಿಸಿದರು.

ಸಾಹಸಮಯ ನೃತ್ಯ: ಸಿಎಫ್‌ಟಿಆರ್‌ಐ ಶಾಲೆ ಮಕ್ಕಳು ಸಾಹಸಮಯ ನೃತ್ಯ ಪ್ರದರ್ಶನ ನೀಡಿದರು. 'ಬಾಹುಬಲಿ' ಚಿತ್ರದ ಹಾಡಿನ ಜೊತೆ ಜೊತೆಗೆ ವಿವಿಧ ಭಂಗಿಗಳಲ್ಲಿ ಸಾಹಸ ದೃಶ್ಯಗಳ ಪ್ರದರ್ಶನ ನೀಡುವ ಮೂಲಕ ನೆರೆದಿದ್ದವರನ್ನು ಮಂತ್ರಮುಗ್ಧರನ್ನಾಗಿಸಿದರು. ಹಾಗೆಯೇ ಮಾತೃಮಂಡಳಿ ಬಾಲಕಿಯರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು ಕಿತ್ತೂರು ಸಂಸ್ಥಾನದ ಕಿತ್ತೂರು ರಾಣಿ ಚನ್ನಮ್ಮನ ಸಾಹಸ ತಿಳಿಸಿಕೊಟ್ಟರೆ, ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಸೈನ್ಸ್ ವಿದ್ಯಾರ್ಥಿಗಳು ಡಾ.ವಿಷ್ಣುವರ್ಧನ್, ಪುನೀತ್ ರಾಜ್‌ಕುಮಾರ್ ಸ್ಮರಣೆ ಜೊತೆಗೆ ಕನ್ನಡ ಅಜರಾಮರ ಎಂದರು.

ಸಿದ್ಧಾರ್ಥನಗರದ ಬದರಿಪ್ರಸಾದ್‌ಜಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಶ್ರೀರಾಮಾಯಣ ದರ್ಶನ ಮಾಡಿಸಿದರೆ, ಗುಂಡ್ಲುಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಗಡಿನಾಡಿನ ಆಚಾರ–ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದರು. ಹೊಳೆನರಸೀಪುರ ಪಡುವಲಹಿಪ್ಪೆ ಶ್ರೀ ಹೆಚ್.ಡಿ.ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಶ್ರೀ ಕೃಷ್ಣಲೀಲೆ ಕಥಾ ಪ್ರಸಂಗವನ್ನು ಮನಮೋಹಕ ಅಭಿನಯದ ಪ್ರಸ್ತುತಪಡಿಸಿ, ಅಪಾರ ಮೆಚ್ಚುಗೆಗೆ ಪಾತ್ರರಾದರು.

112 ಅರಿವು...

ಯುವ ಸಂಭ್ರಮದಲ್ಲಿ ಪೊಲೀಸ್ ಸಹಾಯವಾಣಿ 112ರ ಅರಿವು ಮೂಡಿಸಲಾಗುತ್ತಿದೆ. ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮದ ನಡುವೆ ಎಲ್‌ಇಡಿ ಪರದೆಯಲ್ಲಿ 112 ಟೋಲ್ ಫ್ರೀ ನಂಬರ್ ಕುರಿತು ಮಾಹಿತಿ ನೀಡುವುದಲ್ಲದೆ ತುರ್ತು ಪರಿಸ್ಥಿತಿಯಲ್ಲಿ ಸಂಪರ್ಕಿಸುವಂತೆ ಮನವಿ ಮಾಡಲಾಗುತ್ತಿದೆ.


ಮೈಸೂರು ಅರಮನೆಯಲ್ಲಿ ಖಾಸಗಿ ದರ್ಬಾರ್‌ಗೆ ಸಿಂಹಾಸನವನ್ನು ಧಾರ್ಮಿಕ ವಿಧಿ–ವಿಧಾನಗಳನ್ವಯ ಮಂಗಳವಾರ ಅನುಭವಿಗಳು ಜೋಡಣೆ ಮಾಡಿದರು.

ಅರಮನೆ ಆವರಣದಲ್ಲಿ ಕಾಡಿನ ಮಕ್ಕಳೊಂದಿಗೆ ಶಕ್ತಿಧಾಮದ ಸಮ್ಮಿಲನ



ಮೈಸೂರು, ಸೆ.20(ಎಂಟಿವೈ)– ದಸರಾ ಗಜಪಡೆಯೊಂದಿಗೆ ವಿವಿಧ ಆನೆ ಕ್ಯಾಂಪ್‌ಗಳಿಂದ ಬಂದು ಮೈಸೂರು ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಮಾವುತರು, ಕಾವಾಡಿಗಳ ಮಕ್ಕಳಿಗಾಗಿ ತೆರೆದಿರುವ ಟೆಂಟ್ ಶಾಲೆಗೆ ಶಕ್ತಿಧಾಮದ ಪ್ರಾಥಮಿಕ ಶಾಲೆಯ ಮಕ್ಕಳ ತಂಡ ಆಗಮಿಸಿ, ಮಾವುತರ ಮಕ್ಕಳೊಂದಿಗೆ ಬೆರೆತು, ಸಂವಹನ ನಡೆಸಿದರು.

ಹಾಡಿ ಮಕ್ಕಳು ಹಾಗೂ ನಗರ ವಾಸಿ ಮಕ್ಕಳನ್ನು ಪರಸ್ಪರ ಪರಿಚಯಿಸುವ ನಿಟ್ಟಿನಲ್ಲಿ ಶಕ್ತಿಧಾಮದ ಶಾಲೆಯಲ್ಲಿ 3ರಿಂದ 5ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳ ತಂಡವನ್ನು ಅರಮನೆಗೆ ಶಾಲಾ ಬಸ್‌ನಲ್ಲಿ ಕರೆತರಲಾಯಿತು. ಶಕ್ತಿಧಾಮದ ಶಾಲೆಯ ಮಕ್ಕಳು ಆಗಮಿಸುತ್ತಿದ್ದಂತೆಯೇ ಹಾಡಿ ಮಕ್ಕಳು ಸ್ವಾಗತ ಗೀತೆ ಹಾಡುವ ಮೂಲಕ ಪ್ರೀತಿಯಿಂದ ಬರಮಾಡಿಕೊಂಡರು. ಈ ವೇಳೆ ಶಕ್ತಿಧಾಮದ ಶಾಲೆಯ ಮಕ್ಕಳು ದಸರಾ ಆನೆಗಳ ಮಾವುತರು, ಕಾವಾಡಿಗಳ ಮಕ್ಕಳೊಂದಿಗೆ ಸಂವಾದ ನಡೆಸಿದರು. ಆನೆಗಳಿಗೆ ಏನು ಆಹಾರ ನೀಡ್ತೀರಿ? ಅವುಗಳೊಂದಿಗೆ ನೀವು ಹೇಗಿರ್ತೀರಾ? ಆನೆಗಳಿಗೆ ಜ್ವರ ಬಂದರೆ ಏನ್ ಮಾಡ್ತೀರಿ? ಆನೆ ಶಿಬಿರಕ್ಕೆ ವಾಪಸ್ಸಾದ ಆನೆಗಳು ಅಲ್ಲಿ ಹೇಗಿರ್ತಾವೆ? ಇತ್ಯಾದಿ ಪ್ರಶ್ನೆಗಳನ್ನು ಕೇಳಿ ಮಾವುತರ ಮಕ್ಕಳಿಂದ ಮುಗ್ಧ ಉತ್ತರ ಪಡೆದರು.

ಈ ವೇಳೆ ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳು ತಾತ್ಕಾಲಿಕ ಶಾಲೆಯಲ್ಲಿ ಕಲಿತ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು. ಬಳಿಕ ಆನೆಗಳ ಬಳಿ ತೆರಳಿ ಮಾವುತರು, ಕಾವಾಡಿಗಳಿಂದ ಆನೆಗಳ ಬಗ್ಗೆ ತಿಳಿದುಕೊಂಡರು. ಅಲ್ಲದೆ ಆನೆಗಳನ್ನು ಹತ್ತಿರದಿಂದ ನೋಡಿ ಸಂಭ್ರಮಪಟ್ಟರು. ಈ ಸಂದರ್ಭದಲ್ಲಿ ನಿವೃತ್ತ ಡಿಡಿಪಿಐ ಹಾಗೂ ಶಕ್ತಿಧಾಮ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮಂಜುಳಾ, ಆರ್‌ಎಫ್‌ಓ ಸಂತೋಷ್ ಹೂಗಾರ್, ತಾತ್ಕಾಲಿಕ ಶಾಲೆಯ ನೋಡಲ್ ಅಧಿಕಾರಿ ಮಂಜುಳಾ, ಶಿಕ್ಷಕರಾದ ನೂರ್ ಫಾತಿಮಾ, ಸುಬ್ಬಲಕ್ಷ್ಮಿ, ಮಹದೇವ್, ಮೌಸಿನ್ ತಾಜ್, ಸುಬ್ಬಲಕ್ಷ್ಮಿ, ಮಹಾದೇವ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಸ್ವೆಟರ್ ಕೊಡುಗೆ: ದಸರಾ ಗಜಪಡೆಯ ಮಾವುತರು, ಕಾವಾಡಿಗಳ ಮಕ್ಕಳ ತಾತ್ಕಾಲಿಕ ಶಾಲೆಯಲ್ಲಿ ಓದುತ್ತಿರುವ 40 ಮಕ್ಕಳಿಗೆ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಸ್ಥೆಯ ವತಿಯಿಂದ ಸ್ವೆಟರ್ ಹಾಗೂ ಬಿಸ್ಕೆಟ್ ನೀಡಿ ಉಪಚರಿಸಲಾಯಿತು.

ಸೇವಾಕಾರ್ಯದ ಹಿನ್ನೆಲೆಯಲ್ಲಿ ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಸ್ಥೆಯ ಸದಸ್ಯರು ದಸರಾ ಗಜಪಡೆಯ ಮಾವುತರು ಮತ್ತು ಕಾವಾಡಿಗಳ ಮಕ್ಕಳು ಚಳಿಯಿಂದ ರಕ್ಷಣೆ ಪಡೆಯುವ ಉದ್ದೇಶದಿಂದ ಇಂದು ಬೆಳಿಗ್ಗೆ ತಾತ್ಕಾಲಿಕ ಶಾಲೆಯಲ್ಲಿ ಕಲಿಯುತ್ತಿರುವ 1 ರಿಂದ 10ನೇ ತರಗತಿಯ ಮಕ್ಕಳಿಗೆ ಗುಣಮಟ್ಟದ ಸ್ವೆಟರ್ ವಿತರಿಸಿದರು.

ಈ ಸಂದರ್ಭದಲ್ಲಿ ಡಿಡಿಪಿಐ ರಾಮಚಂದ್ರ ರಾಜೇ ಅರಸ್, ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಾರಾಧ್ಯ, ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಸಂಸ್ಥೆಯ ಅಧ್ಯಕ್ಷೆ ರಶ್ಮಿ, ಪದಾಧಿಕಾರಿಗಳು, ಸಂಪನ್ಮೂಲ ಸಮನ್ವಯ ಅಧಿಕಾರಿ ಶ್ರೀಕಂಠಸ್ವಾಮಿ, ವಲಯದ ಬಿಐಆರ್‌ಟಿ ರಾಜಮ್ಮ, ದಕ್ಷಿಣ ವಲಯದ ಅನುಪಾಲನಾಧಿಕಾರಿಗಳಾದ ಎಂ.ಅರಕೇಶ, ವೀಣಾಶ್ರೀ, ಟೆಂಟ್ ಶಾಲೆಯ ಶಿಕ್ಷಕರು ಮತ್ತು ಶಾಲಾ ಮಕ್ಕಳು ಉಪಸ್ಥಿತರಿದ್ದರು.

ದಸರಾ ಪ್ರವಾಸಿಗರಿಗೆ ಕಾಂಬೋ ಟಿಕೆಟ್‌ಗಳು ಲಭ್ಯ

ವಯಸ್ಕರಿಗೆ 500 ರೂ., ಮಕ್ಕಳಿಗೆ 250 ರೂ.

ಮೈಸೂರು, ಸೆ.20(ಆರ್‌ಕೆ)–ಹಲವು ಪ್ರವಾಸಿ ತಾಣಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ಕಾಂಬೋ ಟಿಕೆಟ್ ಮಾರಾಟ ಇಂದಿನಿಂದ ಆರಂಭವಾಗಿದೆ. ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 5ರವರೆಗೆ ಮೈಸೂರು ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ, ರೈಲ್ವೆ ಮ್ಯೂಸಿಯಂ ಹಾಗೂ ಕೆಆರ್‌ಎಸ್‌ಗೆ ಪ್ರವೇಶ ಕಲ್ಪಿಸಲು ಕಾಂಬೋ ಟಿಕೆಟ್‌ಗಳನ್ನು ಮೈಸೂರಿನ ಜೆಎಲ್‌ಬಿ ರಸ್ತೆಯ ಹೋಟೆಲ್ ಮಯೂರ ಹೊಯ್ಸಳ ಆವರಣದಲ್ಲಿರುವ ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರ ಕಚೇರಿ, ಕೆಎಸ್‌ಟಿಡಿಸಿ ಕಚೇರಿ, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಮೃಗಾಲಯ, ಅರಮನೆ, ರೈಲ್ವೆ ಮ್ಯೂಸಿಯಂ ಹಾಗೂ ಕೆಆರ್‌ಎಸ್‌ನಲ್ಲಿ ಮಾರಾಟ ಮಾಡಲಾಗುತ್ತಿದೆ.



ವಯಸ್ಕರಿಗೆ 500 ರೂ. ಹಾಗೂ ಮಕ್ಕಳಿಗೆ 250 ರೂ. ಪ್ರವೇಶ ಟಿಕೆಟ್ ದರ ನಿಗದಿಪಡಿಸಲಾಗಿದ್ದು, ನಾಳೆ (ಸೆ.21)ಯಿಂದ ಸಬರ್ಬನ್ ಬಸ್ ಸ್ಟ್ಯಾಂಡ್, ಸಿಟಿ ಬಸ್ ಸ್ಟ್ಯಾಂಡ್, ಹೋಟೆಲ್‌ಗಳು, ಟ್ರಾವೆಲಿಂಗ್ ಏಜೆನ್ಸಿ ಹಾಗೂ ಪ್ರವಾಸಿ ಮಾರ್ಗದರ್ಶಿಗಳ ಬಳಿಯೂ ಕಾಂಬೋ ಟಿಕೆಟ್‌ಗಳು ಲಭ್ಯವಾಗಲಿದೆ ಎಂದು ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕ ರಾಘವೇಂದ್ರ ತಿಳಿಸಿದ್ದಾರೆ.

ಆದರೆ ಪ್ರವಾಸಿ ಗೈಡ್‌ಗಳು, ಹೋಟೆಲ್‌ನವರು ಹಾಗೂ ಟ್ರಾವೆಲ್ ಏಜೆನ್ಸಿಗಳು ಮೊದಲೇ ಹಣ ಪಾವತಿಸಿ ಪ್ರವಾಸೋದ್ಯಮ ಇಲಾಖೆಯಿಂದ ದಸರಾ ಪ್ರವಾಸಿಗರ ಕಾಂಬೋ ಟಿಕೆಟ್‌ಗಳನ್ನು ಖರೀದಿಸಬೇಕು ಎಂದು ಅವರು ತಿಳಿಸಿದ್ದಾರೆ. ಮೈಸೂರು ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆಯು ಜಂಟಿಯಾಗಿ ಈ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಮೈಸೂರು ದಸರಾ 2022ರ ದಸರಾ ವೆಬ್‌ಸೈಟ್‌ನಲ್ಲಿ ಮಹಾ ದೋಷಗಳು!

- ದಸರಾ ವೆಬ್‌ಸೈಟ್–2022 www.mysoredasara.gov.inನಲ್ಲಿರುವ ಮಾಹಿತಿಯ ಸ್ಯಾಂಪಲ್ ಇದು
- ನಾಡಹಬ್ಬದ ಮಹತ್ವ ಅರಿಯದ ಅಧಿಕಾರಿ ವರ್ಗಕ್ಕೆ ಜವಾಬ್ದಾರಿ ನೀಡಿದರೆ ಇಂತಹ ಅವಾಂತರ ಸರ್ವೇಸಾಮಾನ್ಯ

ಮೈಸೂರು, ಸೆ.20(ಆರ್‌ಕೆ)– ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಈ ಬಾರಿ ಸುಮಾರು 35 ಕೋಟಿ ರೂ. ವೆಚ್ಚದಲ್ಲಿ ಅದ್ಧೂರಿಯಾಗಿ ಆಚರಿಸುವ ನಿಟ್ಟಿನಲ್ಲಿ ಭರದಿಂದ ಸಿದ್ಧತೆ ನಡೆದಿದೆ. ಆದರೆ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಲಕ್ಷಾಂತರ ಮಂದಿಗೆ ದಸರಾ ಮಾಹಿತಿ ತಲುಪಿಸುವ ಉದ್ದೇಶದಿಂದ ಸ್ಥಾಪಿಸಿರುವ ಮೈಸೂರು ದಸರಾ ವೆಬ್‌ಸೈಟ್–2022ನಲ್ಲಿ ದೋಷಗಳ ಮಹಾಪೂರವೇ ಇದೆ.

ಮೊಬೈಲ್ ಯುಗದಲ್ಲಿ ವೆಬ್‌ಸೈಟ್ ಮೂಲಕ ಮಾಹಿತಿ ಹಂಚಿಕೊಳ್ಳುವುದು ಸರಳ ಹಾಗೂ ಸೂಕ್ತ ಮಾರ್ಗ. ಈ ನಿಟ್ಟಿನಲ್ಲಿ ಪ್ರತಿವರ್ಷ ದಸರಾ ವೆಬ್‌ಸೈಟ್ ಸ್ಥಾಪಿಸಿ ಅದರೊಳಗೆ ಎಲ್ಲಾ ಕಾರ್ಯಕ್ರಮಗಳ ಸಮಗ್ರ ಮಾಹಿತಿಯನ್ನು ದಾಖಲಿಸುವ ವ್ಯವಸ್ಥೆ ನಡೆದು ಬಂದಿದೆ. ಕಾರ್ಯಕ್ರಮ, ಸ್ಥಳ, ಸಮಯ, ಕಲಾವಿದರು ಹೀಗೆ ಎಲ್ಲಾ ಮಾಹಿತಿ ಲಭ್ಯವಾಗಬೇಕಿದ್ದ ಈ ಬಾರಿ ದಸರಾ ವೆಬ್‌ಸೈಟ್ www.mysoredasara.gov.in ಓಪನ್ ಮಾಡಿದರೆ ಲೋಪದೋಷಗಳೇ ಕಣ್ಣು ಕುಕ್ಕುತ್ತವೆ. ತಪ್ಪು ಮಾಹಿತಿ, ಹೆಸರು, ಹುದ್ದೆಯನ್ನು ತಪ್ಪಾಗಿ ದಾಖಲಿಸಿರುವುದು, ಕಾರ್ಯಕ್ರಮಗಳ ಅಪೂರ್ಣ ವಿವರ ಹಾಗೂ ವ್ಯಾಕರಣ ದೋಷಗಳ ಬಗ್ಗೆ 'ಮೈಸೂರು ಮಿತ್ರ'ನಲ್ಲಿ ಹಲವರು ದೂರಿದ್ದಾರೆ.

ಕನ್ನಡ ಭಾಷೆಯಲ್ಲಿ ಅಧಿಕಾರಿಗಳು ಕೊಟ್ಟ ಮಾಹಿತಿಯನ್ನು ಏಜೆನ್ಸಿಯವರು ಗೂಗಲ್ ಟ್ರಾನ್ಸ್‌ಲೇಷನ್ ಮೂಲಕ ತರ್ಜುಮೆ ಮಾಡಿರುವುದರಿಂದ ವ್ಯಾಕರಣ, ಹೆಸರು, ಹುದ್ದೆಗಳಲ್ಲಿ ತಪ್ಪುಗಳಾಗುತ್ತಿವೆ. 'ಮನೆ–ಮನೆ ದಸರಾ'ವನ್ನು "House-House Dusera" ಎಂದೂ, ಜಿಲ್ಲಾ ಉಸ್ತುವಾರಿ ಸಚಿವರ ಹೆಸರನ್ನು "ST. SomaShekhar" ಎಂದೂ, ಶಾಸಕ ತನ್ವೀರ್ ಸೇಠ್ ಅವರ ಹೆಸರನ್ನು "TanveerSeth" ಎಂದೂ, ಜಿಲ್ಲಾಧಿಕಾರಿಗಳನ್ನು "District Collector" ಎಂದು, ಹೀಗೆ ಹಲವು ಲೋಪದೋಷಗಳು ವೆಬ್‌ಸೈಟ್‌ನಲ್ಲಿವೆ. ವೆಬ್‌ಸೈಟ್‌ನ ಕನ್ನಡ ಅವತರಣಿಕೆಯಲ್ಲೂ ಪರಿಪೂರ್ಣ ಮಾಹಿತಿ ಇಲ್ಲ. ಸೂಕ್ತ ಪದ ಬಳಕೆ, ವಾಕ್ಯ ರಚನೆಯಲ್ಲೂ ಗೊಂದಲಮಯ. ದಸರಾ ಸಮಗ್ರ ಮಾಹಿತಿಯನ್ನು ವಿಶ್ವವ್ಯಾಪಿ ತಲುಪಿಸುವಲ್ಲಿ ಇಷ್ಟೊಂದು ನಿರ್ಲಕ್ಷ್ಯ ವಹಿಸಿರುವುದು ನಿಜಕ್ಕೂ ವಿಷಾದನೀಯ. ಭಾಷಾ ತಜ್ಞರು, ದಸರೆ ಬಗ್ಗೆ ಹೆಚ್ಚು ಮಾಹಿತಿ ತಿಳಿದಿರುವವರ ಸಹಕಾರ ಪಡೆದು ಈಗಲಾದರೂ ಅದ್ವಾನಗಳನ್ನು ಸರಿಪಡಿಸದಿದ್ದರೆ ಮುಜುಗರಕ್ಕೀಡಾಗಬೇಕಾಗುತ್ತದೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕಳೆದ ಭಾನುವಾರ ತರಾತುರಿಯಲ್ಲಿ ದಸರಾ ವೆಬ್‌ಸೈಟ್‌ಗೆ ಚಾಲನೆ ನೀಡಿದ್ದಾರೆ. ಇದೀಗ ಆ ವೆಬ್ ಪೇಜ್ ಎಲ್ಲರಿಗೂ ಲಭ್ಯವಾಗುತ್ತಿದೆಯಾದರೂ, ಐತಿಹಾಸಿಕ ಹಿನ್ನೆಲೆ, ದಸರಾ ಗಜಪಡೆ, ಕಾರ್ಯಕ್ರಮಗಳ ಮಾಹಿತಿ ಕಣ್ಮರೆಯಾಗಿದೆ. ಕನಿಷ್ಠ ಇದು ಎಷ್ಟನೇ ಆಚರಣೆ ಎನ್ನುವುದನ್ನೂ ದಾಖಲಿಸಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ದಸರಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಮುಂಚಿತವಾಗಿ ಯೋಜನೆ ಮಾಡಿಕೊಳ್ಳುವ ಸಲುವಾಗಿ ನಾವು ವೆಬ್‌ಸೈಟ್ ಓಪನ್ ಮಾಡಿ ನೋಡಿದರೆ ಅದರಲ್ಲಿ ನಿಖರ ಮಾಹಿತಿಗಳೇ ಇಲ್ಲ. ಸ್ಥಳೀಯವಾಗಿ, ರಾಜ್ಯ, ಅಂತರರಾಜ್ಯ ಮತ್ತು ಪ್ರಪಂಚದಾದ್ಯಂತ ದಸರಾ ಮಹೋತ್ಸವದ ಕಾರ್ಯಕ್ರಮಗಳ ಮಾಹಿತಿಯನ್ನು ಪ್ರಚಾರ ಮಾಡಬೇಕೆಂದು ದಸರಾ ಉನ್ನತ ಮಟ್ಟದ ಸಭೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟ ಸೂಚನೆ ನೀಡಿದ್ದರು. ಆದರೆ ಅದು ಮಾತಿಗಷ್ಟೇ ಎಂಬಂತೆ ಅಧಿಕಾರಿಗಳು ನಿರ್ಲಕ್ಷ್ಯತೆ ಮೆರೆದಿದ್ದಾರೆ ಎಂದು ಕೆಲವು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ವರ್ಷದ ದಸರಾ ಉದ್ಘಾಟನೆಗೆ ಕೇವಲ ಐದು ದಿನ ಬಾಕಿ ಇದೆ. ಈಗಾಗಲೇ ನಡೆಯುತ್ತಿರುವ ಯುವ ಸಂಭ್ರಮ, ಆರಂಭವಾಗಲಿರುವ ಯುವ ದಸರಾ, ರಾಷ್ಟ್ರಪತಿ, ಮುಖ್ಯಮಂತ್ರಿಗಳೂ ಸೇರಿದಂತೆ ಗಣ್ಯರು, ಅತೀ ಗಣ್ಯರು ಪಾಲ್ಗೊಳ್ಳುವ ಕಾರ್ಯಕ್ರಮಗಳು, ಇನ್ನಿತರ ಅತ್ಯವಶ್ಯ ಮಾಹಿತಿಗಳನ್ನು ಸ್ಪಷ್ಟವಾಗಿ ವೆಬ್‌ಸೈಟ್‌ನಲ್ಲಿ ದಾಖಲಿಸಬೇಕೆಂದು ಕ್ಲಾರೆಟ್ ಸಿಮೋನ್ ಆಗ್ರಹಿಸಿದ್ದಾರೆ.

"ನಾನು ವಿದೇಶಿ ಪ್ರವಾಸಿ. ಮಾಹಿತಿಗಾಗಿ ದಸರಾ ವೆಬ್‌ಸೈಟ್ ಓಪನ್ ಮಾಡಿದಾಗ ತುಂಬಾ ನಿರಾಸೆಯಾಯಿತು. ಏಕೆಂದರೆ ಅದರಲ್ಲಿ ನೀಡಿರುವ ಮಾಹಿತಿ ಅಪೂರ್ಣವಾಗಿದೆ." ಎಂದು ದಸರಾ ನೋಡಲೆಂದೇ ಮೈಸೂರಿಗೆ ಆಗಮಿಸಿರುವ ಸುರೇಂದ್ರಚೌಹಾಣ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

Samples of Dasara website-2022 for your reading pleasure !

Let these samples speak for themselves:



For discussions regarding the Nadahabba Mysore Dussehra Mahotsav Dipalankara, MP Pratap Sinha, District Collectors, Chescom Managing Director and concerned officials held a meeting at the District Collector's office.

Urdu Poetry Conference (Mushahira): On the 29. 9. 2022 at Thursday, 7.00 pm

Urdu Poetry Conference (Mushahira): On the 29. 9. 2022 at Thursday, 7.00 pm. In "classic convention hall" Bangalore – Mysore Road, Near JSS Medical College, Inauguration by Hon. S. T Somashekhar, District In-charge Minister and Sahakaara Minister, Government of Karnataka. Chairman: Shri Tanveer Seth, Honorable MLA, Narasimha Raja Assembly Constituency. Mysore. Chief Guest: Shri S. A Ramdas, honorable MLA, Krishna Raja constituency, Mysore. Around 15-20 poets will participate.

Sahakaara ministry and Mysore District In-charge Minister ST Somasekhar inquired about the well-being of the Mahuthas and Kavadigaras

Sahakaara ministry and Mysore District In-charge Minister ST Somasekhar inquired about the well-being of the Mahuthas and Kavadigaras who have arrived for the Nadahabba Mysore Dasara Mahotsava and served them breakfast.

ವೆಬ್‌ಸೈಟ್‌ನಲ್ಲಿರುವ ಅಂಶಗಳಲ್ಲಿ ಹಲವು ತಪ್ಪುಗಳಿವೆ. ವೆಬ್‌ಸೈಟ್‌ಗೆ ಹಾಕುವಾಗ ಅವುಗಳನ್ನು ಪರೀಕ್ಷಿಸದಿರುವುದು ಈ ಪ್ರಮಾದಕ್ಕೆ ಕಾರಣ. ಕನ್ನಡದಿಂದ ಇಂಗ್ಲಿಷ್‌ಗೆ ಮಾಹಿತಿಯನ್ನು ತರ್ಜುಮೆ ಮಾಡುವಾಗ ಆಗಿರಬಹುದಾದ ತಪ್ಪುಗಳನ್ನು ಸರಿಪಡಿಸಿಲ್ಲ ಎಂದು ಸುಭಾಷ್ ಬೇಸರ ವ್ಯಕ್ತಪಡಿಸಿದ್ದಾರೆ.

ಸಾಮಾನ್ಯ ಅಂಶಗಳನ್ನು ಹೊರತುಪಡಿಸಿದರೆ, ಪ್ರವಾಸಿಗರಿಗೆ ಅನುಕೂಲವಾಗುವ ವಿಶೇಷ ಅಥವಾ ಹೊಸತನ್ನೇನೂ ವೆಬ್‌ಸೈಟ್‌ನಲ್ಲಿ ಒದಗಿಸಿಲ್ಲ. ಯುವ ಸಂಭ್ರಮ, ಯುವ ದಸರಾ, ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಖ್ಯಾತಿ ಗಳಿಸಿರುವ ಕಲಾವಿದರು ಭಾಗವಹಿಸಲಿರುವ ಕಾರ್ಯಕ್ರಮಗಳ ಬಗ್ಗೆಯೂ ಮಾಹಿತಿ ಇಲ್ಲ. ಅರಮನೆಯಲ್ಲಿ ಅಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ವೀಕ್ಷಿಸಿರುವ ಈ ಬಾರಿಯೂ ಅದಕ್ಕಾಗಿ ಕಾತುರದಿಂದ ಕಾದಿರುವ ನೀಲಿಮ ಸುರೇಶ್ ತಿಳಿಸಿದ್ದಾರೆ.

ಅಸ್ಪಷ್ಟತೆಗೆ ಕಾರಣವೇನು?: ಸಾಂಸ್ಕೃತಿಕ ಕಾರ್ಯಕ್ರಮಗಳು ಇನ್ನೂ ಅಂತಿಮಗೊಂಡಿಲ್ಲ ಎಲ್ಲವೂ ಉನ್ನತ ಮಟ್ಟದಲ್ಲೇ ನಿರ್ಧಾರವಾಗಬೇಕಿದೆ. ಪ್ರಮುಖ ಕಾರ್ಯಕ್ರಮಗಳಲ್ಲಿ ಯಾರ್ಯಾರು ಭಾಗವಹಿಸಬೇಕೆಂಬುದೂ ತೀರ್ಮಾನವಾಗಿಲ್ಲ ಎಂದು ಅಧಿಕೃತ ಮೂಲಗಳು ಹೇಳುತ್ತಿವೆ. ಈ ಹಿಂದೆ 6 ತಿಂಗಳ ಹಿಂದೆಯೇ ಸಿದ್ಧತೆ ಮಾಡಿಕೊಳ್ಳುತ್ತಿದ್ದೆವು. ದಸರಾ ಆರಂಭವಾಗುವ 15 ದಿನ ಮುಂಚಿತವಾಗಿ ಪ್ರಖ್ಯಾತ ಕಲಾವಿದರ ಪಟ್ಟಿಯೊಂದಿಗೆ ಎಲ್ಲವನ್ನೂ ಅಂತಿಮಗೊಳಿಸುತ್ತಿದ್ದೆವು. ಆದರೆ ಈ ಬಾರಿ ಭಿನ್ನವಾಗಿದೆ ಎಂದು ಮೂಲಗಳು ತಿಳಿಸಿವೆ.

ಪ್ರತೀ ದಿನ ಸರಣಿ ಸಭೆಗಳಾಗುತ್ತಿವೆ. ಕಾರ್ಯಕ್ರಮಗಳನ್ನು ಅಂತಿಮಗೊಳಿಸಲು ನಿರಂತರ ಚರ್ಚೆಗಳಾಗುತ್ತಿವೆ. ಮುಂಚಿತವಾಗಿ ಸಿದ್ಧತೆ ಮಾಡಿಕೊಳ್ಳದೇ ಆತುರಾತುರವಾಗಿ ಅಂತಿಮ ಘಳಿಗೆಯಲ್ಲಿ ಕೈಗೊಂಡ ನಿರ್ಧಾರಗಳಿಂದ ಅದ್ಹೇಗೆ ಕಾರ್ಯಕ್ರಮಗಳ ಗುಣಮಟ್ಟ ನಿರೀಕ್ಷಿಸುವುದು? ದಸರಾ ಮಹೋತ್ಸವದಂತಹ ಬೃಹತ್ ಪ್ರಮುಖ ಕಾರ್ಯಕ್ರಮದ ಬಗ್ಗೆ ಅಧಿಕಾರಿಗಳಿಗಾಗಲೀ ಅಥವಾ ಜನಪ್ರತಿನಿಧಿಗಳಿಗಾಗಲೀ ಗಂಭೀರತೆ ತೋರುತ್ತಿಲ್ಲ ಎಂದು ಕೆಲವರು ಹೇಳುತ್ತಿದ್ದಾರೆ.

ಇಲಾಖೆಯವರು ನೀಡಿರುವಂತೆ ನಾವು ಅಂಶಗಳನ್ನು ಅಪ್‌ಲೋಡ್ ಮಾಡಿದ್ದೇವೆ ಎಂದು 2022ರ ದಸರಾ ವೆಬ್‌ಸೈಟ್ ವಿನ್ಯಾಸಗೊಳಿಸಿ ಡೆವಲಪ್ ಮಾಡಿರುವ ಫ್ಯೂಷನ್ ಮೈಂಡ್ಸ್ ಟೆಕ್ನಾಲಜೀಸ್‌ನ ಯಶವಂತ್ ತಿಳಿಸಿದ್ದಾರೆ.

ನಾವು ಹಂತ ಹಂತವಾಗಿ ಕಂಟೆಂಟ್‌ಗಳನ್ನು ಪಡೆದಿದ್ದೇವೆ. ಕೆಲವು ಟೆಕ್ಸ್ಟ್ ಫಾರ್ಮ್ಯಾಟ್‌ನಲ್ಲಿವೆ, ಹಲವು ಇಮೇಜ್ ಫಾರ್ಮ್ಯಾಟ್‌ನಲ್ಲಿದ್ದವು. ಅವುಗಳನ್ನು ಟೈಪ್ ಮಾಡಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದೇವೆ. ವೆಬ್‌ಸೈಟ್‌ನ ಭಾಷೆ ಮತ್ತು ನೈಜತೆಯನ್ನು ವಾರ್ತಾ ಮತ್ತು ಪ್ರಚಾರ ಇಲಾಖೆ ಪರಿಶೀಲಿಸಿದೆ. ಹೆಚ್ಚಿನ ಮಾಹಿತಿಯನ್ನು ಲೋಡ್ ಮಾಡಲು ನಾವು ಪ್ರಯತ್ನಿಸುತ್ತಿದ್ದೇವೆ ಎಂದು ಅವರು ತಿಳಿಸಿದರು.

ಸರ್ಕಾರಿ ವೆಬ್‌ಸೈಟ್ ಡಿಸೈನ್ ಮತ್ತು ಅಪ್‌ಲೋಡ್ ಮಾಡುವುದರಲ್ಲಿ ಅನುಭವವಿರುವ ವೆಬ್ ಡಿಸೈನರ್ ಪ್ರವೀಣ್ ಪ್ರತಿಕ್ರಿಯೆ ನೀಡಿ, ಒಂದು ವೇಳೆ ವೆಬ್ ಡಿಸೈನ್‌ಗೆ 1 ಲಕ್ಷ ರೂ. ವೆಚ್ಚವಾಗುತ್ತದೆ ಎಂದಾದರೆ ಟೆಂಡರ್ ಕರೆದು ಉತ್ತಮ ವೆಬ್ ಡಿಸೈನ್ ಏಜೆನ್ಸಿಯನ್ನು ಪರಿಗಣಿಸಬೇಕಾಗುತ್ತದೆ. ಆದರೆ, ಇಲ್ಲಿ ಅಧಿಕಾರಿಗಳು 'ತುರ್ತು ಅನುದಾನ' ನೆಪವೊಡ್ಡಿ ಟೆಂಡರ್ ಕರೆಯದೇ ಇರುವುದರಿಂದ ಯಾವುದೋ ಒಂದು ಏಜೆನ್ಸಿ ಗುತ್ತಿಗೆ ಪಡೆಯುತ್ತದೆ ಎಂದು ಅವರು ತಿಳಿಸಿದ್ದಾರೆ.

ಹಲವು ವರ್ಷಗಳಿಂದ ಮೈಸೂರಲ್ಲಿ ಈ ವ್ಯವಸ್ಥೆ ಇದೆ. ಪೈಪೋಟಿ ಇಲ್ಲದಿದ್ದರೆ ಉತ್ತಮ ಸೇವೆ ನಿರೀಕ್ಷಿಸಲು ಸಾಧ್ಯವಿಲ್ಲ. ಅಂತಿಮ ಘಳಿಗೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದಾಗ ಗೊಂದಲದಲ್ಲಿ ಇಂತಹ ಪ್ರಮಾದಗಳಾಗುತ್ತವೆ ಎಂದು ಪ್ರವೀಣ್ ಅಭಿಪ್ರಾಯಪಟ್ಟಿದ್ದಾರೆ.

ಬಡವರ ಬದುಕಿನಲ್ಲಿ ಬೆಳಕು ತಂದ ಎನ್.ರಾಚಯ್ಯ

ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು



ನಂಜನಗೂಡು, ಸೆ.20– ಬಡವರ ಬವಣೆ ಹತ್ತಿರದಿಂದ ಬಲ್ಲವರಾಗಿದ್ದ ಮಾಜಿ ಶಾಸಕ ದಿ.ಎನ್.ರಾಚಯ್ಯ ಅವರು ಗ್ರಾಮೀಣ ಬಡಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಕನಕದಾಸ ಸಾರ್ವಜನಿಕ ಶಿಕ್ಷಣ ಸಂಸ್ಥೆ ತೆರೆದು ಸಾವಿರಾರು ಬಡವರ ಬದುಕಿನಲ್ಲಿ ಬೆಳಕು ತಂದರು ಎಂದು ಕನಕದಾಸ ಸಾರ್ವಜನಿಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಹಾಗೂ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ತಿಳಿಸಿದರು.

ನಗರದ ಕನಕದಾಸ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ನಡೆದ ಮಾಜಿ ಶಾಸಕ ದಿ.ಎನ್.ರಾಚಯ್ಯರವರ 42ನೇ ವಾರ್ಷಿಕ ಪುಣ್ಯಸ್ಮರಣೆ ಮತ್ತು ಅವರ ಪತ್ನಿ ದಿ.ರಾಮಮ್ಮನವರ 32ನೇ ಪುಣ್ಯಸ್ಮರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಂಗಡಿಯಲ್ಲಿ ಕೆಲಸಕ್ಕೆ ಇದ್ದ ರಾಚಯ್ಯ ಅವರು ಅಂಗಡಿಗೆ ಬರುವ ಬಡವರ ಬವಣೆ ಅರಿತು, ಬಡವರನ್ನು ಮೇಲೆತ್ತಲು ಶಿಕ್ಷಣವೇ ಪ್ರಮುಖ ಅಸ್ತ್ರವೆಂದು ತಿಳಿದು ಎಲ್ಲಾ ಬಡವರಿಗೂ ಶಿಕ್ಷಣ ಒದಗಿಸಬೇಕೆಂದು ನಿರ್ಧರಿಸಿದರು. ಅದರಂತೆ ಮಹಾತ್ಮ ಗಾಂಧಿಜೀ ಅವರೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ರಾಚಯ್ಯನವರು ಅವರಿಂದ ಪ್ರೇರಣೆಗೊಂಡು ಕಾಯಿ ವ್ಯಾಪಾರ ಮಾಡಿ, ತಮ್ಮ ಆಸ್ತಿ ಮಾರಾಟ ಮಾಡುವ ಮೂಲಕ ಕುರುಬರ ಟ್ರಸ್ಟ್ ಸ್ಥಾಪಿಸಿ ನಗರದ ಹೃದಯ ಭಾಗದಲ್ಲಿ ಜಾಗ ಖರೀದಿಸಿ ವಸತಿ ಶಾಲೆ ತೆರೆದ ನಿಸ್ವಾರ್ಥ ಮನಸ್ಸಿನ ಮಹಾನ್ ನಾಯಕ. ಅವರು ಕಟ್ಟಿದ ವಿದ್ಯಾಸಂಸ್ಥೆಯಲ್ಲಿ ಸಾವಿರಾರು ಬಡವರು ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆ ಅಲಂಕರಿಸಿ ಉತ್ತಮ ಜೀವನ ರೂಪಿಸಿಕೊಂಡಿದ್ದಾರೆ. ನಾನು ಸಹ ಇದೇ ಸಂಸ್ಥೆಯಲ್ಲಿ ಓದಿ ಜೀವನದ ಪಾಠ ಕಲಿತಿದ್ದೇನೆ. ದಿ.ಎನ್.ರಾಚಯ್ಯ ಅವರು ರಾಜಕಾರಣಿ ಯಾಗಿಯೂ ತಾಲೂಕಿನ ಅಭಿವೃದ್ಧಿಗೆ ಕಾರಣೀಭೂತ ರಾಗಿದ್ದಾರೆ. ಅಂತಹ ಮಹಾನ್ ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರ, ಸಮಾಜ ಸೇವಕರ ಪುಣ್ಯ ಸ್ಮರಣೆಯ ದಿನ ನೆನೆಯಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಅವರು ಕಟ್ಟಿದ ವಿದ್ಯಾ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. ಬಡವರ ಮಕ್ಕಳಿಗೆ ಶಿಕ್ಷಣ ಒದಗಿಸುವ ಎನ್.ರಾಚಯ್ಯ ಅವರ ಆಲೋಚನೆಗಳನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ಟ್ರಸ್ಟ್‌ನ ಸದಸ್ಯರ ಮೇಲಿದ್ದು, ಈ ನಿಟ್ಟಿನಲ್ಲಿ ತಾಲೂಕಿನ ದೇವಿರಮ್ಮನಹಳ್ಳಿ ಹುಂಡಿಯಲ್ಲಿ ಬೃಹತ್ ವಸತಿಶಾಲೆ ತೆರೆಯಲು ಉದ್ದೇಶಿಸಲಾಗಿದೆ ಎಂದರು.

ಮೈಸೂರಿನ ಕಾಗಿನೆಲೆ ಪೀಠದ ಶಿವಾನಂದಪುರಿ ಸ್ವಾಮಿಜೀ ಮಾತನಾಡಿ, ದಿ.ಎನ್.ರಾಚಯ್ಯ ಅವರು ತಮ್ಮ ಜೀವನ ತ್ಯಾಗ ಮಾಡಿ ಶಿಕ್ಷಣ ಸಂಸ್ಥೆ ಕಟ್ಟಿ ಬಡವರ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ. ವಿದ್ಯಾರ್ಥಿಗಳು ಇದರ ಸದುಪಯೋಗಪಡೆದುಕೊಂಡು ಶಿಸ್ತು ಮೈಗೂಡಿಸಿಕೊಂಡು ಚೆನ್ನಾಗಿ ಓದಿ ಭವಿಷ್ಯ ರೂಪಿಸಿಕೊಳ್ಳಿ ಎಂದು ಕಿವಿಮಾತು ಹೇಳಿದರು.

ಜಿಪಂ ಸದಸ್ಯ ಕೆ.ಮಾರುತಿ ಮಾತನಾಡಿ, ಹಸಿವು ಶಿಕ್ಷಣಕ್ಕೆ ತೊಡಕಾಗಬಾರದು ಎಂಬ ಉದ್ದೇಶದಿಂದ ವಸತಿಶಾಲೆ ತೆರೆದು ಅನ್ನದಾಸೋಹದ ಜೊತೆಗೆ ಶಿಕ್ಷಣ ದಾಸೋಹವನ್ನೂ ನಡೆಸಿದ ದೂರದೃಷ್ಟಿಯ ನಾಯಕ ದಿ.ಎನ್.ರಾಚಯ್ಯ ಎಂದರು.

ಸಮಾರಂಭದಲ್ಲಿ ಕಾಳೇಗೌಡ, ನಾಗೇಂದ್ರ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ನೀಲಿಸಿದ್ದು, ಚಂದ್ರಶೇಖರ್, ನಂಜಯ್ಯ, ಎನ್.ಎಸ್.ಮಹದೇವು, ಶಿವಮಲ್ಲು, ಬಸವೇಗೌಡ, ಕಾಳೇಗೌಡ, ಸೋಮಣ್ಣ, ಬಸವರಾಜು, ಚಿನ್ನಂಬಳ್ಳಿರಾಜು, ನಾಗರಾಜು, ಚೆನ್ನಯ್ಯ ಸೇರಿದಂತೆ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದ್ದರು.

ಮಲಿಯೂರು ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ತಿ.ನರಸೀಪುರ, ಸೆ.20– ತಾಲೂಕಿನ ಮಲಿಯೂರು ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಲಿಯೂರು ಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ನಂಜಾಪುರ ಪುಟ್ಟಸಿದ್ದಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಮದ ಸಹಕಾರ ಸಂಘದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆಂ.ಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಪುಟ್ಟಸಿದ್ದಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆ ಸಿಡಿಓ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ತಾಲೂಕು ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಡಿ.ಶಂಕರ್ ಮಾತನಾಡಿ, ಗ್ರಾಮಸ್ಥರೆಲ್ಲ ಸೇರಿ ಯಾವುದೇ ಗೊಂದಲಗಳಿಗೆ ಅವಕಾಶ ಮಾಡಿಕೊಡದೇ 3ನೇ ಅವಧಿಗೆ ಅವಿರೋಧವಾಗಿ ಅಧ್ಯಕ್ಷ–ಉಪಾಧ್ಯಕ್ಷರು ಹಾಗೂ ನಿರ್ದೇಶಕರನ್ನು ಆಯ್ಕೆ ಮಾಡಿದ್ದೇವೆ ಎಂದರು.

ಅಧ್ಯಕ್ಷ ಎಂ.ಸ್ವಾಮಿ ಮಾತನಾಡಿ, ಸರ್ವ ಸದಸ್ಯರ ಸಹಕಾರದೊಂದಿಗೆ ಸಂಘದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಅಲ್ಲದೇ ಸರ್ಕಾರದಿಂದ ಸಹಕಾರಿಗಳಿಗೆ ದೊರಕಬೇಕಾದ ಎಲ್ಲಾ ಸೌಲಭ್ಯ ದೊರಕಿಸಿಕೊಡಲು ಬದ್ಧನಾಗಿದ್ದೇನೆ ಎಂದರು.

ಈ ವೇಳೆ ಸಂಘದ ನಿರ್ದೇಶರಾಗಿ ತಾಪಂ ಮಾಜಿ ಸದಸ್ಯ ಹೆಚ್.ಜವರಯ್ಯ, ಸಿದ್ದಯ್ಯ, ಎಂ.ಮಂಟೇಲಿಂಗಪ್ಪ, ದೊಳ್ಳಯ್ಯ, ಚಿಕ್ಕಮ್ಮ, ಬೀರಯ್ಯ, ಶಿವಣ್ಣ, ಎಂ.ಶಿವಕುಮಾರ್, ಕೆಂಪೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಮದ ಮುಖಂಡರಾದ ಯಜಮಾನ್ ಶಿವಣ್ಣ, ದೊಳ್ಳಯ್ಯ(ಮೆಡ್ಡಯ್ಯ), ಕೆಂಪ ಸಿದ್ದೇಗೌಡ, ನಾಗಪ್ಪ, ಗ್ರಾಪಂ ಮಾಜಿ ಸದಸ್ಯ ದೊಳ್ಳಯ್ಯ, ಎನ್.ಎಲ್.ಕೆಂಪಲಿಂಗಯ್ಯ, ಡಿ.ಎನ್.ಲಿಂಗಯ್ಯ, ಎನ್.ಎಲ್.ಬಸವರಾಜು, ಎಂ.ಬಿ.ಬೋರಣ್ಣಗೌಡ, ಸಿದ್ದು, ಸಂಘದ ಕಾರ್ಯದರ್ಶಿ ಮರಯ್ಯ ಹಾಜರಿದ್ದರು.

ರೈತರು ಸಂಘದ ಅಭಿವೃದ್ಧಿಗೆ ಸಹಕರಿಸಿ



ಮಲ್ಕುಂಡಿ, ಸೆ.20– ರೈತರು ಸಹಕಾರ ಸಂಘದಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ ಎಂದು ಹಾಡ್ಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎಂ.ಶಂಕರ್ ತಿಳಿಸಿದರು.

ಇಲ್ಲಿಗೆ ಸಮೀಪದ ಹಾಡ್ಯ ಸಹಕಾರ ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘ ಪ್ರಸಕ್ತ ಸಾಲಿನಲ್ಲಿ 2.40 ಲಕ್ಷ ರೂ. ಲಾಭ ಗಳಿಸಿದೆ. ಮಹಿಳೆಯರು ಫೈನಾನ್ಸ್‌ಗಳಿಂದ ಸಾಲ ಪಡೆಯದೆ ನಮ್ಮ ಸಹಕಾರ ಸಂಘದಲ್ಲೇ ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆಯಬಹುದು. ರೈತರು ಸಂಘದಿಂದ ಪಡೆದ ಸಾಲವನ್ನು ನಿಗದಿತ ಸಮಯಕ್ಕೆ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ. ಸಂಘವು ಹೆಚ್ಚಿನ ಲಾಭ ಗಳಿಸಲು ಪ್ರತಿಯೊಬ್ಬರ ಸಹಕಾರ ಮುಖ್ಯ. ಅದೇ ರೀತಿ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಸಂಘದ ನಡಾವಳಿಕೆಯನ್ನು ಸಿಇಓ ಎಂ.ಪಿ.ವೆಂಕಟರಾಜಯ್ಯ ಮಂಡಿಸಿದರು. ರೈತ ಮುಖಂಡ ಶ್ರೀನಿವಾಸ್, ನಿರ್ದೇಶಕರಾದ ನೀಲಕಂಠಪ್ಪ, ಸೋಮಶೇಖರ್, ಬಸವರಾಜ್, ಶೇಖರಪ್ಪ, ಪುಟ್ಟದಾಸಯ್ಯ, ತಗಡೂರು ನಾಯಕ, ನಾಗಮ್ಮ, ಪದ್ಮ, ಬ್ಯಾಂಕ್ ಪ್ರತಿನಿಧಿ ಕೃಷ್ಣ ಸೇರಿದಂತೆ ಇತರರಿದ್ದರು.

ನೆರೆ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಮೀನಾಮೇಷ

- ಅಧಿಕಾರಿಗಳಿಂದ ಲಂಚದ ಬೇಡಿಕೆ ಆರೋಪ
- ಸೂಕ್ತ ಕ್ರಮ ಕೈಗೊಳ್ಳುವಂತೆ ತಹಸೀಲ್ದಾರ್‌ಗೆ ಆಗ್ರಹ



ಹೆಚ್.ಡಿ.ಕೋಟೆ, ಸೆ.20– ಮಳೆಯಿಂದ ಮನೆ ಕಳೆದುಕೊಂಡ ಕುಟುಂಬದವರಿಗೆ ಪರಿಹಾರ ವಿತರಿಸಲು ಅಧಿಕಾರಿಗಳು ಲಂಚದ ಬೇಡಿಕೆ ಇಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಡಿಎಸ್‌ಎಸ್ ಜಿಲ್ಲಾ ಸಂಘಟನಾ ಸಂಚಾಲಕ ಚಾ.ಶಿವಕುಮಾರ್ ಆರೋಪಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಅಧಿಕಾರಿಗಳ ವಿರುದ್ಧ ಆರೋಪ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ತಿಂಗಳು ಸುರಿದ ಭಾರೀ ಮಳೆಯಿಂದ ಕೋಟೆ, ಸರಗೂರು ತಾಲೂಕಿನಲ್ಲಿ ಬಹುತೇಕ ಮನೆಗಳು ಕುಸಿತಗೊಂಡು ಅಪಾರ ಪ್ರಮಾಣದ ಹಾನಿ ಸಂಭವಿಸಿದ್ದು, ಸಂತ್ರಸ್ತರಿಗೆ ಪರಿಹಾರ ನೀಡುವಂತೆ ಸರ್ಕಾರ ನಿರ್ದೇಶನ ನೀಡಿದೆ. ಆದರೆ, ತಾಲೂಕಿನಲ್ಲಿ ನಿಜವಾದ ಸಂತ್ರಸ್ತರಿಗೆ ಪರಿಹಾರ ದೊರೆಯುತ್ತಿಲ್ಲ. ಪರಿಹಾರಕ್ಕೆ ಅರ್ಜಿ ಸಲ್ಲಿಸಿದವರಿಗೆ ಗ್ರಾಮ ಮಟ್ಟದ ಅಧಿಕಾರಿಗಳಾದ ಆರ್‌ಐ, ವಿಎಗಳು ಲಂಚಕ್ಕೆ ಬೇಡಿಕೆ ಇಡುತ್ತಿದ್ದಾರೆ. ಲಂಚ ನೀಡದಿದ್ದರೆ ಅವರ ಅರ್ಜಿಗಳನ್ನು ಪರಿಗಣಿಸುತ್ತಿಲ್ಲ ಎಂದು ದೂರಿದರು.


ತಾಲೂಕಿನ ಹಲವೆಡೆ ನಡೆಯುತ್ತಿರುವ ಅಧಿಕಾರಿಗಳ ಈ ವರ್ತನೆಯ ಬಗ್ಗೆ ತಹಸೀಲ್ದಾರ್ ಅವರಿಗೆ ಹಲವು ಬಾರಿ ಮನವಿ ಸಲ್ಲಿಸಿ, ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದೇನೆ. ಆದರೆ, ತಹಸೀಲ್ದಾರರು ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಇಂದು ಪ್ರಶ್ನಿಸಿದಾಗ ನಾನು ನೀಡಿದ ಅರ್ಜಿಯನ್ನು ಎಸೆದು, ಅಸಭ್ಯವಾಗಿ ವರ್ತಿಸಿದರು ಎಂದು ಆರೋಪಿಸಿದರು.

ರೈತ ಮುಖಂಡ ನಾಗರಾಜು ಮಾತನಾಡಿ, ಅಧಿಕಾರಿಗಳೊಂದಿಗೆ ಸ್ಪಂದಿಸುವ ಫಲಾನುಭವಿಗಳಿಗೆ ಮಾತ್ರ ಪರಿಹಾರ ನೀಡಲಾಗುತ್ತಿದ್ದು, ಉಳಿದವರ ಪರಿಹಾರದ ಅರ್ಜಿ ಕಡೆಗಣಿಸಲಾಗುತ್ತಿದೆ. ಹಾಗಾಗಿ, ಭ್ರಷ್ಟ ಅಧಿಕಾರಿಗಳ ವಿರುದ್ಧ ಸಂಬಂಧಪಟ್ಟ ಮೇಲಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

> ಚಾ.ಶಿವಕುಮಾರ್ ಅವರು ನನಗೆ ಯಾವುದೇ ಅರ್ಜಿ ನೀಡಿಲ್ಲ. ಅವರ ಕಡೆಯ ಫಲಾನುಭವಿಗೆ ಪರಿಹಾರ ಕೊಡಿಸುವುದಕ್ಕೆ ವಿಎ, ಆರ್‌ಐ ಅಧಿಕಾರಿಗಳಿಗೆ ನೀವು ದೂರವಾಣಿ ಕರೆ ಮಾಡಿ ಹೇಳಬೇಕು ಎಂದರು. ಅದಕ್ಕೆ ನಾನು ಆ ರೀತಿ ಹೇಳಲು ಸಾಧ್ಯವಿಲ್ಲ. ಅಧಿಕಾರಿಗಳು ಸ್ಥಳ ಪರಿಶೀಲಿಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಾರೆ ಎಂದು ಹೇಳಿದೆ. ಅದಕ್ಕೆ ಅವರು ಅಧಿಕಾರಿಗಳು ಲಂಚ ಕೇಳುತ್ತಿದ್ದಾರೆ. ಅಂತವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡಿ, ಅವರ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ್ದೇನೆ. ಆದರೂ, ಅವರು ಒಬ್ಬ ಮಹಿಳಾ ತಹಸೀಲ್ದಾರ್‌ನೊಂದಿಗೆ ಹೇಗೆ ಮಾತನಾಡಬೇಕು ಎಂಬ ಅರಿವಿಲ್ಲದೇ ನನ್ನ ಕಚೇರಿಯಲ್ಲಿ ಬಾಯಿಗೆ ಬಂದಂತೆ ಮಾತನಾಡಿದ್ದಾರೆ.
> - ರತ್ನಾಂಬಿಕಾ, ತಹಸೀಲ್ದಾರ್.

ಕನ್ನಡ ಭಾಷಾ ಪದ ಸಂಪತ್ತನ್ನು ಉಳಿಸಬೇಕಿದೆ

ಕನ್ನಡ ಸಂಸ್ಕೃತಿ ಸೇವಾ ಭಾರತಿ ಸ್ಥಾಪಕ ಓಂಕಾರ ಪ್ರಿಯ



ಸರಗೂರು, ಸೆ20– ಕನ್ನಡ ಭಾಷೆ ಶ್ರೀಮಂತಿಕೆಯಿಂದ ಕೂಡಿದ್ದು, ಹೆಚ್ಚಾಗಿ ಬಳಸುವ ಮೂಲಕ ಕನ್ನಡ ಪದ ಸಂಪತ್ತನ್ನು ಉಳಿಸಬೇಕಿದೆ ಎಂದು ಕನ್ನಡ ಸಂಸ್ಕೃತಿ ಸೇವಾ ಭಾರತಿ ಸ್ಥಾಪಕ ಓಂಕಾರ ಪ್ರಿಯ ತಿಳಿಸಿದರು.

ಪಟ್ಟಣದ ಜೂನಿಯರ್ ಕಾಲೇಜು ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಸಂಸ್ಕೃತಿ ಸೇವಾ ಭಾರತಿಯಿಂದ ಕನ್ನಡಪದ ಸಂಪತ್ತಿನ ಕುರಿತು ಮಕ್ಕಳ ಕಮ್ಮಟ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆ ಸಮೃದ್ಧ ಭಾಷೆಯಾಗಿದ್ದು, ಒಂದೇ ಪದಕ್ಕೆ ಹಲವು ಅರ್ಥಗಳಿವೆ. ಆದರೆ ಇಂಗ್ಲಿಷ್ ಭಾಷೆಯಲ್ಲಿ ಇದನ್ನು ಕಾಣಲು ಸಾಧ್ಯವಿಲ್ಲವೆಂದು ಹಲವಾರು ಪದಗಳನ್ನು ಮಕ್ಕಳಿಗೆ ಉದಾಹರಣೆ ಕೊಟ್ಟರು. ವಿದ್ಯಾರ್ಥಿಗಳು ಶಾಲಾ ಕೊಠಡಿಯಲ್ಲಿ ಶ್ರದ್ಧೆಯಿಂದ ಪಾಠ ಕೇಳಬೇಕು. ಹಾಗೇ ನಾವು ಪಡೆಯುವ ಶಿಕ್ಷಣದ ಹಿಂದೆ ಗುರುಗಳ ಮತ್ತು ತಂದೆ ತಾಯಿ ಪರಿಶ್ರಮವನ್ನು ಮನಸ್ಸಿನಲ್ಲಿಟ್ಟುಕೊಂಡು ಓದಬೇಕು ಎಂದರು.

ಹೆಚ್.ಡಿ.ಕೋಟೆ ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿ, ನಗರ ಪ್ರದೇಶದಲ್ಲಿ ಕನ್ನಡ ಭಾಷೆ ಬಳಕೆ ಕಡಿಮೆಯಾಗಿ ಭಾಷೆಯ ಹಲವು ಪದಗಳು ಕಣ್ಮರೆಯಾಗಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಕನ್ನಡ ಭಾಷೆ ಹೆಚ್ಚಾಗಿ ಬಳಸುತ್ತಾರೆ. ಓಂಕಾರ ಪ್ರಿಯ ಅವರು ರಾಜ್ಯದ ಶಾಲಾ ಕಾಲೇಜುಗಳಲ್ಲಿ ಕನ್ನಡ ಪದ ಸಂಪತ್ತು ಕಾರ್ಯಕ್ರಮ ನಡೆಸುವ ಮೂಲಕ ವಿದ್ಯಾರ್ಥಿಗಳಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಿಸುತ್ತಿದ್ದಾರೆ. ಅವರ ಕನ್ನಡ ಸೇವೆ ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರಾಘವೇಂದ್ರ, ಸರಗೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಶಿಕ್ಷಕರಾದ ಜಿ.ನಾಗೇಶ್, ಸಣ್ಣಸೋಮಯ್ಯ ಸಂಜಯ್, ಯಮುನಾ, ಲೀಲಾವತಿ, ಶಿವಸ್ವಾಮಿ ಮತ್ತಿತರರಿದ್ದರು.

ಪಿ.ಪಟ್ಟಣ ಅಭಿವೃದ್ಧಿ: ಸಂಸದರಿಗೆ ಅಭಿನಂದನೆ



ಪಿರಿಯಾಪಟ್ಟಣ, ಸೆ20– ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಸದ ಪ್ರತಾಪ್ ಸಿಂಹ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ ತಿಳಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಲಜೀವನ್ ಮಿಷನ್ ಯೋಜನೆಯಡಿ 239 ಕೋಟಿ ರೂ. ವೆಚ್ಚದಲ್ಲಿ ತಾಲೂಕಿನ 303 ಗ್ರಾಮಗಳಿಗೆ ಕುಡಿಯುವ ನೀರು ಪೂರೈಕೆ. ಮುಳ್ಳುಸೋಗೆ ಏತ ನೀರಾವರಿ ಯೋಜನೆಯಿಂದ 150 ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಪಿರಿಯಾಪಟ್ಟಣದ 4 ಕಿ.ಮೀ ರಸ್ತೆ ಅಗಲೀಕರಣ, ಮೈಸೂರು–ಕುಶಾಲನಗರ ಬೈಪಾಸ್ ಯೋಜನೆ ಸೇರಿದಂತೆ ಪಟ್ಟಣದ ಅಭಿವೃದ್ಧಿಗೆ 136 ಕೋಟಿ ಅನುದಾನ ತಂದು ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಅಲ್ಲದೇ ತಂಬಾಕು ರೈತರ ದಂಡ ಕಡಿತ, ನಿಗದಿತ ಸಮಯಕ್ಕೆ ರಸಗೊಬ್ಬರ ಪೂರೈಕೆ ಹಾಗೂ ಸೂಕ್ತ ಬೆಲೆ ನಿಗದಿ ಪಡಿಸಿ ತಂಬಾಕು ರೈತರ ಪರ ಬೆಂಬಲಕ್ಕೆ ನಿಂತಿದ್ದಾರೆ. ಅಲ್ಲದೇ ತಾಲೂಕಿನ 34 ಗ್ರಾಪಂಗಳ ಕಟ್ಟಡ ನಿರ್ಮಾಣಕ್ಕೆ ಅಡಿಪಾಯ ಹಾಕುವ ಜೊತೆಗೆ ಶಾಲಾ ಕಟ್ಟಡ ನಿರ್ಮಾಣ ಸೇರಿದಂತೆ ನೂರಾರು ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಂಡಿರುವ ಸಂಸದ ಪ್ರತಾಪ್ ಸಿಂಹ ಅವರಿಗೆ ಪಕ್ಷದ ಹಾಗೂ ತಾಲೂಕಿನ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದ್ದಾರೆ.



ಹುಣಸೂರು ನಗರದ ಚಿಕ್ಕಹುಣಸೂರು ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಸಾಟ್ ಸಂಸ್ಥೆಯಿಂದ 40 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಕೊಠಡಿಗಳನ್ನು ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು. ಈ ವೇಳೆ ಒಸಾಟ್ ಸಂಸ್ಥೆ ಮುಖ್ಯಸ್ಥ ಪಿ.ವಿ.ಸುಬ್ರಮಣ್ಯ, ನಗರಸಭೆ ಅಧ್ಯಕ್ಷೆ ಗೀತಾ, ಸ್ಥಾಯಿ ಸಮಿತಿ ಅಧ್ಯಕ್ಷೆ ಶ್ವೇತಾ, ಸದಸ್ಯರಾದ ರಾಣಿ ಪೆರುಮಾಳ್, ಮಂಜು, ಮನು, ಬಿಇಓ ರೇವಣ್ಣ, ಬಿಆರ್‌ಸಿ ಸಂತೋಷ್ ಕುಮಾರ್, ಶಿಕ್ಷಕರಾದ ಗೋವಿಂದೇಗೌಡ, ನರಸಿಂಹ ಶಾಲೆ ಮುಖ್ಯಸ್ಥ ಸಿ.ಎಸ್.ಮಹೇಶ್, ಲಕ್ಷ್ಮಣ್ ಇನ್ನಿತರರಿದ್ದರು.

ಇಂದು ವಾರ್ಷಿಕ ಮಹಾಸಭೆ

ನಂಜನಗೂಡು, ಸೆ.20– ತಾಲೂಕಿನ ಕಳಲೆ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ವಾರ್ಷಿಕ ಮಹಾಸಭೆ ಸೆ.21 ರಂದು ಬೆಳಗ್ಗೆ 11 ಗಂಟೆಗೆ ಸಂಘದ ಕಚೇರಿಯಲ್ಲಿ ಅಧ್ಯಕ್ಷ ಕೆ.ಎಂ.ನಾಗರಾಜ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಿಇಓ ಕೆ.ಎಂ.ಸಿದ್ದನಾಯಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿ.ನರಸೀಪುರ ಕಸಬಾ ಪಿಎಸಿಎಸ್‌ಗೆ 3.57 ಲಕ್ಷ ರೂ. ಲಾಭ

ಸಂಘದ ಅಧ್ಯಕ್ಷ ಡಣನಾಯಕನಪುರ ಮಲ್ಲಣ್ಣ



ತಿ.ನರಸೀಪುರ, ಸೆ.20– ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಜೀವನಾಡಿಗಳಾಗಿದ್ದು, ಇವುಗಳ ಪ್ರಗತಿಗೆ ಆದ್ಯತೆ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿ. ಸಂಘದಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರು ಪಾವತಿಸಿದರೆ ಸಂಘ ಆರ್ಥಿಕಾಭಿವೃದ್ಧಿ ಹೊಂದಲು ಸಾಧ್ಯ ಎಂದು ಸಂಘದ ಅಧ್ಯಕ್ಷ ಡಣನಾಯಕನಪುರ ಮಲ್ಲಣ್ಣ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಭವನದಲ್ಲಿ ನಡೆದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘ 3.57 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಗ್ರಾಮೀಣ ಜನರಿಗೆ ಅನುಕೂಲವಾಗಿದ್ದು, ರೈತರು ಸಾಲ ಪಡೆದು ಕೃಷಿ ಚಟುವಟಿಕೆಗೆ ಕೈಗೊಂಡು ಆರ್ಥಿಕವಾಗಿ ಸುಬಲರಾಗಬಹುದು. ಹಾಗೆಯೇ ರೈತರು ಹಾಗೂ ಷೇರುದಾರರು ಸಂಘದಿಂದ ಪಡೆದ ಸಾಲವನ್ನು ಸುಸ್ತಿದಾರರಾಗದೇ ನಿಗದಿತ ಸಮಯಕ್ಕೆ ಮರುಪಾವತಿಸುವ ಮೂಲಕ ಸಂಘದ ಬೆಳವಣಿಗೆಗೆ ಸಹಕರಿಸಬೇಕು. ಸಂಘದಿಂದ 15 ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, ಮುಂದಿನ ತಿಂಗಳು ಪೂರ್ಣಗೊಳ್ಳಲಿದೆ. ಸಂಘದ ಅಭಿವೃದ್ಧಿಯೊಂದಿಗೆ ಸಹಕಾರ ಸಂಘವನ್ನು ಮತ್ತಷ್ಟು ಬೆಳೆಸಲು ಪ್ರಯತ್ನಿಸುತ್ತೇನೆ. ಇದಕ್ಕೆ ತಮ್ಮೆಲ್ಲರ ಸಹಕಾರ ಅಗತ್ಯ ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಕೆ.ನಂಜುಂಡಸ್ವಾಮಿ, ನಿರ್ದೇಶಕರಾದ ಟಿ.ಸಿ.ಫಣೀಶ್ ಕುಮಾರ್, ಅಂಗಡಿ ಎನ್.ಶೇಖರ್, ಮಹಾಲಿಂಗಪ್ಪ, ಡಿ.ಎಂ.ಶಿವಕುಮಾರ್, ದೊಡ್ಡ ಬಸವಯ್ಯ, ದಿವ್ಯಶ್ರೀ, ನಾಗರತ್ನ, ನಾಗಮ್ಮ, ಬಿ.ಚಂದ್ರಮ್ಮ, ಫ್ಯಾನ್ಸಿ ಮೋಹನ್, ತಿರುಮಕೂಡಲು ಲಕ್ಷ್ಮಣ, ಟಿಎಪಿಸಿಎಂಎಸ್ ನಿರ್ದೇಶಕ ಮೂಗೂರು ಜಯಣ್ಣ, ಮಾದಾಪುರ ಬಸವರಾಜು ಹಾಜರಿದ್ದರು.

> ಸದಸ್ಯರ ಸಹಕಾರದಿಂದ ಸಂಘ ಪ್ರಸಕ್ತ ಸಾಲಿನಲ್ಲಿ ಲಾಭಗಳಿಸಿ ಯಶಸ್ವಿಯಾಗಿ ಮುನ್ನಡೆದಿದೆ. ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿದ್ದರೂ, ರೈತರು ಕೃಷಿಯನ್ನೇ ಅವಲಂಬಿಸಿದ್ದಾರೆ. ಸರ್ಕಾರ ಕೂಡ ಅವರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ. ಇದನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳಬೇಕು. ಸಂಘದಿಂದ ನೀಡುವ ಸಾಲವನ್ನು ಹೈನುಗಾರಿಕೆ ಹಾಗೂ ನೀರಾವರಿ ಸೇರಿದಂತೆ ಇನ್ನಿತರೆ ಚಟುವಟಿಕೆಗೆ ಬಳಸಿಕೊಳ್ಳಬೇಕು.
> -ರಾಜಪ್ಪ, ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ.

ಹೃದಯಾಘಾತದಿಂದ ಎತ್ತು ಸಾವು



ಹುಲ್ಲಹಳ್ಳಿ, ಸೆ.20– ಹೃದಯಾಘಾತದಿಂದ ಎತ್ತು ಸಾವನ್ನಪ್ಪಿರುವ ಘಟನೆ ಹುಲ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೈತ ಶ್ರೀಕಂಠಯ್ಯ ಅವರಿಗೆ ಸೇರಿದ ಎತ್ತು ಸಾವನ್ನಪ್ಪಿರುವುದು. ಇವರು ತಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ವೇಳೆ ಎತ್ತು ಕುಸಿದು ಬಿದ್ದಿದೆ. ಈ ವೇಳೆ ತಕ್ಷಣ ವೈದ್ಯರಿಗೆ ವಿಷಯ ಮುಟ್ಟಿಸಲಾಗಿ ಸ್ಥಳಕ್ಕಾಗಮಿಸಿದ ಪಶುವೈದ್ಯ ನಟರಾಜ್ ಪರಿಶೀಲನೆ ನಡೆಸಿ, ಎತ್ತು ಹೃದಯಾಘಾತದಿಂದ ಸಾವನ್ನಪ್ಪಿದೆ. ಜೀವನಕ್ಕೆ ಆಧಾರವಾಗಿದ್ದ ಎತ್ತು ಸಾವಿನಿಂದ ದಿಕ್ಕೆ ತೋಚದಂತಾಗಿದ್ದು, ಅಧಿಕಾರಿಗಳು ಸೂಕ್ತ ಪರಿಹಾರ ನೀಡುವಂತೆ ರೈತ ಶ್ರೀಕಂಠಯ್ಯ ಮನವಿ ಮಾಡಿದ್ದಾರೆ.



ಹುಣಸೂರು ತಾಲೂಕಿನ ಹಿರಿಕ್ಯಾತನಹಳ್ಳಿಯಲ್ಲಿ ಇತ್ತೀಚೆಗೆ ನಾಲೆಯಲ್ಲಿ ಬಟ್ಟೆ ತೊಳೆಯಲು ಹೋಗಿ ಸಾವನ್ನಪ್ಪಿದ ಮಹಿಳೆಯ ಮನೆಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ವೇಳೆ ರಾಜ್ಯ ಕೆಎಂಎಫ್ ನಿರ್ದೇಶಕ ಕುಮಾರ್, ನಗರಸಭಾ ಸದಸ್ಯ ಸತೀಶ್, ಟಿಎಪಿಸಿಎಂಎಸ್ ಅಧ್ಯಕ್ಷ ಕೆಂಪೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜ್, ಮುಖಂಡರಾದ ವಸಂತ್ ಕುಮಾರ್, ಆನಂದ್ ಇತರರಿದ್ದರು.



ತಿ.ನರಸೀಪುರದ ಶ್ರೀಕಾಳಿಕಾಂಭ ದೇವಸ್ಥಾನದಲ್ಲಿ ವಿಶ್ವಕರ್ಮ ಜಯಂತಿ ಅಂಗವಾಗಿ ವಿಶ್ವಕರ್ಮ ಜಯಂತೋತ್ಸವ ತಾಲೂಕು ಸಮಿತಿ ಸದಸ್ಯರು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಬನ್ನೂರು ಪ್ರಭಾಕರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಕೆ.ಎಸ್.ಸಿದ್ದರಾಜು, ಪುಟ್ಟಸ್ವಾಮಾಚಾರ್, ಸಿದ್ದಪ್ಪ, ಚೆಲುವರಾಜು, ನಾಗರಾಜಾಚಾರ್, ರಾಜು, ಜಿ.ಕೆ.ಜಯರಾಂ, ಬಸವರಾಜು, ಸಿದ್ದಪ್ಪಾಜಿ, ಚೆಲುವಾಚಾರ್, ಗಜೇಂದ್ರ ಮಹೇಶ್, ರಾಜಶೇಖರ್, ಸಿದ್ದಪ್ಪಾಜಿ, ಎ.ಎಂ.ಬಾಬು, ನಂದೀಶ, ಹೇಮಂತ್, ರಾಜು, ಮಂಜು, ಮಹದೇವಸ್ವಾಮಿ, ಸಿದ್ದು, ಗಿರೀಶ್ ಮತ್ತಿತರರಿದ್ದರು.



ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಮೈಸೂರು

ನಂ.1059, ಸಪ್ತಮಾತೃಕ ಚಿಟ್ಸ್ ಪ್ರೈ. ಲಿ., ಪಕ್ಕ, ಅಭಿಷೇಕ್ ಸರ್ಕಲ್ ಹತ್ತಿರ, ವಿಜಯನಗರ ಮುಖ್ಯರಸ್ತೆ, ಹೆಬ್ಬಾಳು, ಮೈಸೂರು–570016

ವಾರ್ಷಿಕ ಮಹಾಸಭೆ

ಫಾಲ್ಕನ್ ಟೈರ್ಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 24–09–2022 ರಂದು ಶನಿವಾರ ಬೆಳಿಗ್ಗೆ 10:30 ರ ವೇಳೆಗೆ ಸಮುದಾಯ ಭವನ ಶ್ರೀ ವಿದ್ಯಾಗಣಪತಿ ದೇವಸ್ಥಾನದ ಆವರಣ, ಸುಬ್ರಹ್ಮಣ್ಯನಗರ, ಹುಡ್ಕೋ 3ನೇ ಹಂತ, ಸಿ.ಐ.ಟಿ.ಬಿ ಛತ್ರದ ಎದುರು, ಹೆಬ್ಬಾಳ್, ಮೈಸೂರು – 570016 ಇಲ್ಲಿ ಏರ್ಪಡಿಸಲಾಗಿದೆ. ಆದ್ದರಿಂದ ಸಂಘದ ಸದಸ್ಯರೆಲ್ಲರೂ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ವಿಷಯ ಸೂಚನೆ: ಸಭೆಯ ನೋಟೀಸ್ ಅನ್ನು ಅಂಚೆ ಮೂಲಕ ಕಳುಹಿಸಲಾಗಿದೆ

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,

ಮೈಸೂರು ಅರಮನೆ ಮಂಡಳಿ, ಮೈಸೂರು

Ph: 0821-2421051, Fax: 2434425, e-mail : ddmysorepalace@gmail.com, GST :29AAAGM0484M1ZX

ಟೆ.ಸಂ.: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್–06/2022–23, ದಿನಾಂಕ: 19.09.2022

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ–ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ 01 ದಸರಾ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಒಟ್ಟು ರೂ.15.12 ಲಕ್ಷಗಳ ಕೆಲಸಕ್ಕೆ ಟೋಪಿಗಳನ್ನು ಸರಬರಾಜು ಮಾಡಿ ಅನುಭವವಿರುವ ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು 1) ವಿದ್ಯುನ್ಮಾನ (ಇ–ಪ್ರಕ್ಯೂರ್‌ಮೆಂಟ್) ವ್ಯವಸ್ಥೆ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 26.09.2022 ಸಂಜೆ 4.40 ಗಂಟೆಯವರೆಗೆ. 2) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 27.09.2022 ಸಂಜೆ 4.45 ಗಂಟೆಗೆ. ಈ ಹಿಂದಿನ ಐದು ವರ್ಷಗಳಲ್ಲಿ ಕನಿಷ್ಟ ಒಂದು ವರ್ಷವಾದರೂ ಕನಿಷ್ಠ ಹತ್ತು ಸಾವಿರ ಟೋಪಿಗಳನ್ನು ಸರಬರಾಜು ಮಾಡಿ ಹಾಗೂ ಸದರಿ ಕೆಲಸದಲ್ಲಿ ಅನುಭವವಿರುವ ಗುತ್ತಿಗೆದಾರರನ್ನು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ http://www.eproc.karnataka.gov.in ಅಂತರ್‌ಜಾಲದಲ್ಲಿ ಅಥವಾ ಉಪ ನಿರ್ದೇಶಕರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು ರಲ್ಲಿ ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದು.

ಸಹಿ/– ಉಪ ನಿರ್ದೇಶಕರು

DIPR/DDMYS/MCA/504/2022-23

ಕಾಣೆಯಾಗಿದ್ದಾರೆ



ಮೈಸೂರು ತಾಲ್ಲೂಕು ಇಲವಾಲ ಹೋಬಳಿಯ ಮಾದಗಳ್ಳಿ ಗ್ರಾಮದ ಲೇಟ್ ದ್ಯಾವಯ್ಯ ಅವರ ಮಗ **ಮರಿಸ್ವಾಮಿ ನಾಯಕ** ಅವರು ಸೆ. 16 ರಂದು ಮನೆಯಿಂದ ಕಾಣೆಯಾಗಿದ್ದಾರೆ. ಇವರು ಮಾನಸಿಕ ಅಸ್ವಸ್ಥರಾಗಿದ್ದು, ಕಪ್ಪಗಿದ್ದಾರೆ. ಸುಮಾರು 5 1/2 ಅಡಿ ಎತ್ತರ, ವಯಸ್ಸು, 67 ವರ್ಷ, ಮನೆ ಮಿಶ್ರಿತ ಬಿಳಿ ಅಂಗಿ ಧರಿಸಿದ್ದಾರೆ. ಪ್ಯಾಂಟ್ ಬೂದು ಬಣ್ಣದ್ದಾಗಿದ್ದು, ಕಪ್ಪು ಮತ್ತು ಬಿಳಿ ಮಿಶ್ರಿತ ತಲೆ ಹಾಗೂ ಗಡ್ಡದ ಕೂದಲುಗಳನ್ನು ಹೊಂದಿದ್ದಾರೆ.

ಇವರನ್ನು ಕಂಡವರು ಕೆಳಕಂಡ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಲು ಕೋರಲಾಗಿದೆ.

ಮೊ.: 9591330567 9482658381

ಅಥವಾ ಇಲವಾಲ ಪೊಲೀಸ್ ಠಾಣೆ

ದೂ.: 0821–2402222

ಇಲ್ಲವೇ ಯಾವುದಾದರೂ ಹತ್ತಿರದ ಪೊಲೀಸ್ ಠಾಣೆ ಸಂಪರ್ಕಿಸಲು ಕೋರಲಾಗಿದೆ.

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316

ದೂರವಾಣಿ: 08226-234848 E-mail: admnchamul@gmail.com

2021–2022 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ 2021–2022 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ 23.09.2022 ರ ಶುಕ್ರವಾರ ಬೆಳಿಗ್ಗೆ 11.30 ಘಂಟೆಗೆ ಒಕ್ಕೂಟದ ಆಡಳಿತ ಕಛೇರಿ ಆವರಣ, ಕುದೇರು ಗ್ರಾಮ, ಚಾಮರಾಜನಗರ ಜಿಲ್ಲೆ ಇಲ್ಲಿ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ.ವೈ.ಸಿ.ನಾಗೇಂದ್ರ ರವರ ಅಧ್ಯಕ್ಷತೆಯಲ್ಲಿ** ಏರ್ಪಡಿಸಲಾಗಿದ್ದು, ಸದಸ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳು ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ಸೂಚನಾ ಪತ್ರವನ್ನು ಎಲ್ಲಾ ಸದಸ್ಯ ಸಂಘಗಳಿಗೆ ಅಂಚೆ/ಮುದ್ದಾಂ ಮೂಲಕ ಕಳುಹಿಸಿಕೊಡಲಾಗಿದೆ. ಸೂಚನಾ ಪತ್ರ ತಲುಪದಿದ್ದಲ್ಲಿ ಇದನ್ನೇ ಸಾಮಾನ್ಯ ಸಭೆಯ ಅಧಿಕೃತ ಸೂಚನಾ ಪತ್ರವೆಂದು ಪರಿಗಣಿಸುವುದು.

ದಿನಾಂಕ: 20.09.2022
ಸ್ಥಳ : ಕುದೇರು

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಶ್ರೀ ಭಾನು ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ)

(ಬೆಂಗಳೂರು ಪ್ರಾಂತ ಮತ್ತು ಮೈಸೂರು ಪ್ರಾಂತ), ನಂ.6, ಹರೀಶ್ ಕಾಂಪ್ಲೆಕ್ಸ್, ಹೆಬ್ಬಾಳು ಮುಖ್ಯ ರಸ್ತೆ, ಲೋಕ ನಾಯಕ ನಗರ, ಮೈಸೂರು.

ವಾರ್ಷಿಕ ಮಹಾ ಸಭೆ

ದಿನಾಂಕ: 22–09–2022 ರ ಗುರುವಾರ ಬೆಳಿಗ್ಗೆ 11–00 ಗಂಟೆಗೆ, 2021–22ನೇ ಸಾಲಿನ 13ನೇ ವರ್ಷದ ವಾರ್ಷಿಕ ಮಹಾ ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಹೆಚ್.ಎಸ್.ಕೋಳಾಲಗೌಡ ರವರ ಅಧ್ಯಕ್ಷತೆಯಲ್ಲಿ ಮೈಸೂರು ನಗರದ ಜೆಎಲ್‌ಬಿ ರೋಡ್, ರೋಟರಿ ಭವನದ ದೇವೇಗೌಡ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದೇ ಇರುವ ಸದಸ್ಯರುಗಳು ಈ ಪ್ರಕಟಣೆಯನ್ನು ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ವಾರ್ಷಿಕ ಮಹಾಸಭೆಗೆ ತಪ್ಪದೇ ಹಾಜರಾಗಬೇಕೆಂದು ಈ ಮೂಲಕ ಕೋರಲಾಗಿದೆ. ದೂರವಾಣಿ: 7619439822 / 7848950882 / 9740899708

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಅಕ್ಷತಾ.ಪಿ, ಕಾರ್ಯದರ್ಶಿ

